بِسْمِ اللّٰهِ الرَّحْمٰنِ الرَّحِيْمِ    نَحْمَدُهٗ وَنُصَلِّيْ عَلٰى رَسُوْلِهِ الْكَرِيْمِ    وَعَلٰى عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ವರ್ಷ: 03

ಕನ್ನಡ ಬದರ್ ವಾರ ಪತ್ರಿಕೆ
WEEKLY BADAR QADIAN KANNADA

ಸಂಚಿಕೆ: 26

ವಾರ್ಷಿಕ ಶುಲ್ಕ ರೂ.575/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

30 ಜೂನ್ 2022, 30 ಇಹ್ಸಾನ್ 1401 ಹಿಜರಿ ಶಮ್ಸಿ,
29 ಧ಼ಿಲ್ ಖಅ್‌ದಃ 1443 ಹಿಜರಿ ಖಮರಿ.


## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ- **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ

## ಅಲ್ಲಾಹನ ಉಪದೇಶ

وَكَذَّبَ بِهٖ قَوْمُكَ وَهُوَ الْحَقُّ ؕ
قُلْ لَّسْتُ عَلَيْكُمْ بِوَكِيْلٍ

**(ಅಲ್ ಅನ್‌ಆಮ್ : 67)**

**ಅಂದರೆ: ಇದು ಸತ್ಯವಾದರೂ ನಿನ್ನ ಜನರು ಇದನ್ನು ತಿರಸ್ಕರಿಸಿದರು. ಹೇಳು: 'ನಾನು ನಿಮ್ಮ ಮೇಲೆ ಹೊಣೆಗಾರನಲ್ಲ.'**

## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

### ಸಹಾಬ(ರ) ರವರು ವ್ಯಾಪಾರವನ್ನು ಸಂಪೂರ್ಣ ಪ್ರಾಮಾಣಿಕತೆಯಿಂದ ಮಾಡುತ್ತಿದ್ದರು

**(2059)** ಹಝ್ರತ್ ಅಬು ಹುರೈರಾ(ರ) ಅವರು ವರದಿ ಮಾಡುತ್ತಾರೆ ಪ್ರವಾದಿ(ಸ) ಹೇಳಿದರು: ಜನರು ತಮ್ಮ ಗಳಿಕೆಯನ್ನು ಹಲಾಲ್ ಅಥವಾ ಹರಾಮ್ ಎಂದು ಚಿಂತಿಸದ ಕಾಲ ಬರುವುದು.

**(ವಿವರಣೆ)** ಈ ಹದೀಸ್‌ನ ವ್ಯಾಖ್ಯಾನದಲ್ಲಿ, ಹಝ್ರತ್ ಸೈಯದ್ ಝೈನ್-ಉಲ್-ಅಬಿದೀನ್ ವಲಿಯುಲ್ಲಾ ಶಾ ಸಾಹಿಬ್ ಹೇಳುತ್ತಾರೆ: **ಮಲ್ಲಮ್ ಯುಬಾಲಿ ಮಿನ್ ಹೈಸು ಕಸಬಲ್ ಮಾಲಿ:** ತನ್ನ ವ್ಯಾಪಾರದಲ್ಲಿ ಹಲಾಲ್ ಮತ್ತು ಹರಾಮ್‌ನ ಬಗ್ಗೆ ಯಾರು ಚಿಂತಿಸುವುದಿಲ್ಲವೊ ಅವನ ವ್ಯಾಪಾರವು ಎಂದಿಗೂ ಅನುಗ್ರಹದಾಯಕವಾಗುವುದಿಲ್ಲ. ಪ್ರವಾದಿ ಮುಹಮ್ಮದ್(ಸ) ಅವರು ಹಲಾಲ್ ಮತ್ತು ಹರಾಮ್ ಅನ್ನು ಪರಿಗಣನೆಗೆ ತೆಗೆದುಕೊಳ್ಳದ ಸಮಯ ಬರುತ್ತದೆ ಎಂದು ಯಾವ ಕಾಲದಲ್ಲಿ ಭವಿಷ್ಯವಾಣಿ ನುಡಿದಿದ್ದರು ಎಂದರೆ, ಆ ಕಾಲದಲ್ಲಿ ಸಹಾಬರವರು ತಮ್ಮ ವ್ಯಾಪಾರವನ್ನು ಸಂಪೂರ್ಣ ಪ್ರಾಮಾಣಿಕತೆಯಿಂದ ಮಾಡುತ್ತಿದ್ದರು. ಅದು ಪ್ರವಾದಿ ಮುಹಮ್ಮದ್(ಸ) ಅವರ ತರಬೇತಿಯ ಫಲಿತಾಂಶವಾಗಿತ್ತು.

**(ಸಾಹಿಹ್ ಬುಖಾರಿ, ಸಂಪುಟ-4, ಕಿತಾಬ್ ಅಲ್-ಬಯೌ, 2008 ಖಾದಿಯಾನ್)**

## ಒರ್ವ ಮುತ್ತಖೀಯ ಯಾವ ಪ್ರಾರ್ಥನೆಯೂ ಸ್ವೀಕಾರ ವಾಗದೇ ಇರುವುದಿಲ್ಲ, ಅಲ್ಲಾಹನ ಆತ್ಮೀಯ ದಾಸನೋರ್ವ ತನ್ನ ದೌರ್ಬಲ್ಯ, ತಪ್ಪು ಮತ್ತು ಅಜ್ಞಾನತೆಯಿಂದ ತನಗೆ ಹಾನಿಕಾರ ವಿಷಯ ಬಗ್ಗೆ ಪ್ರಾರ್ಥಿಸಿದರೆ ಅಂತಹ ಪ್ರಾರ್ಥನೆಯನ್ನು ಅಲ್ಲಾಹನು ರದ್ದುಗೊಳಿಸಿ ಅದಕ್ಕಿಂತ ಉತ್ತಮವಾದದ್ದನ್ನು ಅವನಿಗೆ ನೀಡುತ್ತಾನೆ.

**ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು**

ಪ್ರಾರ್ಥನೆಗಳನ್ನು ಸ್ವೀಕರಿಸುವ ಅನುಗ್ರಹವನ್ನು ಮುತ್ತಖಿಯರಿಗೆ ನೀಡಲಾಗುತ್ತದೆ. ಮುತ್ತಖಿಯು ಯಾರೆಂದು ಈಗ ನಾನು ಹೇಳುತ್ತೇನೆ. ಆದಾಗ್ಯೂ, ಇನ್ನೊಂದು ಅನುಮಾನವನ್ನು ಹೋಗಲಾಡಿಸುವುದು ಅಗತ್ಯವೆಂದು ನಾನು ಭಾವಿಸುತ್ತೇನೆ ಮತ್ತು ಅದು ಏನೆಂದರೆ ಕೆಲವು ಮುತ್ತಖಿಯರ ಕೆಲವು ಪ್ರಾರ್ಥನೆಗಳು ಅವರ ಉದ್ದೇಶಗಳಿಗೆ ಅನುಗುಣವಾಗಿ ಈಡೇರುವುದಿಲ್ಲ. ಇದು ಏಕೆ ಸಂಭವಿಸುತ್ತದೆ? ಅವರ ಯಾವುದೇ ಪ್ರಾರ್ಥನೆಗಳು ನಿಜವಾಗಿಯೂ ವ್ಯರ್ಥವಾಗುವುದಿಲ್ಲ ಎಂದು ನೆನಪಿನಲ್ಲಿಟ್ಟುಕೊಳ್ಳುವುದು ಯೋಗ್ಯವಾಗಿದೆ, ಆದರೆ ಮನುಷ್ಯನು ಅದೃಶ್ಯ ಜ್ಞಾನಿಯಲ್ಲ ಮತ್ತು ಈ ಪ್ರಾರ್ಥನೆಯ ಫಲಿತಾಂಶಗಳು ಅವನ ಮೇಲೆ ಯಾವ ಪರಿಣಾಮ ಬೀರುತ್ತವೆ ಎಂದು ಅವನಿಗೆ ತಿಳಿದಿಲ್ಲ. ಆದ್ದರಿಂದ, ಸರ್ವಶಕ್ತನಾದ ಅಲ್ಲಾಹನು ಪರಿಪೂರ್ಣ ಕರುಣೆ ಹಾಗೂ ದಯೆಯಿಂದ ಈ ಪ್ರಾರ್ಥನೆಯನ್ನು ತನ್ನ ದಾಸನಿಗೆ ಉಪಯುಕ್ತ ಮತ್ತು ಫಲಪ್ರದವಾಗುವ ರೀತಿಯಲ್ಲಿ ತಿಳಿಸುತ್ತಾನೆ. ಪ್ರೌಢವಲ್ಲದ ಮಗು ಸುಂದರವಾದ ಮತ್ತು ಮೃದುವಾದ ವಸ್ತುವಾಗಿ ಹಾವನ್ನು ಹಿಡಿಯಲು ಧೈರ್ಯಮಾಡಿದರೆ, ಅಥವಾ ಬೆಂಕಿಯನ್ನು ನೋಡಿ ತನ್ನ ತಾಯಿಯಲ್ಲಿ ಅದನ್ನು ಕೇಳಿದರೆ, ತಾಯಿಯು ಎಷ್ಟು ಅಜ್ಞಾನಿಯಾಗಿದ್ದರೂ ಆ ಮಗು ಬಯಸಿದಂತೆ ಹಾವನ್ನು ಹಿಡಿಯಲು ಅಥವಾ ಅವನ ಕೈಯಲ್ಲಿ ಪ್ರಕಾಶಮಾನವಾದ ಬೆಂಕಿಯ ಕಲ್ಲಿದ್ದಲನ್ನು ಹಾಕಲು ಅವಳು ಬಯಸುತ್ತಾಳೆಯೇ? ಖಂಡಿತ ಇಲ್ಲ, ಏಕೆಂದರೆ ಅದು ಅವನ ಜೀವನವನ್ನು ಹಾಳುಮಾಡುತ್ತದೆ ಎಂದು ಅವಳು ತಿಳಿದಿದ್ದಾಳೆ. ಅದೇ ರೀತಿಯಾಗಿ ಅದೃಶ್ಯಗಳ ಜ್ಞಾನಿ ಮತ್ತು ಕರುಣಾಮಯಿಯಾದ ತಾಯಿಗಿಂತಲು ಹೆಚ್ಚು ಕರುಣೆ ತೋರುವವನಾದ ಸರ್ವಶಕ್ತನಾದ ಅಲ್ಲಾಹನು ತನ್ನ ಈ ಆತ್ಮೀಯ ದಾಸನು ತನ್ನ ದೌರ್ಬಲ್ಯ, ತಪ್ಪು ಮತ್ತು ಅಜ್ಞಾನದಿಂದ ತನಗೆ ಹಾನಿಕರವಾದದ್ದಕ್ಕೆ ಪ್ರಾರ್ಥಿಸಿದರೆ, ಅವನು ತಕ್ಷಣ ಈ ಪ್ರಾರ್ಥನೆಯನ್ನು ಸ್ವೀಕರಿಸಲು ಹೇಗೆ ಸಾಧ್ಯ? ಖಂಡಿತವಾಗಿಯು ಇಲ್ಲ, ಅವನು ಅದನ್ನು ತಿರಸ್ಕರಿಸುತ್ತಾನೆ ಮತ್ತು ಅದನ್ನು ಇನ್ನೂ ಉತ್ತಮವಾಗಿ ನೀಡುತ್ತಾನೆ ಮತ್ತು ಅದು ನನ್ನ ಪ್ರಾರ್ಥನೆಯ ಪರಿಣಾಮ ಮತ್ತು ಫಲಿತಾಂಶ ಎಂದು ಅವನು ಅರ್ಥಮಾಡಿಕೊಳ್ಳುತ್ತಾನೆ. ಅವರಿಗೆ (ಮುತ್ತಖೀಯರ) ತನ್ನ ತಪ್ಪಿನ ಬಗ್ಗೆಯೂ ಅರಿವಾಗುತ್ತದೆ. ಆದ್ದರಿಂದ, ಮುತ್ತಖೀಯರ (ಧರ್ಮನಿಷ್ಠರ) ಕೆಲವು ಪ್ರಾರ್ಥನೆಗಳನ್ನು ಸಹ ಸ್ವೀಕರಿಸುವುದಿಲ್ಲ ಎಂದು ಹೇಳುವುದು ಸಂಪೂರ್ಣವಾಗಿ ತಪ್ಪಾಗಿದೆ. ಇಲ್ಲ, ಅವರ ಪ್ರತಿಯೊಂದು ಪ್ರಾರ್ಥನೆಯನ್ನು ಸ್ವೀಕರಿಸಲಾಗುತ್ತದೆ. ಹೌದು, ಅವರು ತಮ್ಮ ದೌರ್ಬಲ್ಯದಿಂದ ಹಾಗೂ ಅಜ್ಞಾನದಿಂದ ಅವರಿಗೆ ಹಾನಿವುಂಟು ಮಾಡುವ ಪ್ರಾರ್ಥನೆ ಮಾಡಿದರೆ ಸರ್ವಶಕ್ತನಾದ ಅಲ್ಲಾಹನು ಈ ಪ್ರಾರ್ಥನೆಗೆ ಪ್ರತಿಯಾಗಿ ಅವರಿಗೆ ಉತ್ತಮವಾದನ್ನು ನೀಡುತ್ತಾನೆ.

**(ಮಲ್‌ಫೂಝಾತ್, ಸಂಪುಟ-1, ಪುಟ-378, 2018 ಖಾದಿಯಾನ್)**

## ಮಾನವ ಜೀವನವು ಈ ಜಗತ್ತಿನಲ್ಲಿ ಮಾತ್ರ ಕೊನೆಗೊಂಡರೆ ಸರ್ವಶಕ್ತನಾದ ಅಲ್ಲಾಹನು ಇಷ್ಟು ದೊಡ್ಡ ಜಗತ್ತನ್ನು ಸೃಷ್ಟಿಸಿದಂತಿದೆ ಮನುಷ್ಯನು ಅದರಲ್ಲಿ ಹುಟ್ಟುತ್ತಾನೆ, ಕೆಲವು ದಿನಗಳವರೆಗೆ ತಿನ್ನುತ್ತಾನೆ ಮತ್ತು ನಂತರ ಸಾಯುತ್ತಾನೆ ಮತ್ತು ಈ ಕಲ್ಪನೆಯು ಸಂಪೂರ್ಣವಾಗಿ ವಿವೇಕಕ್ಕೆ ವಿರುದ್ಧವಾಗಿದೆ

ಸಯ್ಯದುನಾ ಹಝ್ರತ್ ಮುಸ್ಲಿಹ್ ಮೌಊದ್(ರ) ಸೂರಃ ಅಲ್‌ಹಜರ್: 86 **ವಮಾ ಖಲಖ್ನಸ್ಸಮಾವಾತಿ ವಲ್ ಅರ್ಝ ವಮಾ ಬೈನಹುಮಾ ಇಲ್ಲಾ ಬಿಲ್ ಹಖ್ಖಿ; ವ ಇನ್ನಸ್ಸಾಅತ ಲಆತಿಯತುನ್ ಫಸ್‌ಫಹಿಸ್ಸಫ್‌ಹಲ್ ಜಮೀಲ್** ನ ವ್ಯಾಖ್ಯಾನ ಮಾಡುತ್ತ ಹೇಳುತ್ತಾರೆ:

ಅಂದರೆ, ಆಕಾಶ ಮತ್ತು ಭೂಮಿಯ ಸೃಷ್ಟಿಯನ್ನು ಪರಿಗಣಿಸಿ, ಅದು ಅರ್ಥಹೀನವೆಂದು ತೋರುತ್ತದೆಯೇ? ಅದರ ಕಾರ್ಖಾನೆಯನ್ನು ನೋಡುವ ಮೂಲಕ, ಪ್ರತಿಯೊಬ್ಬ ಬುದ್ಧಿವಂತ ವ್ಯಕ್ತಿಯು ಅಂತಹ ದೊಡ್ಡ ವ್ಯವಸ್ಥೆಯ ಉದ್ದೇಶವನ್ನು ಅರ್ಥಮಾಡಿಕೊಳ್ಳಬಹುದು ಮತ್ತು ಸಾಅತ್(ಘಳಿಗೆಯು) ಖಂಡಿತವಾಗಿಯೂ ಬರಲಿದೆ ಎಂದು ಅದರಿಂದ ನಿರ್ಣಯಿಸಬಹುದು. ಸಾಅತ್ ಎಂಬ ಪದವನ್ನು ಖಿಯಾಮತ್‌ಗಾಗಿ (ಪುನರುತ್ಥಾನಕ್ಕಾಗಿ) ಉಪಯೋಗಿಸಲಾಗಿದೆ ಮತ್ತು ಪ್ರವಾದಿಗಳ ಶತ್ರುಗಳ ನಾಶಕ್ಕಾಗಿ ಮತ್ತು ಅವರ ಅನುಯಾಯಿಗಳ ಅಭಿವೃದ್ಧಿಗೆ ಉದ್ದೇಶಿಸಲಾದ ನಿಗದಿತ ಸಮಯಕ್ಕಾಗಿ ಬಳಸಲಾಗುತ್ತದೆ. ಈ ಆಯತ್‌ನ ಮೊದಲ ಭಾಗವು

*(ಪುಟ ಸಂಖ್ಯೆ-10 ರಲ್ಲಿ ಮುಂದುವರಿಸಲಾಗಿದೆ)*

لَآ اِلٰهَ اِلَّا اللّٰهُ مُحَمَّدٌ رَّسُوْلُ اللّٰهِ

## ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬಹುಮಾನದ ಪಂಥಾಹ್ವಾನ

**ಹರ್ ಮುಖಾಲಿಫ್ ಕೊ ಮುಖಾಬಿಲ್ ಪೆ ಬುಲಾಯ ಹಮ್ ನೇ**

ಎಲ್ಲಾ ವಿರೋಧಿಯರನ್ನು ಪ್ರತಿವಾದಿಸಲು ಆಹ್ವಾನಿಸಿದೆವು ನಾವು.

اِنَّ السُّمُوْمَ لَشَرُّ مَا فِي الْعَالَمِ ۞ شَرُّ السُّمُوْمِ عَدَاوَةُ الصُّلَحَاءِ

### ಪೀರ್ ಮಹರ್ ಶಾಹ್ ಅವರಿಗೆ ಸೂರಃ ಫಾತಿಹ ತಫ್ಸೀರ್ ಬರೆಯಲು ಪಂಥಾಹ್ವಾನ. ವಿಜಯಿಯಾದ ಪಕ್ಷದಲ್ಲಿ ಐದು ನೂರು ರೂಪಾಯಿ ನಗದು ಬಹುಮಾನ ನೀಡುವ ವಾಗ್ದಾನ.

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಈ ವೈಭವಯುತ ಬಹುಮಾನದ ಪಂಥಾಹ್ವಾನ ನಾವು ಅವರ ಗ್ರಂಥ "ಅರ್‌ಬಈನ್ ನಂಬರ್-4) ರೂಹಾನಿ ಖಝಾಈನ್ ಸಂಪುಟ 17 ರಿಂದ ಪ್ರಸ್ತುತಪಡಿಸುತ್ತಿದ್ದೇವೆ. ಹಝ್ರತ್ ಮಸೀಹ್ ಮೌಊದ್(ಅ) ತಮ್ಮನ್ನು ಹಗಲಿರುಳು ವಿರೋಧಿಸುತ್ತಿರುವವರಿಗೆ, ತಮ್ಮನ್ನು ಕಾಫಿರ್, ಸುಳ್ಳುವಾದಿ ಎನ್ನುವವರಿಗೆ, ಸ್ವಯಂ ತಮ್ಮನ್ನು ದೊಡ್ಡ ಪಂಡಿತರೆಂದು ಅಂದುಕೊಳ್ಳುತ್ತಿದ್ದವರಿಗೆ, ಮಸೀಹರನ್ನು(ಅ) ಅಜ್ಞಾನಿ, ಮೂಢರು ಎನ್ನುತ್ತಿದ್ದವರಿಗೆ ಹಝ್ರತ್ ಮಸೀಹ್ ಮೌಊದ್(ಅ) ಹಲವು ಸಲ ಅರಬಿಯ ವಾಕ್ಚಾತುರ್ಯ ವ್ಯಕ್ತಪಡಿಸಲು ಬರೆಯಲು ಆಹ್ವಾನಿಸಿದರು. ಆದರೆ ಯಾರಿಗೂ ಧೈರ್ಯ ಆಗಲಿಲ್ಲ. ಮಸೀಹರ(ಅ) ಕಡು ವಿರೋಧಿಗಳಲ್ಲೊಬ್ಬರಾಗಿದ್ದ ಪೀರ್ ಮಹರ್ ಅಲಿ ಶಾಹ್ ಅವರನ್ನು ತಮ್ಮ ಎದುರಿಸಲು ಅಹ್ವಾನಿಸಿದರು. ಅವರಿಗೆ ಖುರ್‌ಆನ್ ತಿಳುವಳಿಕೆಯ ದಾವೆಯೂ ಇತ್ತು. ಆದ ಕಾರಣ ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಅವರು ಅರಬ್ಬಿಯಲ್ಲಿ ಪವಿತ್ರ ಖುರ್‌ಆನ್‌ನ ತಫ್ಸೀರ್ (ವ್ಯಾಖ್ಯಾನ) ಬರೆಯಲು ಅವರನ್ನು ಆಹ್ವಾನಿಸಿದರು. ಪೀರ್ ಮಹರ್ ಅಲಿ ಶಹ್ ಗೋಲ್ಡವಿ ಮತ್ತು ಅವರಂತಹ ಉಲಮಾಗಳ ಕಾರ್ಯ ಹಗಲಿರುಳು ಜನಸಾಮಾನ್ಯರನ್ನು ಮಸೀಹರ(ಅ) ವಿರುದ್ಧ ಪ್ರಚೋದಿಸುವುದು ಸುಳ್ಳು ಮೋಸಗಾರಿಕೆಯಿಂದ ಅವರ ದಾರಿ ತಪ್ಪಿಸುವುದೇ ಆಗಿತ್ತು. ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಅವರು ಅಂತಹವರಿಗೆ ಪಂಥಾಹ್ವಾನ ನೀಡುವ ಉದ್ದೇಶ ಜನರಿಗೆ ವಾಸ್ತವ ರೂಪ ತಿಳಿಸುವುದಾಗಿತ್ತು. ಹಝ್ರುತ್ ಮಸೀಹ್ ಮೌಊದ್(ಅ) ಅಲ್ಲಾಹನಿಂದ ನಿಯುಕ್ತಿಗೊಂಡವರಾಗಿದ್ದಾರೆ. ಅಲ್ಲಾಹನ ನೆರವು ಸಹಕಾರ ಅವರೊಂದಿಗೆ ಇರುತ್ತದೆ. ಮತ್ತು ಈ ವಿರೋಧಿಸುವವರು ನಿಕೃಷ್ಟ ಜನರಾಗಿದ್ದಾರೆ, ಅವರಿಗೆ ಅಲ್ಲಾಹನ ಯಾವ ರೀತಿಯ ಸಹಕಾರ ಅಥವಾ ಸಮ್ಮತವೂ ಇಲ್ಲ. ಅವರ ವಿರೋಧದಲ್ಲಿ ಯಾವ ಸತ್ಯಾಂಶವೂ ಇಲ್ಲ. ಅವರು ತಮ್ಮ ವಿರೋಧಕ್ಕಾಗಿ ವಾಮಮಾರ್ಗಗಳನ್ನು ಅನುಸರಿಸುತ್ತಿದ್ದಾರೆ. ಹಾಗಾಗಿ ನ್ಯಾಯ ತೀರ್ಪಿಗೋಸ್ಕರ ಮತ್ತು ಜನರನ್ನು ಮೋಸಗಾರಿಕೆಯಿಂದ ರಕ್ಷಿಸಲು ಹಾಗೂ ಅವರ ಮೇಲೆ ಸತ್ಯ ಪ್ರಕಟಪಡಿಸಲು ಹಝ್ರುತ್ ಮಸೀಹ್ ಮೌಊದ್(ಅ) ವಿರೋಧಿಗಳಿಗೆ ಆಹ್ವಾನದ ಮೇಲೆ ಆಹ್ವಾನ ನೀಡಿದರು. ನಲವತ್ತು ದಿನಗಳವರೆಗೆ ದೃಷ್ಟಾಂತ ತೋರಿಸುವ ವಾಗ್ದಾನ ಮಾಡಿದರು. ಬೇಕಾದ ರೀತಿಯಲ್ಲಿ ತೃಪ್ತಿಪಡಿಸಲು ಹೇಳಿದರು. ಆದರೆ ಯಾರ ಹೃದಯಗಳು ಸ್ವಚ್ಛವಿಲ್ಲ. ಶುದ್ಧವಿಲ್ಲ. ಸತ್ಯ ಬೇಕಾಗಿಲ್ಲ. ಅವರಿಗೆ ಇಂತಹ ಮಾತುಗಳು ಹಿಡಿಸುವುದಾದರೂ ಹೇಗೆ?

ಪೀರ್ ಮಹರ್ ಅಲಿ ಶಾಹ್ ಗೋಲ್ಡವಿ ಅವರನ್ನು ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಅವರ ಎದುರಾಗಿ ಪವಿತ್ರ ಖುರ್‌ಆನ್‌ನ ಯಾವುದೇ ಅಧ್ಯಾಯವಾಗಲಿ 40 ವರ್ಷಗಳ ತಫ್ಸೀರ್ ತಕ್ಷಣದಿಂದ ಒಂದು ಜಲ್ಸಾದಲ್ಲಿ ಜನರ ಸಮಕ್ಷಮದಲ್ಲಿ ಬರೆಯಲು ಪಂಥ್ವಾನ ನೀಡಿದರು. ಆದರೆ ಪೀರ್ ಸಾಹಿಬ್ ತೀರ ಚಾಣಾಕ್ಷ್ಯತನದಿಂದ ಪಲಾಯನಗೈದರು. ಪಲಾಯನವು ಮಾಡಿದಂತಾಯಿತು, ಜನರಿಂದ ತಪ್ಪಿಸಿಕೊಳ್ಳುವಂತೆಯೂ ಆಯಿತು. ಅಂತಹ ಇನ್ನಷ್ಟು ನ್ಯಾಯ ತೀರ್ಪಿಕ್ಕೋಸ್ಕರ ಸಯ್ಯದನಾ ಹಝ್ರತ್ ಮಸೀಹ್ ಮೌಊದ್(ಅ) "ತೋಹಫ್ ಗೋಲಡವಿಯಾ ಪುಸ್ತಕ ಬರೆದರು. ಮಸೀಹರ ಮರಣ ಮತ್ತು ತಮ್ಮ ದಾವೆಯ ಸತ್ಯತೆಗಾಗಿ ಸಾಕ್ಷ್ಯಸಹಿತ ಬರೆದರು ಮತ್ತು ಆ ಸಾಕ್ಷ್ಯಗಳನ್ನು ಸುಳ್ಳೆಂದು ರದ್ದುಪಡಿಸಿದರೆ 50 ರೂಪಾಯಿ ಬಹುಮಾನ ಪೀರ್ ಸಾಹೇಬರಿಗೆ ನಿಗದಿಪಡಿಸಿದರು. ಈ ಪಂಥಾಹ್ವಾನದ ವಿವರ ನಾವು ಹಿಂದಿನ ಸಂಚಿಕೆಯಲ್ಲಿಯೇ ನೀಡಿರುತ್ತೇವೆ. ಅಂದ ಹಾಗೆ ಪೀರ್ ಸಾಹೇಬರ ಚೇಲಾಗಳು ಹಝ್ರತ್ ಮಸೀಹ್ ಮೌಊದ್(ಅ) ರವರ ಬಗ್ಗೆ ಲಾಹೋರ್‌ನ ತುಂಬಾ ಬೊಬ್ಬೆ ಇಡುತ್ತಿದ್ದರು. ಮಿರ್ಝಾ ಸಾಹೇಬ್ ಸೋತಿದ್ದಾರೆ. ಲಾಹೋರಿನಲ್ಲಿ ಸ್ಪರ್ಧಿಯಾಗಿ ಬರಲಿಲ್ಲ. ಕಾರಣ ಇನ್ನಷ್ಟು ನ್ಯಾಯ ತೀರ್ಪಿನ ಉದ್ದೇಶದಿಂದ ಸಯ್ಯದನಾ ಹಝ್ರತ್ ಮಸೀಹ್ ಮೌಉದ್(ಅ) ಅವರಿಗೆ ಸೂರಃ ಫಾತಿಹಾದ ತಫ್ಸೀರ್ ಬರೆಯಲು ಪಂಥಾಹ್ವಾನ ನೀಡಿದರು. ಬೇಕಾದರೆ ಅವರು ತಮ್ಮ ಮನೆಯಲ್ಲಿ ಕುಳಿತುಕೊಂಡು ಬರೆಯಲಿ, ಲೋಕದ ಯಾವ ಪಂಡಿತನದಿಂದ ಆದರೂ ಸಹಾಯ ಪಡೆದುಕೊಳ್ಳಲಿ. ಅದಕ್ಕಾಗಿ ಅವರು 70 ದಿನಗಳ ಅವಧಿ ನೀಡಿದರು. ವಾಗ್ದಾನದಂತೆ ಅವರು ಆ ಅವಧಿಯ ಒಳಗೆ ಸೂರಃ ಫಾತಿಹ ತಫ್ಸೀರ್ ಒಳಗೊಂಡ ಗ್ರಂಥ "ಇಜಾಝುಲ್ ಮಸೀಹ್ " ಬರೆದರು. ಆದರೆ ಮಹರ್ ಅಲಿ ಅವರಿಗೆ ಏನೂ ಸಹ ಬರೆಯುವ ಭಾಗ್ಯ ದೊರೆಯಲಿಲ್ಲ. ಇವೆಲ್ಲದರ ವರದಿ ಸವಿವರವಾಗಿ ನಾವಿಲ್ಲಿ ಕೆಳಗೆ ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಪದಗಳಲ್ಲಿ ಪ್ರಸ್ತುತಪಡಿಸುತ್ತೇವೆ.

### ಸುಳ್ಳುವಾದಿ ಎಂದು ಜರಿಯುವ ಪೀರ್ ಮಹರ್ ಅಲಿ ಶಾಹ್ ಸಾಹಿಬ್ ಅವರೊಂದಿಗೆ ಬಯಸಿದ ಒಂದು ನಿರ್ಣಯ

ಮೇಲ್ಕಾಣಿಸಿದ ಶೀರ್ಷಿಕೆ ಅನ್ವಯು ಹಝ್ರತ್ ಮಸೀಹ್ ಮೌಊದ್(ಅ) ಪೀರ್ ಮಹರ್ ಅಲಿ ಶಾಹ್ ಗೋಲ್ಡವಿಯ ಅವರಿಗೆ ಪವಿತ್ರ ಖುರ್‌ಆನ್‌ನ 40 ವಚನಗಳ ತಫ್ಸೀರ್ ಬರೆಯಲು ಪಂಥಾಹ್ವಾನ ನೀಡುತ್ತಾ ತನ್ನ 20 ಜುಲೈ 1900 ರ ಪತ್ರಿಕೆಯಲ್ಲಿ ಬರೆದರು.

"ಈ ಸಾಹೇಬರು ಅವರ ಹೆಸರು ಶೀರ್ಷಿಕೆಯಲ್ಲಿ ನಮೂದಿಸಲಾಗಿದೆ. ಅಂದರೆ ಮಹರ್ ಅಲಿ ಶಾಹ್ ಸಾಹಿಬ್ ಜಿಲ್ಲಾ ರಾವಲ್‌ಪಿಂಡಿಯ ಸಜ್ಜಾದ ನಶೀನ್ (ಸಾಧು ನಂತರ ಉತ್ತರಾಧಿಕಾರಿ) ಅವರಲ್ಲಿ ಒಬ್ಬರಾಗಿದ್ದಾರೆ. ಅವರು ತಮ್ಮ ಬಳುವಳಿಕೆಯ ಅಹಮ್ಮಿನಲ್ಲಿ ಹೇಗಾದರೂ ಮಾಡಿ ಈ ದೈವಿಕ ಸಂಘಟನೆಗಳನ್ನು ಮಣ್ಣು ಮುಕ್ಕಿಸಬಯಸುತ್ತಾರೆ. ಅಂದಹಾಗೆ ಅದೇ ಉದ್ದೇಶವಿಟ್ಟುಕೊಂಡು ಅವರು ಎರಡು ಪುಸ್ತಕಗಳನ್ನು ಸಹ ಬರೆದಿದ್ದಾರೆ. ಅದರಿಂದ ಅವರಿಗಿರುವ ಖುರ್‌ಆನ್ ಹದೀಸಿನ ಜ್ಞಾನದ ಮಟ್ಟ ಎಷ್ಟೆಂಬುದು ಬಯಲಾಗುತ್ತದೆ. ಅಂದಹಾಗೆ ಅವರ ಆಚಾರ ವಿಚಾರ ಅತ್ಯಂತ ನಿಕೃಷ್ಟವಾಗಿದ್ದರಿಂದ ಯಾವುದೇ ಪ್ರಕಾಶವುಳ್ಳ ಮಾತು. ಅವರಿಂದ ಹೊರ ಬರಲು ಸಾಧ್ಯವಿರುವುದಿಲ್ಲ."

ಅನಂತರ ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು: ಯಾವ ಹದೀಸಿನಲ್ಲಿ ಸಹ ವಾಗ್ದತ್ತ ಮಸೀಹರು ಆಕಾಶದಿಂದ ಅವತರಿಸುವರು ಎಂದು ಬರೆದಿಲ್ಲ. ಅಂತಹದ್ದೇನಾದರೂ ಹದೀಸಿದ್ದರೆ ಪ್ರಸ್ತುತಪಡಿಸಿರಿ. ಎಲ್ಲಾ ಪ್ರವಾದಿಗಳ ಸರದಾರರಾದವರು ಆಕಾಶದಲ್ಲಿ ಹೋಗುತ್ತಿರುವುದು ಅಥವಾ ಇಳಿಯುತ್ತಿರುವುದು ಕಾಣಲಿಲ್ಲ ಮತ್ತೆ ಈಸ ಮಸೀಹರು ಆಕಾಶದಿಂದ ಇಳಿಯುವುದು ಕಾಣಲು ಸಾಧ್ಯವೇ? ಮತ್ತೆ ಅವರು ಹೇಳಿದರು: ಓ ಮುಸಲ್ಮಾನರೇ ಇಂತಹ ಕಲ್ಪನೆಗಳಿಂದ ಹೊರ ಬನ್ನಿರಿ. ಅಲ್ಲಾಹನಿಂದ ಭಯಪಡಿರಿ ಮತ್ತು ಹಟ ದ್ವೇಷ ಬಿಟ್ಟುಬಿಡಿರಿ. ಅನಂತರ ಹಝ್ರುತ್ ಮಸೀಹ್ ಮೌಊದ್(ಅ) ಹೇಳಿದರು.

"ಮಹರ್ ಅಲಿ ಶಾಹ್ ಸಾಹಿಬ್ ತನ್ನ ಹಟದಿಂದ ದೂರವಾಗದಿದ್ದರೆ ನಾನು ಅವರ ತೀರ್ಪಿಗಾಗಿ ಒಂದು ಸರಳ ಮಾರ್ಗ ತೋರಿಸಿ ಕೊಡುತ್ತೇನೆ. ಅದು ಪವಿತ್ರ ಖುರ್‌ಆನ್‌ನಿಂದ ಸಾಬೀತುಗೊಂಡಿದೆ. ಯಾರು ನಿಜವಾಗಿಯೂ ಅಲ್ಲಾಹನ ಸಜ್ಜನ ದಾಸರಾಗಿರುವರೋ ಅವರೊಂದಿಗೆ ಅಲ್ಲಾಹನ ಮೂರು ರೀತಿಯ ಸಹಕಾರವಿರುತ್ತದೆ.

1) ಅವರಲ್ಲಿ ಮತ್ತು ಇತರರಲ್ಲಿ ಒಂದು ಸ್ಪಷ್ಟವಾದ ಅಂತವರಿರುತ್ತದೆ. ಸ್ಪರ್ಧೆಯ ಸಮಯದಲ್ಲಿ ಅವರಿಂದ ಪವಾಡ ಸದೃಶ್ಯ ಕಾರ್ಯಗಳು ಸಾಧಿತವಾಗುತ್ತದೆ. ಅದು ಎದುರಾಳಿಯಿಂದ ಸಾಧ್ಯವಾಗುವುದಿಲ್ಲ. ವಚನ "ಯಜ್‌ಅಲ್ ಲಕುಮ್ ಫುರ್ಖಾನನ್" ಅದಕ್ಕೆ ಸಾಕ್ಷಿಯಾಗಿದೆ.

2) ಅವರಿಗೆ ಖುರ್‌ಆನ್‌ನ ಜ್ಞಾನ ನಿಡಲಾಗುತ್ತದೆ. ಇತರರಿಗೆ ಅಲ್ಲ. ಅದಕ್ಕೆ ವಚನ "ಲಾ ಯಮಸ್ಸಹು ಇಲ್ಲಲ್ ಮುತಹ್ಹರೂನ್" ಸಾಕ್ಷಿಯಾಗಿದೆ.

3) ಅವರ ಪ್ರಾರ್ಥನೆಗಳು ಯಥೇಚ್ಛವಾಗಿ ಸ್ವೀಕರಿಸಲ್ಪಡುತ್ತದೆ ಆದರೆ ಅದು ಇತರರದು ಅಷ್ಟು ಪ್ರಮಾಣದಲ್ಲಿ ಆಗುವುದಿಲ್ಲ. ಅದಕ್ಕೆ ವಚನ "ಉದ್‌ಊನಿ ಅಸ್ತಜಿಬ್‌ಲಕುಮ್" ಸಾಕ್ಷಿಯಾಗಿದೆ.

ಅಂದ ಹಾಗೆ ಯಾರು ಸತ್ಯವಂತ? ಯಾರು ಸುಳ್ಳುಗಾರ? ಎಂಬ ಪರೀಕ್ಷೆಗೆ ಪಂಜಾಬ್ ರಾಜ್ಯದ ರಾಜಧಾನಿಯಾದ ಲಾಹೋರಿನಲ್ಲಿ ಒಂದು ಸಮ್ಮೇಳನ ಆಯೋಜಿಸಿ ನನ್ನೊಂದಿಗೆ ಚರ್ಚೆಗೆ ಬರಬಹುದು. ಅವರ ಪ್ರಕಾರ ಪವಿತ್ರ ಖುರ್‌ಆನ್‌ನ ಯಾವುದೇ ಅಧ್ಯಾಯ ತೆಗೆದುಕೊಳ್ಳಬಹುದು. ಅದರಲ್ಲಿನ 40 ವಚನಗಳು ಅಥವಾ ಪೂರ್ಣ ಅಧ್ಯಾಯ (40 ವಚನಕ್ಕಿಂತ ಹೆಚ್ಚಿದ್ದರೇ ತೆಗೆದುಕೊಂಡು ನಾನು ಮತ್ತು ಮಹರ್ ಅಲಿ ಶಹ್ ಸಾಹಿಬ್

*(ಪುಟ 09 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

**ನಾನು ಅಲ್ಲಾಹನ ಒಂದು ದಿವ್ಯಶಕ್ತಿಯ ರೂಪದಲ್ಲಿ ಪ್ರಕಟವಾದೆನು. ನಾನು ಅಲ್ಲಾಹನ ದಿವ್ಯಶಕ್ತಿಯ ಸ್ವರೂಪನಾಗಿರುವೆನು. ನನ್ನ ಅನಂತರ ಕೆಲವರು ಅಲ್ಲಾಹನ ದ್ವಿತೀಯ ದಿವ್ಯಶಕ್ತಿಯನ್ನು ಪ್ರಕಟಿಸುವವರಾಗುವರು. (ಹಝ್ರತ್ ಮಸೀಹ್ ಮೌಊದ್(ಅ))**

## ಖಿಲಾಫತ್ ದಿನದ ಸಂದರ್ಭದಲ್ಲಿ ಅಹ್ಮದೀಯ ಖಿಲಾಫತ್‌ನ ಮಹತ್ವ, ಪ್ರಾಮುಖ್ಯತೆ ಮತ್ತು ಅನುಗ್ರಹಗಳು ಮತ್ತು ಖಿಲಾಫತ್ತೊಂದಿಗೆ ದೈವಿಕ ಬೆಂಬಲದ ದೃಶ್ಯಗಳ ಸಂಕ್ಷಿಪ್ತ ಪ್ರಸ್ತಾವನೆ

**ಹಝ್ರತ್ ಪೈಗಂಬರ್(ಸ) ಸುಮ್ಮನಾದದ್ದು ಸ್ಪಷ್ಟಪಡಿಸುವುದೇನೆಂದರೆ, ಪುನಃ ಸ್ಥಾಪಿತವಾಗುವ ಪ್ರವಾದಿತ್ವ ಮಾರ್ಗದ ಖಿಲಾಫತ್ ವ್ಯವಸ್ಥೆ ದೀರ್ಘಕಾಲ ನೆಲೆನಿಲ್ಲುವುದು ಎಂದಾಗಿದೆ.**

**ಅಹ್ಮದಿಯಾ ಖಿಲಾಫತಿನೊಂದಿಗೆ ಸದಾ ಹೊಂದಿಕೊಂಡಿರುವವರು ಮತ್ತು ತನ್ನ ಮಕ್ಕಳಿಗೂ ಅದರ ಬಗ್ಗೆ ಉಪದೇಶಿಸುವವರು ಸೌಭಾಗ್ಯಶಾಲಿಗಳು. ಅಹ್ಮದಿಯಾ ಖಿಲಾಫತನ್ನು ಯಾವುದಾದರೂ ಕಾಲಘಟ್ಟದ ವರೆಗೆ ಪರಿಮಿತಗೊಳಿಸಲು ಬಯಸುವವರು ಮತ್ತು ಹಾಗೆ ಯೋಚಿಸುವವರು ದೌರ್ಭಾಗ್ಯವಂತರು.**

**ಹಝ್ರತ್ ಮಸೀಹ್ ಮೌಊದ್(ಅ) ಮಾಡಿದ ಭವಿಷ್ಯವಾಣಿಗಳು, ಅವರು ಪ್ರಸ್ತಾಪಿಸಿದ ಅಲ್ಲಾಹನ ವಾಗ್ದಾನಗಳು ಪೂರ್ಣವಾಗಿ ಈಡೇರುವುವು. ಅವರ ನಂತರ ಜಾರಿಗೊಂಡ ಖಿಲಾಫತ್ ವ್ಯವಸ್ಥೆಯ ಮೂಲಕವೇ ಅವುಗಳು ಈಡೇರುವುವು.**

**ಪ್ರತಿಯೊಬ್ಬ ಅಹ್ಮದಿಗೆ ಖಿಲಾಫತಿನೊಂದಿಗೆ ನಿಷ್ಠೆ ಮತ್ತು ಪ್ರಾಮಾಣಿಕತೆಯ ಸಂಬಂಧವಿರಬೇಕು. ಈ ಮಟ್ಟವನು ಗಳಿಸುವವರೇ ಬೈಅತ್ತಿಗೆ ಸಂಬಂಧಿಸಿದ ಕರ್ತವ್ಯಗಳನ್ನು ಈಡೇರಿಸುವವರಾಗುವರು. ಈ ಮಟ್ಟವನ್ನು ತಲುಪುವಾಗಲೇ ನಾವಿಂದು ಖಿಲಾಫತ್ ದಿನವನ್ನು ಆಚರಿಸಲು ಅರ್ಹರಾಗುವೆವು. ಖಿಲಾಫತಿನೊಂದಿಗೆ ಮಾಡಿದ ಬೈಅತ್ತಿನ ಬಾಧ್ಯತೆಯನ್ನು ಈಡೇರಿಸುವವರಾಗಲು ಮತ್ತು ಅಲ್ಲಾಹನ ಅನುಗ್ರಹಗಳನ್ನು ಗಳಿಸುವಂತವರಾಗಲು ಅಲ್ಲಾಹನು ಎಲ್ಲರಿಗೂ ಸೌಭಾಗ್ಯ ನೀಡಲಿ**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್,** ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **27-05-2022** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ ۔ بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعٰلَمِيْنَ ۔ اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔

إِيَّاكَ نَعْبُدُ وَإِيَّاكَ نَسْتَعِيْنُ ۔ اِهْدِنَا الصِّرَاطَ الْمُسْتَقِيْمَ ۔

صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۔

ಮೇ 27ನೇ ದಿನಾಂಕ ಅಹ್ಮದಿಯಾ ಜಮಾಅತಿನಲ್ಲಿ ಖಿಲಾಫತ್ ದಿನವಾಗಿ ತಿಳಿಯಲಾಗುತ್ತದೆ. ನಾವು ಪ್ರತಿ ವರ್ಷ ಖಿಲಾಫತ್ ದಿನದ ಜಲ್ಸವನ್ನು ಆ ದಿನದಂದು ಅಥವಾ ಅದಕ್ಕೆ ಅಲ್ಪ ಮುಂಚೆ ಅಥವಾ ನಂತರ ನಡೆಸುತ್ತೇವೆ. ಆದರೆ ಇದೇಕೆ? ಈ ಸವಾಲಿನ ಉತ್ತರವನ್ನು ನಾವು ಸದಾ ಮುಂದಿರಿಸಬೇಕಾಗಿದೆ. ನಮ್ಮ ಸಂತಾನಗಳೊಡನೆ ಮತ್ತು ಮಕ್ಕಳೊಡನೆ ಇದರ ಬಗ್ಗೆ ಯೋಚಿಸಲು ಹೇಳಬೇಕಾಗಿದೆ. ಈ ದಿನದ ಆರಂಭ 1908, ಮೇ 27ರಂದು ಆಗಿತ್ತು. ಅಂದು ಅಲ್ಲಾಹನು ತನ್ನ ವಾಗ್ದಾನಗಳ ಪ್ರಕಾರ ನಮ್ಮ ಮೇಲೆ ಕೃಪೆದೋರುತ್ತಾ ಅಹ್ಮದಿಯಾ ಜಮಾಅತಿನಲ್ಲಿ ಖಿಲಾಫತಿನ ವ್ಯವಸ್ಥೆಯನ್ನು ಜಾರಿಗೊಳಿಸಿದ್ದನು. ಅಲ್ಲಾಹನು ಹಝ್ರತ್ ಮಸೀಹ್ ಮೌಊದ್(ಅ)ರೊಡನೆ ಜಮಾಅತಿನ ಪ್ರಗತಿಯ ವಾಗ್ದಾನ ಮಾಡಿದ್ದನು. ಅದನ್ನು ಈ ದಿನದಂದು ಈಡೇರಿಸಿದನು. ಯಾವನೇ ವ್ಯಕ್ತಿ ಮರಣದಿಂದ ಸುರಕ್ಷಿತನಲ್ಲವೆಂದು ಹೇಳಿಕೊಂಡು ಹಝ್ರತ್ ಮಸೀಹ್ ಮೌಊದ್(ಅ) ತನ್ನ ಜಮಾಅತನ್ನು ಒಂದು ದೀರ್ಘಕಾಲದಿಂದ ತಯಾರು ಮಾಡುತ್ತಿದ್ದರು. ಪ್ರವಾದಿಗಳನ್ನು ಕೂಡ ತಮ್ಮ ಕೆಲಸವನ್ನು ಮುಗಿಸಿದ ನಂತರ ಅಲ್ಲಾಹನು ಎತ್ತಿಕೊಳ್ಳುತ್ತಾನೆ. ತನ್ನ ಮರಳುವಿಕೆಯ ಸಮಯ ಸಮೀಪವಾಗಿದೆ ಎಂಬ ಸಂಗತಿಯ ಕುರಿತು ತಿಳಿಯುವಂತಾಗಲು ಪದೇ ಪದೇ ಹೇಳಿ ಹಝ್ರತ್ ಮಸೀಹ್ ಮೌಊದ್(ಅ) ತನ್ನ ಜಮಾಅತನ್ನು ತಯಾರು ಮಾಡುತ್ತಿದ್ದರು. ಆದರೆ ಅದರೊಂದಿಗೆ ಅವರು ಸ್ಥಾಪಿಸಿದ ಜಮಾಅತ್ ಅಭಿವೃದ್ಧಿಗೊಳ್ಳುವುದು, ಪುಷ್ಪಿಸುವುದು, ಹರಡುವುದು ಮತ್ತು ಅಲ್ಲಾಹನು ಅವರೊಡನೆ ಮಾಡಿದ ವಾಗ್ದಾನಗಳು ಖಂಡಿತ ಈಡೇರುವುವು ಎಂಬ ಸುವಾರ್ತೆ ಕೂಡ ನೀಡುತ್ತಿದ್ದರು. ಜಮಾಅತಿನ ಪ್ರಗತಿ ಅಲ್ಲಾಹನ ಅನುಗ್ರಹದಿಂದ ಆಗುವುದು ಮತ್ತು ಯಾರಿಂದಲೂ ಅದನ್ನು ತಡೆಯಲು ಸಾಧ್ಯವಲ್ಲ.

ಹಝ್ರತ್ ಪೈಗಂಬರ್(ಸ) ಕೂಡ ತನ್ನ ಕಾಲದಿಂದ ಹಿಡಿದು ಕೊನೆಯ ಕಾಲದ ವರೆಗೆ ಎಂದರೆ ಹಝ್ರತ್ ಮಸೀಹ್ ಮೌಊದ್(ಅ)ರ ಕಾಲದ ವರೆಗೆ ಹಾಗೂ ಅವರ ನಂತರ ಜಾರಿಗೊಳ್ಳುವ ಖಿಲಾಫತ್ ವ್ಯವಸ್ಥೆಯ ಬಗ್ಗೆ ಬಣ್ಣಿಸಿರುವರು. ಹಝ್ರತ್ ಪೈಗಂಬರ್(ಸ) ತನ್ನ ಸಹಾಬಿಯರ ಮಜ್ಲಿಸಿನಲ್ಲಿ ಒಮ್ಮೆ ಹೇಳಿದರು: ಅಲ್ಲಾಹನು ಇಚ್ಛಿಸುವ ತನಕ ನಿಮ್ಮಲ್ಲಿ ಪ್ರವಾದಿತ್ವ ನೆಲೆನಿಲ್ಲುವುದು, ಎಂದರೆ ಹಝ್ರತ್ ಪೈಗಂಬರ್(ಸ) ಸಹಾಬಿಯರ ಎಡೆಯಲ್ಲಿ ಇರುವರು. ಅನಂತರ ಅಲ್ಲಾಹನು ಆ ಪ್ರವಾದಿತ್ವವನ್ನು ಮೇಲಕ್ಕೆತ್ತುವನು ಮತ್ತು ಪ್ರವಾದಿತ್ವದ ಮಾರ್ಗದಲ್ಲಿರುವ ಖಿಲಾಫತ್ ಸ್ಥಾಪಿತವಾಗುವುದು. ಎಂದರೆ ಖಿಲಾಫತೇ ರಾಶಿದ ನೆಲೆನಿಲ್ಲುವುದು, ನೇರಮಾರ್ಗದಲ್ಲಿರುವ ಖಿಲಾಫತ್ ಸ್ಥಾಪಿತವಾಗುವುದು. ಅದು ಸಂಪೂರ್ಣವಾಗಿ ಪ್ರವಾದಿತ್ವದ ಹೆಜ್ಜೆಗಳ ಮೇಲೆ ನಡೆಯುವುದಾಗಿರುವುದು. ಅನಂತರ ಅಲ್ಲಾಹನು ಬಯಸುವಾಗ ಈ ಅನುಗ್ರಹವನ್ನು ಕೂಡ ಎತ್ತುವನು. ಕಳೆದ ಕೆಲವು ಕಾಲದಿಂದ ನಾನು ಬದರೀ ಸಹಾಬಿಯರ ಪರಂಪರೆಯಲ್ಲಿ ಖುಲಫಾ ರಾಶಿದ, ಎಂದರೆ ನೇರಮಾರ್ಗದಲ್ಲಿರುವ ಖಲೀಫರ ಬಗ್ಗೆ ಪ್ರಸ್ತಾಪಿಸುತ್ತಿರುವೆನು. ಈಗ ಹಝ್ರತ್ ಅಬೂಬಕರ್ ಸಿದ್ದೀಖ್(ರ)ರ ಪ್ರಸ್ತಾಪ ನಡೆಯುತ್ತಿದೆ. ಎಲ್ಲ ಖಲೀಫರು ನಿಸ್ವಾರ್ಥರಾಗಿ ಹಝ್ರತ್ ಪೈಗಂಬರ್(ಸ)ರ ಸುನ್ನತ್ ಪ್ರಕಾರ ನಡೆಯುತ್ತಾ ಮತ್ತು ಪವಿತ್ರ ಖುರ್‌ಆನನ್ನು ತಮ್ಮ ಮಾರ್ಗದರ್ಶಿಯನ್ನಾಗಿ ಮಾಡುತ್ತಾ ತಮ್ಮ ಖಿಲಾಫತ್ ಕಾಲವನ್ನು ಕಳೆದಿದ್ದರು ಎಂದು ಎಲ್ಲ ಖಲೀಫರ ಪ್ರಸ್ತಾಪದಲ್ಲಿ ಬೆಳಗ್ಗಿನ ಬೆಳಕಿನಂತೆ ಸ್ಪಷ್ಟವಾಗಿ ತಿಳಿದುಬರುತ್ತದೆ. ಪ್ರತಿ ಹೆಜ್ಜೆಯಲ್ಲೂ ಪ್ರವಾದಿತ್ವದ ಮಾರ್ಗದಲ್ಲಿ ನೆಲೆನಿಲ್ಲಲು ಪ್ರಯತ್ನಿಸಲಾಗಿತ್ತು. ಹೇಗಿದ್ದರೂ ಹಝ್ರತ್ ಪೈಗಂಬರ್(ಸ) ತನ್ನ ಮಾತನ್ನು ಮುಂದುವರೆಸುತ್ತಾ ಹೇಳುತ್ತಾರೆ: ಅನಂತರ ಅಲ್ಲಾಹನ ವಿಧಿಪ್ರಕಾರ ಉಪದ್ರವಕಾರಿ ಅರಸುತನ ಬರುವುದು. ಇದರಿಂದ ಜನರು ಕಷ್ಟತೆ ಅನುಭವಿಸುವರು. ಈ ಕಾಲಘಟ್ಟ ಮುಗಿಯುವಾಗ ಅಲ್ಲಾಹನ ಮತ್ತೊಂದು ವಿಧಿ ಪ್ರಕಾರ ಅದಕ್ಕಿಂತಲೂ ಕೆಟ್ಟದಾದ ದೌರ್ಜನ್ಯಕರ ಅರಸುತನ ಸ್ಥಾಪಿತವಾಗುವುದು.

ಚರಿತ್ರೆಯು ಇದನ್ನು ಕೂಡ ನೋಡಿತ್ತು. ಇಂದು ಕೂಡ ಧರ್ಮದಿಂದ ದೂರವಿರುವ ಮುಸ್ಲಿಮ್ ಆಡಳಿತಗಾರರು ತನ್ನ ಪ್ರಜೆಗಳೊಂದಿಗೆ ದೌರ್ಜನ್ಯಗಳನ್ನೇ ಮಾಡುತ್ತಿರುವರು. ಅದು ರಾಜಕೀಯ ಅಥವಾ ಅರಸುತನದ ಆಡಳಿತವಾದರೂ ಸರಿ. ಯಾರ ಕೈಯಲ್ಲಿ ಬೇಕಾದರೂ ಆಡಳಿತ ಬಂದರೂ ಅವರು ಲೋಕವನ್ನು ತನ್ನ ಅಧೀನದಲ್ಲಿ ಮಾಡುತ್ತಾರೆ. ಹೇಗಿದ್ದರೂ ಹಝ್ರತ್ ಪೈಗಂಬರ್(ಸ) ತನ್ನ ಮಾತನ್ನು ಮುಂದುವರೆಸುತ್ತಾ ಹೇಳುತ್ತಾರೆ: ಇವೆಲ್ಲವೂ ಮುಸ್ಲಿಂ ಸಮುದಾಯದೊಂದಿಗೆ

ಆದ ನಂತರ ಅಲ್ಲಾಹನ ಕರುಣೆ ಉಕ್ಕಿ ಹರಿಯುವುದು ಹಾಗೂ ದೌರ್ಜನ್ಯ ಮತ್ತು ಪೀಡನೆಯ ಕಾಲಘಟ್ಟವನ್ನು ಅಲ್ಲಾಹನು ಕೊನೆಗೊಳಿಸುವನು.

ಅನಂತರ ಪ್ರವಾದಿತ್ವದ ಮಾರ್ಗದಲ್ಲಿರುವ ಖಿಲಾಫತ್ ಪುನಃ ಸ್ಥಾಪಿತವಾಗುವುದು. ಇದನ್ನು ಹೇಳಿದ ನಂತರ ಅವರು ಸುಮ್ಮನಾದರು. (ಮಸ್ನದ್ ಅಹ್ಮದ್ ಬಿನ್ ಹಂಬಲ್, ಸಂಪುಟ-6, ಪುಟ-285, ಹದೀಸ್-18596, ಆಲಮುಲ್ ಕುತುಬ್ ಬೈರೂತ್ 1998)

ಪೀಡನೆ ಮತ್ತು ದೌರ್ಜನ್ಯದ ಕಾಲಘಟ್ಟ ಕೊನೆಗೊಳ್ಳುವುದು ಎಂದು ಹಝ್ರತ್ ಪೈಗಂಬರ್(ಸ) ಹೇಳಿದ್ದು ಖಾತಮುಲ್ ಖುಲಫ ಹಝ್ರತ್ ಮಸೀಹ್ ಮೌಊದ್(ಅ)ರನ್ನು ಬೈಅತ್ ಮಾಡಿದವರಿಗೆ ಮತ್ತು ಅವರ ಬೋಧನೆಗಳ ಪ್ರಕಾರ ನಡೆಯುವವರಿಗೆ ಆಗಿದೆ.

ಅಲ್ಲಾಹನು ಅದರ ವ್ಯವಸ್ಥೆಯನ್ನು ಮಾಡಿರುವನು. ಜನರು ಈ ಏರ್ಪಾಡಿನ ಅಧೀನದಲ್ಲಿ ಬರದೇ ಹಟ ಹಿಡಿದು ನಿಲ್ಲುವರಾದರೆ ಅದರ ಪರಿಣಾಮವೇನೆಂದು ಇಂದು ಮುಸ್ಲಿಮರು ನೋಡುತ್ತಿರುವರು. ಅಲ್ಲಾಹನು ಈ ಮುಸ್ಲಿಮರಿಗೂ ಬುದ್ಧಿ ಮತ್ತು ವಿವೇಕವನ್ನು ನೀಡಲಿ ಹಾಗೂ ಅವರು ಹಝ್ರತ್ ಪೈಗಂಬರ್(ಸ)ರ ಸತ್ಯಸಂಧ ಪ್ರೇಮಿಯಾದ ಹಝ್ರತ್ ಮಸೀಹ್ ಮೌಊದ್(ಅ)ರನ್ನು ಗುರುತಿಸುವಂತಾಗಲಿ ಮತ್ತು ಹಝ್ರತ್ ಮಸೀಹ್ ಮೌಊದ್(ಅ)ರ ಜಮಾಅತಿನ ಮೇಲೆ ದೌರ್ಜನ್ಯ ಮತ್ತು ಪೀಡನೆ ಮಾಡುವವರಾಗದಿರಲಿ. ಕೊನೆಗಾಲದಲ್ಲಿ ನಿಮ್ಮೊಳಗೆ ಪ್ರವಾದಿತ್ವದ ಮಾರ್ಗದ ಖಿಲಾಫತ್ ಸ್ಥಾಪಿತವಾಗುವುದು ಎಂದು ಹೇಳಿದ ನಂತರ ಹಝ್ರತ್ ಪೈಗಂಬರ್(ಸ) ಸುಮ್ಮನಾದದ್ದು ಸ್ಪಷ್ಟಪಡಿಸುವುದೇನೆಂದರೆ, ಪುನಃ ಸ್ಥಾಪಿತವಾಗುವ ಪ್ರವಾದಿತ್ವ ಮಾರ್ಗದ ಖಿಲಾಫತ್ ವ್ಯವಸ್ಥೆ ದೀರ್ಘಕಾಲ ನೆಲೆನಿಲ್ಲುವುದು ಎಂದಾಗಿದೆ.

ಹಝ್ರತ್ ಪೈಗಂಬರ್(ಸ) ಸುಮ್ಮನಾದ ಕಾರಣದಿಂದ ಇದರ ಅರ್ಥ ಇದು ಕೂಡ ಬೇಗನೇ ಕೊನೆಗೊಳ್ಳುವುದು ಎಂದು ಕೆಲವರು ಕೆಲವು ಸಂಗತಿಗಳನ್ನು ಮನವರಿಕೆ ಮಾಡದೇ ಹೇಳುತ್ತಾರೆ. ಇವರೆಲ್ಲರೂ ತಪ್ಪಾಗಿ ಹೇಳುತ್ತಿರುವರು. ಇದು ಮುಂದುವರೆಯುವ ವ್ಯವಸ್ಥೆಯಾಗಿರುವುದು ಎಂದು ಹಝ್ರತ್ ಮಸೀಹ್ ಮೌಊದ್(ಅ) ಸ್ವತಃ ಸ್ಪಷ್ಟಪಡಿಸಿರುವರು. ಹಝ್ರತ್ ಮಸೀಹ್ ಮೌಊದ್(ಅ)ರೊಡನೆ ಅಲ್ಲಾಹನು ಮಾಡಿರುವ ವಾಗ್ದಾನ ಈಡೇರುವಂತದ್ದಾಗಿದೆ. ಭೂಮಿ ಮತ್ತು ಆಕಾಶ ಅಡಿಮೇಲಾದರೂ ಅಲ್ಲಾಹನ ವಾಗ್ದಾನ ಈಡೇರುವುದನ್ನು ತಡೆಯಲು ಯಾರಿಂದಲೂ ಸಾಧ್ಯವಲ್ಲ. ಹೇಗಿದ್ದರೂ ಖಿಲಾಫತ್ ವ್ಯವಸ್ಥೆ ಜಾರಿಯಲ್ಲಿರುವುದು ಎಂಬುದನ್ನು ಸ್ಪಷ್ಟಪಡಿಸುತ್ತಾ ಹಝ್ರತ್ ಮಸೀಹ್ ಮೌಊದ್(ಅ) ಜಮಾಅತನ್ನು ಸಂಬೋಧಿಸುತ್ತಾ ಹೇಳುತ್ತಾರೆ: "ಆದುದರಿಂದ ಪ್ರಿಯರೇ, ಶತ್ರುಗಳ ಎರಡು ಮಿಥ್ಯ ಸಂತೋಷಗಳನ್ನು ನಿರರ್ಥಕ ಎಂದು ತೋರಿಸಿ ಕೊಡಲಿಕ್ಕಾಗಿ ಅವನು ಎರಡು ದಿವ್ಯ ಶಕ್ತಿಗಳನ್ನು ಪ್ರಕಟಿಸುತ್ತಾನೆ ಎಂಬುದು ಪುರಾತನ ಕಾಲದಿಂದಲೂ ಅಲ್ಲಾಹನ ನಡವಳಿಕೆ ಕ್ರಮವಾಗಿದೆ. ಆದ್ದರಿಂದ ಅಲ್ಲಾಹನು ತನ್ನ ಪುರಾತನವಾದ ನಡವಳಿಕೆಯನ್ನು ಬಿಟ್ಟುಬಿಡುವುದು ಸಂಭಾವ್ಯವಲ್ಲ. ಆದುದರಿಂದ ನಾನು ನಿಮ್ಮೊಂದಿಗೆ ಹೇಳಿದ ಮಾತಿನಿಂದ ನೀವು ದುಃಖಿತರಾಗಬೇಡಿರಿ. (ಎಂದರೆ ತನ್ನ ಮರಣದ ಬಗ್ಗೆ ಅವರು ಹೇಳಿದ್ದರು) ನಿಮ್ಮ ಹೃದಯಗಳು ಗಾಬರಿಗೊಳ್ಳದಿರಲಿ. ಏಕೆಂದರೆ ಅಲ್ಲಾಹನ ದಿವ್ಯಶಕ್ತಿಯ ಎರಡನೆಯ ಪ್ರಕಟನೆಯನ್ನು ನೀವು ನೋಡುವುದು ಸಹ ಅವಶ್ಯಕವಾಗಿದೆ. ಅದು ಆಗಮಿಸುವುದು ನಿಮಗೆ ಉತ್ತಮವಾಗಿದೆ. ಏಕೆಂದರೆ ಅದು ಶಾಶ್ವತವಾಗಿದೆ. ಅದರ ಸರಪಳಿ ಪುನರುತ್ಥಾನದ ದಿನದ ತನಕ ಕಡಿದು ಹೋಗಲಾರದು. ನಾನು ನಿಮ್ಮ ಬಳಿಯಿಂದ ನಿರ್ಗಮಿಸದೇ ಆ ಎರಡನೇ ದಿವ್ಯ ಶಕ್ತಿ ಆಗಮಿಸಲಾರದು. ಆದರೆ ನಾನು ನಿಮ್ಮನ್ನು ಬಿಟ್ಟು ಹೋಗುವಾಗ ಅಲ್ಲಾಹನು ತನ್ನ ಎರಡನೇ ಶಕ್ತಿಯನ್ನು ನಿಮಗಾಗಿ ಕಳುಹಿಸಿ ಕೊಡುವನು. "ಬರಾಹೀನೆ ಅಹ್ಮದಿಯಾ" ಎಂಬ ಗ್ರಂಥದಲ್ಲಿರುವ ಅಲ್ಲಾಹನ ವಾಗ್ದಾನದಂತೆ ಅದು ಸದಾ ನಿಮ್ಮೊಂದಿಗೆ ಇರುವುದು.
(ರಿಸಾಲ ಅಲ್‌ವಸಿಯ್ಯತ್, ರೂಹಾನಿ ಖಝಾಈನ್, ಸಂಪುಟ-20, ಪುಟ-305)

ಎರಡನೇ ದಿವ್ಯಶಕ್ತಿ ಎಂದರೆ, ಖಿಲಾಫತ್ ಖಿಯಾಮತ್ ತನಕ ಇರುವುದು ಎಂಬ ಹಝ್ರತ್ ಮಸೀಹ್ ಮೌಊದ್(ಅ)ರ ಈ ಮಾತುಗಳು ಅಲ್ಲಾಹನ ವಾಗ್ದಾನವಾಗಿದೆ. ಅಹ್ಮದಿಯಾ ಖಿಲಾಫತಿನ ಸಂರಕ್ಷಣೆ ಮಾಡುವ ಜನರು ಸದಾ ಉಂಟಾಗುವರು. ಅಹ್ಮದಿಯಾ ಖಿಲಾಫತಿನೊಂದಿಗೆ ಸದಾ ಹೊಂದಿಕೊಂಡಿರುವವರು ಮತ್ತು ತನ್ನ ಮಕ್ಕಳಿಗೂ ಅದರ ಬಗ್ಗೆ ಉಪದೇಶಿಸುವವರು ಸೌಭಾಗ್ಯಶಾಲಿಗಳು. ಅಹ್ಮದಿಯಾ ಖಿಲಾಫತನ್ನು ಯಾವುದಾದರೂ ಕಾಲಘಟ್ಟದ ವರೆಗೆ ಪರಿಮಿತಗೊಳಿಸಲು ಬಯಸುವವರು ಮತ್ತು ಹಾಗೆ ಯೋಚಿಸುವವರು ದೌರ್ಭಾಗ್ಯವಂತರು.

ಅಹ್ಮದಿಯಾ ಜಮಾಅತಿನ ಒಂದನೇ ಖಿಲಾಫತ್ ಮತ್ತು ಎರಡನೇ ಖಿಲಾಫತಿನ ಸಮಯದಲ್ಲಿ, ಖಿಲಾಫತನ್ನು ವಿರೋಧಿಸಿದವರು ಪರಾಜಿತರಾದರು ಎಂದು ಜಮಾಅತಿನ ಚರಿತ್ರೆಯಿಂದ ತಿಳಿದುಬರುತ್ತದೆ.

ಹೇಗಿದ್ದರೂ ಖಿಲಾಫತ್ ನೆಲೆನಿಲ್ಲುವುದರ ಬಗ್ಗೆ ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: "ಖಿಲಾಫತ್ ನೆಲೆನಿಲ್ಲುವುದು ಎಂಬ ವಾಗ್ದಾನ ನನ್ನ ಕುರಿತಿರುವ ವಾಗ್ದಾನವಲ್ಲ. ಬದಲಾಗಿ ನಿಮಗೆ ಸಂಬಂಧಿಸಿದ ವಾಗ್ದಾನವಾಗಿದೆ. ಅಲ್ಲಾಹನು ನನ್ನೊಡನೆ ಹೀಗೆ ಹೇಳಿದನು:" ನಿನ್ನ ಅನುಯಾಯಿಗಳ ಈ ಜಮಾಅತಿಗೆ ಪುನರುತ್ಥಾನದ ದಿನದ ತನಕ ಅನ್ಯರ ಮೇಲೆ ಜಯವನ್ನು ದಯಪಾಲಿಸುವೆನು." ಆದುದರಿಂದ ನಿಮ್ಮಿಂದ ನಾನು ಅಗಲಿ ಹೋಗುವ ದಿನವು ಆಗಮಿಸುವುದು ಅವಶ್ಯಕವಾಗಿದೆ. ಅನಂತರ ಶಾಶ್ವತ ವಾಗ್ದಾನದ ದಿನವು ಆಗಮಿಸುವುದು. ನಮ್ಮ ದೇವನು ವಾಗ್ದಾನಗಳನ್ನು ಈಡೇರಿಸುವವನೂ ಸತ್ಯವಂತನೂ ಆಗಿರುವನು. ಅವನು ಮಾಡಿದ ಎಲ್ಲ ವಾಗ್ದಾನಗಳನ್ನು ನಿಮಗೆ ತೋರಿಸುವನು. ಈ ಕಾಲಘಟ್ಟವು ಲೋಕದ ಅಂತಿಮ ಕಾಲಘಟ್ಟವಾಗಿದ್ದು ಅನೇಕ ವಿಪತ್ತುಗಳು ಬಂದೆರಗಲಿರುವ ಕಾಲಘಟ್ಟವಾಗಿದ್ದರೂ ಅಲ್ಲಾಹನು ಮುಂಚಿತವಾಗಿ ತಿಳಿಸಿದ ಎಲ್ಲ ಸಂಗತಿಗಳು ಈಡೇರುವ ತನಕ ಈ ಲೋಕವು ನಾಶವಾಗದೆ ಉಳಿಯುವುದು. (ಅಲ್ಲಾಹನು ಹಝ್ರತ್ ಮಸೀಹ್ ಮೌಊದ್(ಅ)ರೊಂದಿಗೆ ಮಾಡಿದ ಅನೇಕ ವಾಗ್ದಾನಗಳು ಈಡೇರಲು ಬಾಕಿಯಿವೆ.) ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ನಾನು ಅಲ್ಲಾಹನ ಒಂದು ದಿವ್ಯಶಕ್ತಿಯ ರೂಪದಲ್ಲಿ ಪ್ರಕಟವಾದೆನು. ನಾನು ಅಲ್ಲಾಹನ ದಿವ್ಯಶಕ್ತಿಯ ಸ್ವರೂಪನಾಗಿರುವೆನು. ನನ್ನ ಅನಂತರ ಕೆಲವರು ಅಲ್ಲಾಹನ ದ್ವಿತೀಯ ದಿವ್ಯಶಕ್ತಿಯನ್ನು ಪ್ರಕಟಿಸುವವರಾಗುವರು.
(ರಿಸಾಲ ಅಲ್‌ವಸಿಯ್ಯತ್, ರೂಹಾನಿ ಖಝಾಈನ್, ಸಂಪುಟ-20, ಪುಟ-305-306)

ಇಸ್ಲಾಮಿನ ಪುನರುಜ್ಜೀವನ ಮತ್ತು ಪ್ರಗತಿಯ ಬಗ್ಗೆ ಅಲ್ಲಾಹನು ಹಝ್ರತ್ ಮಸೀಹ್ ಮೌಊದ್(ಅ)ರೊಂದಿಗೆ ಮಾಡಿದ ವಾಗ್ದಾನಗಳು ಖಂಡಿತವಾಗಿಯೂ ಈಡೇರುವುವು. ಇಸ್ಲಾಮಿನ ವಿಜಯದ ದಿನವನ್ನು ಅಹ್ಮದಿಯಾ ಜಮಾಅತ್ ನೋಡುವುದು. ಜಮಾಅತಿನ ಪ್ರಗತಿಯ ದಿನವನ್ನೂ ನೋಡುವುದು. ಇನ್‌ಶಾ ಅಲ್ಲಾಹ್. ಖಿಲಾಫತಿನೊಂದಿಗೆ ಹೊಂದಿಕೊಂಡಿರುವವರು ಅಲ್ಲಾಹನ ಅನುಗ್ರಹಗಳ ವಾರಸುದಾರರಾಗುತ್ತಾ ಹೋಗುವರು.

ಅಹ್ಮದಿಯಾ ಜಮಾಅತ್ ಲೋಕದಲ್ಲಿ ಹರಡುವುದು. ಇದನ್ನೇ ಹಝ್ರತ್ ಮಸೀಹ್ ಮೌಊದ್(ಅ) ಹೇಳಿರುವರು. ಜಮಾಅತಿನ ವಿಜಯದ ಬಗ್ಗೆ ಅವರು ಹೀಗೆ ಹೇಳುತ್ತಾರೆ: ಇದು ಅಲ್ಲಾಹನ ನಡೆವಳಿಕೆಯಾಗಿದೆ. ಅವನು ತನ್ನ ಪ್ರವಾದಿಗಳಿಗೆ ಮತ್ತು ಸಂದೇಶವಾಹಕರಿಗೆ ಸಹಾಯ ಮಾಡುತ್ತಾನೆ ಮತ್ತು ಅವರಿಗೆ ಜಯವನ್ನು ದಯಾಪಾಲಿಸುತ್ತಾನೆ ಎಂಬ ನಡೆವಳಿಕೆಯನ್ನು ಅಲ್ಲಾಹನು ಮನುಷ್ಯನನ್ನು ಭೂಮಿಯಲ್ಲಿ ಸೃಷ್ಟಿಸಿದ ನಂತರ ಪ್ರಕಟಿಸುತ್ತಾ ಇದ್ದಾನೆ. ಪವಿತ್ರ ಖುರ್‌ಆನಿನಲ್ಲಿ ಅಲ್ಲಾಹನು ಹೀಗೆನ್ನುತ್ತಾನೆ: **ಕತಬಲ್ಲಾಹು ಲಅಗ್‌ಲಿಬನ್ನ ಅನ ವ ರುಸುಲೀ**. ಅರ್ಥ: "ಅಲ್ಲಾಹನು ಬರೆದಿಟ್ಟಿರುವನು: ನಾನು ಮತ್ತು ನನ್ನ ಪ್ರವಾದಿಗಳು ನಿಶ್ಚಯವಾಗಿಯೂ ಜಯಶಾಲಿಗಳಾಗುವೆವು." ಈ ವಚನದಲ್ಲಿರುವ ಜಯ ಎಂಬ ಪದದ ಅರ್ಥವೇನೆಂದರೆ ಅಲ್ಲಾಹನ ಅಸ್ತಿತ್ವದ ಸಾಕ್ಷ್ಯಾಧಾರಗಳು ಭೂಮಿಯಲ್ಲಿ ಪೂರ್ಣವಾಗಿ ಪ್ರಕಟಗೊಳ್ಳಬೇಕು ಮತ್ತು ಅವುಗಳನ್ನು ಯಾರಿಂದಲೂ ತಡೆಯಲು ಸಾಧ್ಯವಾಗಬಾರದು ಎಂಬ ಇಚ್ಛೆಯನ್ನು ಪ್ರವಾದಿಗಳೂ ಸಂದೇಶವಾಹಕರೂ ಹೊಂದಿರುತ್ತಾರೆ. ಈ ರೀತಿ ಬಲಯುತವಾದ ದೃಷ್ಟಾಂತಗಳ ಮೂಲಕ ಅಲ್ಲಾಹನು ತನ್ನ ಪ್ರವಾದಿಗಳ ಮತ್ತು ಸಂದೇಶವಾಹಕರ ಸತ್ಯವನ್ನು ಪ್ರಕಟಿಸುತ್ತಾನೆ. ಯಾವ ಸತ್ಯವನ್ನು ಲೋಕದಲ್ಲಿ ಹರಡಲು ಇಚ್ಛಿಸುತ್ತಾನೋ ಅದರ ಬೀಜ ಬಿತ್ತುವಿಕೆಯನ್ನು ಅವರ ಕೈಗಳ ಮೂಲಕ ನಡೆಸುತ್ತಾನೆ. ಆದರೆ ಅದರ ಪೂರ್ಣ ಬೆಳವಣಿಗೆಯನ್ನು ಅವರ ಕೈಗಳಿಂದ ಈಡೇರಿಸುವುದಿಲ್ಲ. ಬದಲಾಗಿ ಅಲ್ಲಾಹನು ತನ್ನ ಶಕ್ತಿಯ ಇನ್ನೊಂದು ಹಸ್ತವನ್ನು ತೋರಿಸುತ್ತಾನೆ. ಅಪೂರ್ಣವಾಗಿ ಉಳಿದಿದ್ದ ಉದ್ದೇಶ ಲಕ್ಷ್ಯಗಳು ಪೂರ್ಣತೆಗೆ ತಲುಪಿಸುವಂತಹ ಕಾರಣಗಳನ್ನು, ಏರ್ಪಾಡುಗಳನ್ನು ಅವನು ಉಂಟುಮಾಡುತ್ತಾನೆ. (ರಿಸಾಲ ಅಲ್‌ವಸಿಯ್ಯತ್, ರೂಹಾನಿ ಖಝಾಈನ್, ಸಂಪುಟ-20, ಪುಟ-304)

ಹಝ್ರತ್ ಮಸೀಹ್ ಮೌಊದ್(ಅ) ಮಾಡಿದ ಭವಿಷ್ಯವಾಣಿಗಳು, ಅವರು ಪ್ರಸ್ತಾಪಿಸಿದ ಅಲ್ಲಾಹನ ವಾಗ್ದಾನಗಳು ಪೂರ್ಣವಾಗಿ ಈಡೇರುವುವು. ಅವರ ನಂತರ ಜಾರಿಗೊಂಡ ಖಿಲಾಫತ್ ವ್ಯವಸ್ಥೆಯ ಮೂಲಕವೇ ಅವುಗಳು ಈಡೇರುವುವು.

ಅಲ್ಲಾಹನು ಜಮಾಅತಿಗೆ ಪ್ರಗತಿಯನ್ನು ನೀಡುವನು ಮತ್ತು ನೀಡುತ್ತಾನೆ. ಸ್ವತಃ ಜನರನ್ನು ಅದರ ಕಡೆಗೆ ಕೊಂಡೊಯ್ಯುತ್ತಾನೆ. ಖಿಲಾಫತಿನೊಂದಿಗೆ ಅವರನ್ನು ಜೋಡಿಸುತ್ತಾನೆ. ಇದು ಮನುಷ್ಯನಿಂದ ಸಾಧ್ಯವಾಗುವ ಕೆಲಸವಲ್ಲ. ಜಮಾಅತಿನ ಸದಸ್ಯರನ್ನು ಮತ್ತು ಕಾಲಘಟ್ಟದ ಖಲೀಫರನ್ನು ಒಂದು ಸುದೃಢವಾದ ಬಂಧನದಲ್ಲಿ, ಸಂಬಂಧದಲ್ಲಿ ಜೋಡಿಸಿಡುವುದು ಮನುಷ್ಯನಿಗೆ ಸಾಧ್ಯವಾದ ಕಾರ್ಯವಲ್ಲ. ಮೊದಲೇ ಅಹ್ಮದಿಯಾಗಿರುವವರ ಹೃದಯವನ್ನು ಖಿಲಾಫತಿನೊಂದಿಗೆ ಜೋಡಿಸುವುದು ಮಾತ್ರವಲ್ಲ, ಅನಂತರ ಬಂದು ಸೇರಿದವರ ಹೃದಯವನ್ನು ಕೂಡ ಖಿಲಾಫತಿನೊಂದಿಗೆ ಜೋಡಿಸುತ್ತಿದ್ದಾನೆ. ಅವರ ಸರಿಯಾದ ತರಬೇತಿ ಕೂಡ ನಡೆದಿಲ್ಲವಾದರೂ. ಇಂತಹ ಸಂಬಂಧವನ್ನು ಮಾಡಿದ್ದು ಕೇವಲ ಅಲ್ಲಾಹನ ಕೆಲಸವಾಗಿದೆ. ಹಝ್ರತ್ ಮಸೀಹ್ ಮೌಊದ್(ಅ) ರೊಂದಿಗೆ ತೋರಿಸಿದ ಅದೇ ನಿಷ್ಠೆ ಮತ್ತು ಪ್ರಾಮಾಣಿಕತೆಯನ್ನು, ಹಝ್ರತ್ ಮಸೀಹ್ ಮೌಊದ್(ಅ)ರ ಕೆಲಸವನ್ನು ಈಡೇರಿಸುವುದಕ್ಕಾಗಿ ಅವರ ಖಲೀಫರೊಂದಿಗೆ ಕೂಡ ಜನರು ತೋರಿಸುತ್ತಾರೆ.

ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್(ರ)ರೊಂದಿಗೆ ಜನರು ತೋರಿಸಿದ ನಿಷ್ಠೆಯು ಅಲ್ಲಾಹನ ವಿಶೇಷವಾದ ಸಹಾಯ ಮತ್ತು ನೆರವು ಅಲ್ಲದೇ ಬೇರೇನಾಗಿತ್ತು.

ಪ್ರತಿಯೊಂದು ಜಮಾಅತಿನಲ್ಲಿ ಇರುವಂತಹ ಕೆಲವು ಕಪಟವಿಶ್ವಾಸಿಗಳ ಹೊರತು ಉಳಿದ ಎಲ್ಲರೂ ನಿಷ್ಠೆ ಮತ್ತು ಪ್ರೇಮದಲ್ಲಿ ವರ್ಧಿಸುತ್ತಾ ಹೋದರು. ಕಪಟವಿಶ್ವಾಸಿಗಳನ್ನು ಖಲೀಫ ಅವ್ವಲ್(ರ) ಸರಿಯಾಗಿ ಎಚ್ಚರಿಸಿದರು. ಅವರಿಗೆ ತಲೆಯೆತ್ತಲು ಧೈರ್ಯ ಬರಲಿಲ್ಲ. ಮೊದಲನೇ ಖಿಲಾಫತಿನ ಸಮಯದಲ್ಲಿ ಸ್ವರವೆತ್ತುತ್ತಿದ್ದ ಕಪಟವಿಶ್ವಾಸಿಗಳು ಎರಡನೇ ಖಲೀಫ ಆಯ್ಕೆಗೊಂಡಾಗಲೂ ವಿರೋಧಿಸಲು ಆರಂಭಿಸಿದರು. ಆದರೆ ಜಮಾಅತ್ ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹ್ಮೂದ್ ಸಾಹಿಬ್‌ರ ಕೈಯಲ್ಲಿ ಬೈಅತ್ ಮಾಡಿತು. ಈ ಜನರು ಪ್ರಲೋಭಿಸಲು, ಗದ್ದಲವೆಬ್ಬಿಸಲು, ಪಿತೂರಿ ಮತ್ತು ಕಲಹವನ್ನು ಉಂಟುಮಾಡಲು ಪ್ರಯತ್ನಿಸಿದರೂ ಜಮಾಅತ್ ಎಷ್ಟು ವೇಗವಾಗಿ ಪ್ರಗತಿ ಹೊಂದುತ್ತಾ ಹೋಯಿತು ಎಂದು ಲೋಕವು ನೋಡಿತು. ಲೋಕದಲ್ಲಿ ಮಿಶನ್ ಹೌಸ್‌ಗಳು ತೆರೆಯಲ್ಪಟ್ಟುವು, ಮಸೀದಿಗಳು ತೆರೆಯಲ್ಪಟ್ಟುವು, ಸಾಹಿತ್ಯಗಳು ಪ್ರಕಟನೆಗೊಂಡುವು. ಯಾವ ಕೆಲಸಗಳಿಗಾಗಿ ಹಝ್ರತ್ ಮಸೀಹ್ ಮೌಊದ್(ಅ) ಆಗಮಿಸಿದರೋ ಅವು ಮುಂದುವರೆಯುತ್ತಾ ಹೋದುವು.

ಅನಂತರ ಮೂರನೇ ಖಿಲಾಫತಿನ ಕಾಲದಲ್ಲಿ ಸರ್ಕಾರದ ಕಡೆಯಿಂದ ಕಠಿಣವಾದ ವಿರೋಧವನ್ನು ಎದುರಿಸಬೇಕಾಗಿ ಬಂದರೂ ಅಲ್ಲಾಹನು ಜಮಾಅತಿಗೆ ಅಭಿವೃದ್ಧಿಯನ್ನು ದಯಪಾಲಿಸಿದನು. ಭಿಕ್ಷೆಪಾತ್ರೆಯನ್ನು ಜಮಾಅತಿನ ಕೈಯಲ್ಲಿ ಹಿಡಿಸಲು ಉದ್ದೇಶಿಸಿದವರು ಸ್ವತಃ ಹೀನಾಯ ಸ್ಥಿತಿಯಲ್ಲಿ ಲೋಕವನ್ನು ತ್ಯಜಿಸಿದರು.

ಅನಂತರ ನಾಲ್ಕನೇ ಖಿಲಾಫತಿನಲ್ಲಿ ಅಭಿವೃದ್ಧಿಗಳ ಬೇರೊಂದು ಬಾಗಿಲು ತೆರೆಯಿತು. ಇಸ್ಲಾಮಿನ ಪ್ರಚಾರದ ಹೊಸ ಹೊಸ ಮಾರ್ಗಗಳು ತೆರೆಯಲ್ಪಟ್ಟುವು. ಖಲೀಫರ ಕೈಯನ್ನು ಕಡಿಯಲು ಯೋಚಿಸಿದವರ ಸ್ವಂತ ಕೈಗಳು ಕಡಿಯಲ್ಪಟ್ಟುವು. ಆಕಾಶದಲ್ಲಿ ಅವರ ದೇಹಗಳು ಚದುರಿಹೋದುವು. ಆದರೆ ಜಮಾಅತಿನ ಪ್ರಗತಿಯ ಹೆಜ್ಜೆ ನಿಲ್ಲಲಿಲ್ಲ. ತಬ್ಲೀಗಿನ ಮೈದಾನ ವಿಸ್ತಾರಗೊಂಡಿತು. ಎಂ.ಟಿ.ಎ. ಆರಂಭವಾಯಿತು. ಇದರಿಂದ ಪ್ರತಿಯೊಂದು ಮನೆಯಲ್ಲಿ ಜಮಾಅತಿನ ಸಂದೇಶ ತಲುಪಲು ಶುರುವಾಯಿತು. ಇದು ಅಲ್ಲಾಹನ ವಾಗ್ದಾನಗಳ ಈಡೇರುವಿಕೆಯಲ್ಲದೇ ಬೇರೇನು?

ಅನಂತರ ಐದನೇ ಖಿಲಾಫತಿನಲ್ಲೂ ಅಲ್ಲಾಹನು ತನ್ನ ನೆರವುಗಳ ಮತ್ತು ಸಹಾಯಗಳ ದೃಶ್ಯಗಳನ್ನು ತೋರಿಸಿದನು. ಎಂ.ಟಿ.ಎದಲ್ಲೇ ಇಸ್ಲಾಮಿನ ಸಂದೇಶವನ್ನು ತಲುಪಿಸುವ ಮತ್ತು ಹಝ್ರತ್ ಮಸೀಹ್ ಮೌಊದ್(ಅ)ರ ಕಾರ್ಯವನ್ನು ಈಡೇರಿಸಲು ಹೊಸ ಹೊಸ ಮಾರ್ಗಗಳ ಏರ್ಪಾಡಾದುವು. ಒಂದಕ್ಕೆ ಬದಲಾಗಿ ಎಂ.ಟಿ.ಎದ ಏಳೆಂಟು ಚ್ಯಾನಲ್‌ಗಳು ವಿವಿಧ ಭಾಷೆಗಳಲ್ಲಿ ಜಾರಿಗೊಂಡುವು. ಲೋಕದ ಅನೇಕ ಭಾಷೆಗಳಲ್ಲಿ ವಿವಿಧ ಕಾರ್ಯಕ್ರಮಗಳು ಭಾಷಾಂತರವಾಗಲು ಶುರುವಾದುವು. ಎಂ.ಟಿ.ಎ. ತಲುಪದ ಲೋಕದ ಮೂಲೆಗೂ ಎಂ.ಟಿ.ಎ. ತಲುಪಿತು. ಅಲ್ಲಿಯ ಜನರ ಸ್ವಂತ ಭಾಷೆಯಲ್ಲಿ, ಆ ಜನರಿಗೆ, ಆ ದೇಶಗಳಿಗೆ ಮತ್ತು ಆ ಪ್ರದೇಶಗಳ ನಿವಾಸಿಗಳಿಗೆ ಅಹ್ಮದಿಯ್ಯತ್ ಮತ್ತು ನೈಜ ಇಸ್ಲಾಮಿನ ಸಂದೇಶ ತಲುಪಲು ಶುರುವಾಯಿತು. ಅದರಿಂದ ಲಕ್ಷಾಂತರ ಸೌಭಾಗ್ಯಶಾಲಿಗಳಿಗೆ ಅಹ್ಮದಿಯ್ಯತ್ ಸ್ವೀಕಾರ ಮಾಡುವ ಸೌಭಾಗ್ಯ ಲಭಿಸಿತು.

ಅನಂತರ ಎಂ.ಟಿ.ಎ. ಮತ್ತು ರೇಡಿಯೋ ಕಾರ್ಯಕ್ರಮಗಳಲ್ಲದೆಯೂ ಅಲ್ಲಾಹನು ಸ್ವತಃ ಜನರಿಗೆ ಸನ್ಮಾರ್ಗವನ್ನು ತೋರಿಸಿಕೊಟ್ಟನು. ಜನರಿಗೆ ಕನಸುಗಳ ಮೂಲಕ ಮತ್ತು ಅನೇಕ ಸಾಹಿತ್ಯಗಳ ಮೂಲಕ ಅಹ್ಮದಿಯ್ಯತ್ತಿನ ಸಂದೇಶವನ್ನು ಸ್ವೀಕಾರ ಮಾಡುವ ಸೌಭಾಗ್ಯವನ್ನು ಅಲ್ಲಾಹನು ದಯಪಾಲಿಸಿದನು. ನಾವು ಅಹ್ಮದಿಯ್ಯತ್ತಿನ ಚರಿತ್ರೆಯನ್ನು ನೋಡುವಾಗ, ಯಾವ ರೀತಿಯಲ್ಲಿ ಹಝ್ರತ್ ಮಸೀಹ್ ಮೌಊದ್(ಅ)ರನ್ನು ನಂಬುವ ಕಡೆಗೆ ಕೆಲವು ಜನರಿಗೆ ಅಲ್ಲಾಹನು ಸ್ವತಃ ದಾರಿ ತೋರಿಸಿಕೊಡುತ್ತಿದ್ದನು ಎಂದು ಗೊತ್ತಾಗುವುದು. ಅನಂತರ ಇದೇ ರೀತಿಯು ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್(ರ)ರ ಕಾಲಘಟ್ಟದಲ್ಲೂ ಮುಂದುವರೆಯಿತು. ಅಲ್ಲಾಹನು ಸ್ವತಃ ಜನರಿಗೆ ಮಾರ್ಗದರ್ಶನ ತೋರಿಸುತ್ತಿದ್ದನು. ಅನಂತರ ಎರಡನೇ ಖಿಲಾಫತ್ ಕಾಲದಲ್ಲೂ ಇಂತಹ ಅನೇಕ ಘಟನೆಗಳು ನಡೆದುವು. ಯಾವ ರೀತಿಯಲ್ಲಿ ಕುಟುಂಬದ ಹಿರಿಯರಿಗೆ ಸತ್ಯವನ್ನು ಸ್ವೀಕಾರ ಮಾಡಲು ಅಲ್ಲಾಹನ ಸೌಭಾಗ್ಯ ನೀಡಿದನು ಎಂಬುದರ ವರದಿಗಳು ಹಿಂದಿನ ಕುಟುಂಬಗಳಲ್ಲಿ ಕಾಣಬಹುದಾಗಿವೆ. ಅನಂತರ ಮೂರನೇ ಖಿಲಾಫತಿನಲ್ಲೂ ಈ ಪರಂಪರೆ ಕಾಣಬಹುದಾಗಿದೆ. ನಾಲ್ಕನೇ ಖಿಲಾಫತಿನಲ್ಲೂ ಸಾತ್ವಿಕರಿಗೆ ಅಲ್ಲಾಹನು ಅಹ್ಮದಿಯ್ಯತ್ ಸ್ವೀಕಾರ ಮಾಡುವ ಕಡೆಗೆ ದಾರಿ ತೋರಿಸಿದನು. ಇವೆಲ್ಲವೂ ಹಝ್ರತ್ ಮಸೀಹ್ ಮೌಊದ್(ಅ)ರೊಂದಿಗೆ ಅಲ್ಲಾಹನು ಮಾಡಿದ ವಾಗ್ದಾನಗಳ ಕಾರಣದಿಂದಾಗಿತ್ತು. ಈ ರೀತಿಯಾಗಿ ಪ್ರತಿಯೊಂದು ಖಿಲಾಫತಿನ ಕಾಲಘಟ್ಟದಲ್ಲೂ ಜಮಾಅತ್ ಅಭಿವೃದ್ಧಿಗೊಳ್ಳುತ್ತಾ ಹೋಯಿತು. ಐದನೇ ಖಿಲಾಫತ್ ಕಾಲದಲ್ಲೂ ಅಲ್ಲಾಹನ ರೀತಿಗಳು ಇವೇ ಆಗಿವೆ. ಅಲ್ಲಾಹನು ತಬ್ಲೀಗಿನ ಹೊಸ ಹೊಸ ಮಾರ್ಗಗಳನ್ನು ತೆರೆಯುತ್ತಾ ಹೋಗುತ್ತಿದ್ದಾನೆ. ಇಸ್ಲಾಮಿನ ನೈಜ ಸಂದೇಶವಾದ ಹಝ್ರತ್ ಮಸೀಹ್ ಮೌಊದ್(ಅ)ರ ಸಂದೇಶವನ್ನು ಆಲಿಸುವ ಮತ್ತು ಸ್ವೀಕಾರ ಮಾಡುವ ಕಡೆಗೆ ಜನರ ಹೃದಯಗಳನ್ನು ಅಲ್ಲಾಹನು ಸೆಳೆಯುತ್ತಾ ಹೋಗುತ್ತಿದ್ದಾನೆ. ಅಪ್ಪಟ ಅಲ್ಲಾಹನ ಸಹಾಯವಾಗಿದೆ ಎಂದು ಗೊತ್ತುಪಡಿಸುವಂತಹ ಅಹ್ಮದಿಯ್ಯತ್ ಸ್ವೀಕಾರದ ಘಟನೆಗಳು ನಡೆಯುತ್ತಿವೆ. ಕೇವಲ ಮನುಷ್ಯ ಪ್ರಯತ್ನಗಳಿಂದ ಈ ಜನರು ಎಂದಿಗೂ ಈ ರೀತಿಯಾಗಿ ಸ್ವೀಕಾರ ಮಾಡುತ್ತಿರಲಿಲ್ಲ. ಯಾವ ರೀತಿಯಲ್ಲಿ ಅಲ್ಲಾಹನು ಜನರ ಹೃದಯಗಳನ್ನು ಇಸ್ಲಾಂ ಮತ್ತು ಅಹ್ಮದಿಯ್ಯತ್ ಕಡೆಗೆ ಸೆಳೆಯುವ ಏರ್ಪಾಡನ್ನು ಮಾಡಿದನು, ಹೇಗೆ ಅಹ್ಮದಿಯಾ ಖಿಲಾಫತಿನ ಸತ್ಯತೆಯನ್ನು ತೆರೆದನು ಹಾಗೂ ಹೇಗೆ ಜನರ ಹೃದಯಗಳಲ್ಲಿ ಖಿಲಾಫತಿನ ಪ್ರೀತಿಯನ್ನು ಹುಟ್ಟಿಸಿದನು ಎಂಬುದರ ಕೆಲವು ಘಟನೆಗಳನ್ನು ನಾನು ಹೇಳುತ್ತೇನೆ.

ಗಿನಿಬಸಾವ್ ಆಫ್ರಿಕದ ಒಂದು ದೂರದ ಪ್ರದೇಶವಾಗಿದೆ. ಅಲ್ಲಿ ಹಿಂದೆ ಕ್ರೈಸ್ತರಾಗಿದ್ದ ಅಬ್ದುಲ್ಲಾಹ್ ಎಂಬ ಹೆಸರಿನ ವ್ಯಕ್ತಿಯಿರುವರು. ಕೆಲವು ಕಾಲದ ಹಿಂದೆ ಅವರು ಒಂದು ಕನಸನ್ನು ಕಂಡರು. ಅವರು ಹೇಳುತ್ತಾರೆ: ಕನಸಿನಲ್ಲಿ ಬಿಳಿ ಗಡ್ಡದ ಒಬ್ಬ ವ್ಯಕ್ತಿಯಿದ್ದರು. ಅವರು ಮುಂಡಾಸನ್ನು ಕೂಡ ಧರಿಸಿದ್ದರು ಮತ್ತು ಜನರನ್ನು ಸಂಬೋಧಿಸಿ ಭಾಷಣ ಮಾಡುತ್ತಿದ್ದರು. ಮೌನವಾಗಿ ಜನರು ಅವರ ಭಾಷಣವನ್ನು ಆಲಿಸುತ್ತಿದ್ದರು. ಆ ವ್ಯಕ್ತಿ ಭಾಷಣ ಮಾಡುವ ಶೈಲಿ ಬಹಳ ಸರಳ ಮತ್ತು ನಮ್ಮ ಜನರಿಗಿಂತ ಬೇರೆಯೇ ಆಗಿತ್ತು. ಎಚ್ಚರವಾದಾಗ ಇದೇನೆಂದು ಅವರಿಗೆ ಗೊತ್ತಾಗಲಿಲ್ಲ ಮತ್ತು ಕನಸನ್ನು ಮರೆತುಬಿಟ್ಟರು. ಕೆಲವು ದಿನದ ನಂತರ ಇದೇ ರೀತಿಯ ಇನ್ನೊಂದು ಕನಸನ್ನು ಅವರು ಕಂಡರು. ಇದರಿಂದ ಅವರ ಮನಸ್ಸಲ್ಲಿ ಆ ಮುಖ ಅಚ್ಚಾದಿಸಲ್ಪಟ್ಟಿತು. ಮರೆತು ಬಿಡಲಿಲ್ಲ. ಅನಂತರ ಮೂರನೇ ಬಾರಿ ಅವರು ಕನಸನ್ನು ಕಂಡರು. ಇವರು ಯಾರೆಂದು ಅರಿಯಲು ಅವರು ಪ್ರಯತ್ನಿಸಿದರು. ಆದರೆ ಗೊತ್ತಾಗಲಿಲ್ಲ. ಒಂದು ದಿನ ಕಾಕತಾಳೀಯವೆಂಬಂತೆ ಅವರು ಅವರ ಗ್ರಾಮದ ಸಮೀಪದಲ್ಲಿರುವ ಪಟ್ಟಣವಾದ ಫರೀನಲ್ಲಿ ಇರುವ ಅಹ್ಮದಿಯರ ಮಸೀದಿಗೆ ಹೋದರು. ಅಂದು ಜುಮಾ ದಿನವಾಗಿತ್ತು. ಜಮಾಅತಿನ ಸಹೋದರರು ಎಂ.ಟಿ.ಎದಲ್ಲಿ ನನ್ನ ಖುತ್ಬ ಆಲಿಸುತ್ತಿದ್ದರು. ನನ್ನನ್ನು ನೋಡಿ, ಖುತ್ಬ ನೀಡುತ್ತಿರುವ ವ್ಯಕ್ತಿ ಯಾರೆಂದು ಅವರು ಬೇಗನೇ ಮುಅಲ್ಲಿಂ ಸಾಹಿಬ್‌ರೊಡನೆ ಕೇಳಿದರು. ನಮ್ಮ ಖಲೀಫ ಎಂದು ಅವರು ಹೇಳಿದರು. ಹೇಗಿದ್ದರೂ ಅವರು ಮೌನವಾಗಿ ಕುಳಿತುಕೊಂಡು ಖುತ್ಬ ಆಲಿಸಿದರು. ಖುತ್ಬದ ನಂತರ ಜಮಾಅತಿನ ಸಹೋದರರ ಜೊತೆಗೆ ನಮಾಝ್ ನಿರ್ವಹಿಸಿದರು. ನಮಾಝ್ ಮುಗಿಸಿದ ನಂತರ ಬೇಗನೇ ಎದ್ದುನಿಂತರು ಮತ್ತು ಹೀಗೆ ಹೇಳಿದರು: ಇಂದು ನಾನು ಇಸ್ಲಾಂ ಧರ್ಮವನ್ನು ಸ್ವೀಕಾರ ಮಾಡುತ್ತೇನೆ. ಮೂರು ಬಾರಿ ಅಲ್ಲಾಹನು ನನಗೆ ಈ ವ್ಯಕ್ತಿಯನ್ನು ಕನಸಿನಲ್ಲಿ ತೋರಿಸಿದ್ದನು. ಅದರ ಆಳವಾದ ಪ್ರಭಾವ ನನ್ನ ಆತ್ಮದಲ್ಲಿ ಉಂಟಾಗಿತ್ತು. ಬಹಳ ಕಾಲದಿಂದ ಇವರನ್ನು ನಾನು ಹುಡುಕುತ್ತಿದ್ದೆ. ಆದರೆ ಇಂದು ಆಕಸ್ಮಿಕವಾಗಿ ನಾನು ನಿಮ್ಮ ಮಸೀದಿಗೆ ಬಂದೆನು ಮತ್ತು ನಿಮ್ಮ ಖಲೀಫರನ್ನು ಕಂಡೆನು. ನಾನು ಕನಸಿನಲ್ಲಿ ಕಂಡ ಅದೇ ಮುಖವಾಗಿದೆ ಇದು. ನಾನು ಕನಸಿನಲ್ಲಿ ಕಂಡ ದೃಶ್ಯವು ಇದೇ ರೀತಿಯದ್ದಾಗಿತ್ತು. ಜನರು ಮೌನವಾಗಿ ಕುಳಿತುಕೊಂಡು ಭಾಷಣವನ್ನು ಆಲಿಸುತ್ತಿದ್ದರು. ನಾನು ಇಸ್ಲಾಂ ಅಹ್ಮದಿಯ್ಯತ್ತಿನಲ್ಲಿ ಪ್ರವೇಶಿಸುತ್ತೇನೆ.

ದೂರ ಪ್ರದೇಶದ ಒಬ್ಬ ವ್ಯಕ್ತಿಯನ್ನು ಅಲ್ಲಾಹನು ಕನಸಿನ ಮೂಲಕ ಸನ್ಮಾರ್ಗದ ಕಡೆಗೆ ಎಳೆದನು ಮತ್ತು ಕನಸಿನಲ್ಲಿ ಕಂಡ ದೃಶ್ಯವನ್ನು ಸತ್ಯದಲ್ಲಿಯೂ ಕಾಣುವ ಏರ್ಪಾಡು ಮಾಡಿದನು.

ನಮ್ಮೊಂದಿಗೆ ಹೀಗೇಕೆ ಆಗುವುದಿಲ್ಲವೆಂದು ಕೆಲವರು ಪ್ರಶ್ನಿಸುತ್ತಾರೆ. ಅವನು ಬಯಸುವವರನ್ನು ಸನ್ಮಾರ್ಗದ ಕಡೆಗೆ ಕೊಂಡೊಯ್ಯುತ್ತಾನೆ ಎಂಬುದು ಅವನ ಕೃಪೆಯಾಗಿದೆ. ಆದರೆ ಅದಕ್ಕಾಗಿ ಒಬ್ಬ ವ್ಯಕ್ತಿಯೊಳಗೆ ಉತ್ತಮ ಸ್ವಭಾವಗುಣ ಇರಬೇಕಾದದ್ದು ಆವಶ್ಯವಾದ ಸಂಗತಿಯಾಗಿದೆ. ಅಲ್ಲಾಹನ ಕಡೆಗೆ ಬಾಗಲೂ ಬೇಕು. ಆ ವ್ಯಕ್ತಿಯಲ್ಲಿ ಖಂಡಿತವಾಗಿಯೂ ಅಲ್ಲಾಹನ ಸಂಪ್ರೀತಿಗೆ ಕಾರಣವಾಗುವಂತಹ ಒಳಿತು ಇರಬೇಕು. ಆದ್ದರಿಂದಲೇ ಅಲ್ಲಾಹನು ಅವರನ್ನು ಸನ್ಮಾರ್ಗದ ಕಡೆಗೆ ತಂದನು.

ಗೇಂಬಿಯದ ಅಮೀರ್ ಸಾಹಿಬ್ ಬರೆಯುತ್ತಾರೆ: ಅಲ್ಲಿ ಸಿಸ್ಟರ್ ಫಾಟೂ ಸಾಹಿಬ ಎಂಬ 60 ವರ್ಷ ಪ್ರಾಯವಿರುವ ಒಬ್ಬ ಮಹಿಳೆ ಇರುವರು. ಆ ಮಹಿಳೆ ಹೇಳುತ್ತಾರೆ: ನಮ್ಮ ಪ್ರದೇಶದಲ್ಲಿ ಒಂದು ಇಸ್ಲಾಮಿಕ ಗ್ರೂಪಿನ ವ್ಯಕ್ತಿಗಳು ಬಂದರು. ಅವರು ಜಮಾಅತಿನ ವಿರುದ್ಧ ಮಾತುಕತೆ ನಡೆಸಲು ಶುರುಮಾಡಿದರು. ಅಹ್ಮದಿಯರು ಕಾಫಿರ್‌ಗಳು ಮತ್ತು ಅವರು ಎಂದಿಗೂ ಸ್ವರ್ಗದಲ್ಲಿ ಪ್ರವೇಶಿಸಲಾರರು ಎಂದು ಹೇಳಿದರು. ಅಹ್ಮದಿಯರೊಂದಿಗೆ ಯಾವುದೇ ರೀತಿಯ ಕೊಡು–ಕೊಳ್ಳುವಿಕೆಯನ್ನು ಮಾಡಬಾರದು ಎಂದೂ ಹೇಳಿದರು. ಗ್ರಾಮವಾಸಿಗಳಲ್ಲಿ ಬಹುತೇಕರು ಅವರ ಮಾತನ್ನು ಒಪ್ಪಿದರು. ಆದರೆ ಈ ಮಹಿಳೆ ಚಿಂತಿತಳಾದಳು. ಅವರು ಸನ್ಮಾರ್ಗಕ್ಕಾಗಿ ಅಲ್ಲಾಹನಲ್ಲಿ ದುಆ ಮಾಡಲು ಶುರುಮಾಡಿದರು. ಕೆಲವು ದಿನಗಳ ನಂತರ ಅವರೊಂದು ಕನಸನ್ನು ಕಂಡರು. ಅವರ ಗ್ರಾಮಕ್ಕೆ ಬಂದಿದ್ದ ಆ ಇಸ್ಲಾಮಿಕ ಗ್ರೂಪಿನ ಸದಸ್ಯರನ್ನು ಕನಸಿನಲ್ಲಿ ಕಂಡರು. ಅವರ ಕಣ್ಣುಗಳು ಹೊಳೆಯುತ್ತಿದ್ದುವು ಮತ್ತು ಅವರ ಕೈಗಳಲ್ಲಿ ಪವಿತ್ರ ಖುರ್‌ಆನ್ ಕೂಡ ಇತ್ತು. ಆದರೆ ಅವರಿಗೆ ಅದರಲ್ಲಿರುವ ಬರಹವನ್ನು ಕಾಣಲು ಸಾಧ್ಯವಾಗುತ್ತಿಲ್ಲ ಎಂದು ದೂರುತ್ತಿದ್ದರು. ಅಲ್ಲಾಹನು ಅವರನ್ನು ಕುರುಡರನ್ನಾಗಿ ಮಾಡಿರುವನು ಎಂದು ಅವರು ಬೊಬ್ಬೆ ಹಾಕುತ್ತಿದ್ದರು. ಇದರಿಂದ ಹೊಟ್ಟೆಪಾಡಿಗಾಗಿ ಸಂಪಾದಿಸಲು ಕೂಡ ಸಾಧ್ಯವಾಗುತ್ತಿಲ್ಲ ಮತ್ತು ನಾಶವಾಗುತ್ತಿದ್ದೇವೆ ಎಂದು ಅವರು ಹೇಳುತ್ತಿದ್ದರು. ಆ ಗ್ರೂಪಿನ ಸದಸ್ಯರು ಅಹ್ಮದಿಯಾ ಜಮಾಅತಿನ ಖಲೀಫರಿಗೆ ಹಸ್ತದಾನ ಮಾಡಲು ಬಯಸುತ್ತಿದ್ದರು ಆದರೆ ಅದು ಕೂಡ ಅವರಿಗೆ ಸಾಧ್ಯವಾಗುತ್ತಿರಲಿಲ್ಲ. ಅಹ್ಮದಿಯ್ಯತ್ ನಿಸ್ಸಂಶಯವಾಗಿಯೂ ಸತ್ಯವಾಗಿದೆ ಆದರೆ ನಾವು ಅದನ್ನು ನಂಬಿದರೆ ನಮ್ಮ ಶಿಷ್ಯರು ನಮ್ಮನ್ನು ಬಿಟ್ಟುಹೋಗುವರು ಎಂದು ಕೂಡ ಅವರು ಕನಸಿನಲ್ಲಿ ಹೇಳುತ್ತಿದ್ದರು. ಹೇಗಿದ್ದರೂ ಈ ಮಹಿಳೆ ಬೆಳಿಗ್ಗೆ ಎದ್ದು ತನ್ನ ಮನೆಯವರಿಗೆ ಈ ಕನಸನ್ನು ಹೇಳಿಕೊಟ್ಟರು. ಆಫ್ರಿಕರಿಗೆ ವಿವೇಕ ಮತ್ತು ಬುದ್ಧಿಯಿಲ್ಲವೆಂದು ಜನರು ಹೇಳುತ್ತಾರೆ. ಆದರೆ ಇಲ್ಲಿ ಆ ಮಹಿಳೆ ಈ ಕನಸಿನ ವ್ಯಾಖ್ಯಾನ ಮಾಡುತ್ತಾಳೆ. ಕನಸಿನಲ್ಲಿ ಕಂಡ ಆ ಸದಸ್ಯರ ಕಣ್ಣುಗಳು ಹೊಳೆಯುತ್ತಿದ್ದರೂ ಅವರಿಗೆ ಪವಿತ್ರ ಖುರ್‌ಆನಿನ ಬರಹ ಓದಲು ಸಾಧ್ಯವಾಗುತ್ತಿರಲಿಲ್ಲ. ಇದರ ಅರ್ಥ, ಅವರು ಸತ್ಯದಿಂದ ಪೂರ್ಣವಾಗಿ ಅಗಲಿ ಹೋಗಿರುವರು ಎಂದಾಗಿದೆ. ಅಹ್ಮದಿಯ್ಯತ್ ಸ್ವೀಕಾರಕ್ಕೆ ಸಂಬಂಧಿಸಿ ಇಂತಹ ವಿಸ್ಮಯಕರವಾದ ಘಟನೆಗಳು ಕೆಲವರಿಗೆ ಉಂಟಾಗಿದೆ. ಅಲ್ಲಾಹನ ವಿಶೇಷವಾದ ನೆರವಿನಿಂದ ಅವರು ಇಂತಹ ಕನಸನ್ನು ಕಾಣುತ್ತಾರೆ.

ಗೋಯಿಟಮಾಲ ಸೌತ್ ಅಮೇರಿಕದ ದೇಶಗಳಲ್ಲಿ ಒಂದಾಗಿದೆ. ಇಲ್ಲಿರುವ ನಮ್ಮ ಮಸೀದಿಯಿಂದ 250 ಕಿ.ಮಿ. ದೂರದಲ್ಲಿ ಮೆಕ್ಸಿಕೋದ ಗಡಿಯಲ್ಲಿ ಒಂದು ಪ್ರದೇಶವಾದ ಸಾನ್‌ಮಾರ್ಕೋಸ್ ಇದೆ. ಅಲ್ಲಿ ಯೂರೋನಿಕ ಎಂಬ ಹೆಸರಿನ ಸ್ತ್ರೀಯೊಬ್ಬರು ಇರುವರು. ಅವರು ಹೇಳುತ್ತಾರೆ: 10 ವರ್ಷಗಳಿಗೆ ಮುಂಚೆ ನಾನು ಒಂದು ಕನಸನ್ನು ಕಂಡೆ. ಸತ್ಯದ ಮಾರ್ಗ ಇಸ್ಲಾಮ್ ಆಗಿದೆ ಎಂದು ಒಬ್ಬ ವ್ಯಕ್ತಿ ಬಂದು ಹೇಳಿದರು ಮತ್ತು ಪವಿತ್ರ ಖುರ್‌ಆನ್ ಓದಲು ಹೇಳಿದರು.

ನನಗೆ ಪವಿತ್ರ ಖುರ್‌ಆನ್ ಓದಲು ಗೊತ್ತಿಲ್ಲವೆಂದು ನಾನು ಹೇಳಿದೆ. ನಿನಗೆ ಓದಲು ಸಾಧ್ಯವಿದೆ ಎಂದು ಅವರು ಹೇಳಿದರು. ಬೆಳಿಗ್ಗೆ ಎದ್ದು ಅವರು ಈ ಕನಸನ್ನು ತನ್ನ ಪತಿ ಮತ್ತು ಪಿತರೊಡನೆ ಹೇಳಿದರು. ಅವರು ಹೀಗೆ ಹೇಳಿದರು: ಇಸ್ಲಾಂ ಯಾವುದೇ ಸತ್ಯದ ಮಾರ್ಗವಲ್ಲ. ಅದು ಭಯೋತ್ಪಾದನೆಯ ಧರ್ಮವಾಗಿದೆ. ಆದರೆ ನನಗೆ ಸಮಾಧಾನವಾಗಲಿಲ್ಲ. ನಾನು ಇಂಟರ್‌ನೆಟಿನಲ್ಲಿ ಇಸ್ಲಾಮಿನ ಬಗ್ಗೆ ಶೋಧನೆ ನಡೆಸಲು ಆರಂಭಿಸಿದೆ. ಸ್ವತಃ ಇಸ್ಲಾಮಿನ ಬಗ್ಗೆ ಇಂಟರ್‌ನೆಟಿನಂದ ಕಲಿಯುತ್ತಿದ್ದರು. ಒಂದು ದಿನ ಮಾರುಕಟ್ಟೆಯಲ್ಲಿ ನಡೆಯುತ್ತಿದ್ದಾಗ ಪರ್ದಾ ಧರಿಸಿದ ಒಬ್ಬ ಮಹಿಳೆಯನ್ನು ಕಂಡರು. ಹೇಗಿದ್ದರೂ ಅವಳ ಪರ್ದಾವನ್ನು ನೋಡಿಕೊಂಡು ಕುತೂಹಲ ಉಂಟಾಯಿತು. ಅವಳನ್ನು ಹೋಗಿ ಭೇಟಿಯಾದರು. ನಿನ್ನ ವಸ್ತ್ರಧಾರಣೆ ಹೀಗೇಕೆ ಎಂದು ಕೇಳಿದರು. ಅವಳು ಹೇಳಿದಳು: ನಾನು ಮುಸ್ಲಿಮ್, ಆದ್ದರಿಂದ ನಾನು ಪರ್ದಾ ಧರಿಸಿರುವೆ. ಹೀಗೆ ಅವಳೊಂದಿಗೆ ಸಂಪರ್ಕ ಉಂಟಾಯಿತು. ಅವಳೊಂದಿಗೆ ಇಸ್ಲಾಮಿನ ಬಗ್ಗೆ ವಿಶದವಾಗಿ ಮಾತಾಡಿದರು. ಆ ಮಹಿಳೆ ಅಹ್ಮದಿಯಾಗಿದ್ದಳು. ಈ ಸ್ತ್ರೀ ಹೇಳುತ್ತಾರೆ: ಅವಳಿಂದ ಇಸ್ಲಾಮಿನ ಪಾಠಗಳನ್ನು ಆಲಿಸಿ ನಾನು ಬೈಅತ್ ಮಾಡಿದೆ. ಆದರೆ ಮನೆಯವರಿಗೆ ಅದು ಇಷ್ಟವಾಗಲಿಲ್ಲ. ಅವರು ಏನಾದರೂ ಆಕ್ಷೇಪವೆತ್ತುತ್ತಿದ್ದರು. ಅದಕ್ಕೆ ನನ್ನಿಂದ ಉತ್ತರಿಸಲು ಸಾಧ್ಯವಾಗುತ್ತಿರಲಿಲ್ಲ. ಆಗ ನಾನು ಆ ಅಹ್ಮದಿ ಮಹಿಳೆಯೊಡನೆ ನನ್ನ ಮನೆಗೆ ಬರಲು ಮತ್ತು ಆಕ್ಷೇಪಗಳಿಗೆ ಉತ್ತರಿಸಲು ಹೇಳಿದೆ. ನಾನು ನನ್ನ ಸಂಬಂಧಿಕರನ್ನು ಒಟ್ಟುಸೇರಿಸಿದೆ. ಹೀಗೆ ಅನೇಕ ತಬ್ಲೀಗೀ ಸಿಟ್ಟಿಂಗ್‌ಗಳು ನಡೆಯಿತು. ಹೀಗೆ ಅವರು ತಬ್ಲೀಗ್ ಕೂಡ ಮಾಡಲು ಶುರುಮಾಡಿದರು. ಕೇವಲ ಬೈಅತ್ ಮಾಡಿದ್ದು ಮಾತ್ರವಲ್ಲ, ಇಸ್ಲಾಮಿನ ಸಂದೇಶವನ್ನು ಇತರರಿಗೆ ತಲುಪಿಸಲು ಶುರುಮಾಡಿದರು. ಸ್ನೇಹಿತರನ್ನು ಒಟ್ಟುಗೂಡಿಸಿದರು ಮತ್ತು ಅವರಿಗಾಗಿ ರೆಫ್ರೆಶ್‌ಮೆಂಟಿನ ಏರ್ಪಡನ್ನು ಕೂಡ ಮಾಡಿದರು. ಅವರ ಒಬ್ಬ ಮಗ ವಕೀಲ್ ಶಿಕ್ಷಣ ಪಡೆಯುತ್ತಿದ್ದಾನೆ ಮತ್ತು ಯೂನಿವರ್ಸಿಟಿಯಲ್ಲಿ ಕೊನೆಯ ವರ್ಷದಲ್ಲಿ ಇದ್ದಾನೆ. ಅವನು ಕೂಡ ಬೈಅತ್ ಮಾಡಿದನು. ಅವನಗೆ ಎಷ್ಟು ಆವೇಶ ಮತ್ತು ಆಸಕ್ತಿ ಇದೆ ಎಂದರೆ, ಇಂಟರ್‌ನೆಟ್ ಮೂಲಕ ಸ್ವತಃ ಪವಿತ್ರ ಖುರ್‌ಆನ್ ಕಲಿತನು. ಅನೇಕ ಸೂರತುಗಳನ್ನು ಬಾಯಿಪಾಠ ಮಾಡಿದನು. ಅನಂತರ ಆಡಿಯೋ ಕೇಳಿಕೊಂಡು ತನ್ನ ಭಾಷೆಯಾದ ರೋಮನಿನಲ್ಲಿ ಪೂರ್ತಿ ಪವಿತ್ರ ಖುರ್‌ಆನನ್ನು ಬರೆದನು. ಅರಬಿ ಬರೆಯಲು ಗೊತ್ತಿರಲಿಲ್ಲ. ಅಮೀರ್ ಸಾಹಿಬ್ ಹೇಳುತ್ತಾರೆ: ನಾನು ಅಲ್ಲಿಗೆ ಹೋದಾಗ ನಾನು ಅವನ ನೋಟ್‌ಬುಕನ್ನು ನೋಡಿದೆ. ಪೂರ್ತಿ ಪವಿತ್ರ ಖುರ್‌ಆನನ್ನು ಅವನು ತನ್ನ ಕೈಬರಹದಲ್ಲಿ ಬರೆದಿದ್ದನು. ಈಗ ಅರಬಿ ಕೂಡ ಕಲಿಯುತ್ತಿದ್ದಾನೆ. ಅದನ್ನು ಅರಬಿಯಲ್ಲೂ ಬರೆಯುತ್ತಿದ್ದಾನೆ. ಹೀಗೆ ಅಲ್ಲಾಹನು ಸಾತ್ವಿಕರಾದ ವ್ಯಕ್ತಿಗಳನ್ನು ಜಮಾಅತಿಗೆ ತರುತ್ತಾನೆ ಮತ್ತು ಹಝ್ರತ್ ಮಸೀಹ್ ಮೌಊದ್(ಅ)ರೊಂದಿಗೆ ಮಾಡಿದ ವಾಗ್ದಾನವನ್ನು ಕೂಡ ಈಡೇರಿಸುತ್ತಿದ್ದಾನೆ.

ಇಂಡೋನೇಶ್ಯ ಮತ್ತೊಂದು ದೂರದ ದೇಶವಾಗಿದೆ. ಅಲ್ಲಿ ಒಬ್ಬ ಯುವಕನಿಗೆ ತಬ್ಲೀಗ್ ಮಾಡಲಾಯಿತು. ಅವನು ತಕ್ಷಣವೇ ಬೈಅತ್ ಮಾಡಿದನು. ಅಲ್ಲಿಯ ಜಮಾಅತಿನ ಸದರ್ ಆದ ನೂರ್ ಸಾಹಿಬ್‌ರು ಹೇಳುತ್ತಾರೆ: ನಾನು ಅವನು ಮರಳಿ ಹೋಗುದಕ್ಕೆ ಮುಂಚಿತವಾಗಿ ಕೆಲವು ಪುಸ್ತಕಗಳನ್ನು ಅವನಿಗೆ ಕೊಟ್ಟೆ. ಹಝ್ರತ್ ಮಸೀಹ್ ಮೌಊದ್(ಅ)ರ ಫೋಟೋ ಇರುವ ಲೀಫ್‌ಲೆಟ್ ಕೂಡ ಕೊಟ್ಟೆ. ಆ ಯುವಕ ಮನೆಗೆ ತಲುಪಿದಾಗ ಅದರಲ್ಲಿರುವ ಫೋಟೋವನ್ನು ನೋಡಿ ಇವರು ಯಾರೆಂದು ಅವನ ತಂದೆ ಕೇಳಿದರು. ಇದು ಇಮಾಂ ಮಹ್‌ದಿಯ ಫೋಟೋ ಆಗಿದೆ ಎಂದು ಹುಡುಗ ಹೇಳಿದನು. ಯುವಕ ಹೇಳಿದನು: ನಾನು ನಿನ್ನೆ ಕನಸಿನಲ್ಲಿ ಇಮಾಂ ಮಹ್‌ದಿ ಬರುವುದಾಗಿ ಕಂಡೆನು. ಅಹ್ಮದಿಯಾ ಜಮಾಅತಿನ ಸ್ವಲ್ಪ ಪರಿಚಯವೂ ಇತ್ತು. ಹೀಗೆ ನಾನು ಬೇಗನೇ ಬೈಅತ್ ಮಾಡಿದೆ. ಆಗ ನಾನು ಕೂಡ ಬೈಅತ್ ಮಾಡುತ್ತೇನೆ ಎಂದು ಅವನ ತಂದೆ ಹೇಳಿದರು. ಹೀಗೆ ಅಲ್ಲಾಹನು ಜನರನ್ನು ಅಹ್ಮದಿಯಾ ಜಮಾಅತಿಗೆ ಪ್ರವೇಶಿಸುತ್ತಾನೆ.

ಬುರ್ಕಿನಾಫೋಸೋದ ಮುಅಲ್ಲಿಂ ಆದ ಅಝೀಲ ಕರೀಂ ಸಾಹಿಬ್ ಹೇಳುತ್ತಾರೆ: ನಮ್ಮ ಪ್ರದೇಶ ನಿವಾಸಿಯಾದ ಹಮೀದ್ ಸಾಹಿಬ್ ಎಂಬವರು ನಿಯತವಾಗಿ ನಮ್ಮ ರೇಡಿಯೊ ಚಾನಲ್ ಆಲಿಸುತ್ತಾರೆ. ಜಮಾಅತಿನೊಂದಿಗೆ ಸಹಾನುಭೂತಿ ಕೂಡ ಅವರಿಗೆ ಇತ್ತು. ಚಂದಾ ಕೂಡ ನೀಡುತ್ತಿದ್ದರು. ಆದರೆ ಬೈಅತ್ ಮಾಡಲು ಹೇಳುವಾಗ ತಡವರಿಸುತ್ತಿದ್ದರು. ಚಂದಾ ಆಮ್ ಅಲ್ಲ, ತಹ್ರೀಕ್ ಜದೀದ್ ಅಥವಾ ಯಾವುದಾದರೂ ಬೇರೆ ಚಂದಾ ನೀಡುತ್ತಿರಬಹುದು. ಹೇಗಿದ್ದರೂ ಸಾಂಪತ್ತಿಕ ತ್ಯಾಗಗಳನ್ನು ಅವರು ಮಾಡುತ್ತಿದ್ದರು. ಘಾನದಲ್ಲಿ ಇದ್ದಾಗ ನಾನು ಕೂಡ ನೋಡಿದ್ದೇನೆ. ಝುಕಾತ್ ನೀಡಲು ಅರ್ಹರಾದ ಅನೇಕರು ಬಂದು ಝುಕಾತ್ ನೀಡುತ್ತಿದ್ದರು. ತಮ್ಮ ಮೌಲವಿಗಳಿಗೆ ಕೊಟ್ಟರೆ ತಿನ್ನುವರು, ಆದರೆ ಅಹ್ಮದಿಯಾ ಜಮಾಅತ್ ಅದರ ಸರಿಯಾದ ಉಪಯೋಗವನ್ನು ಮಾಡುವುದು ಎಂದು ಹೇಳಿ ಝುಕಾತ್ ನೀಡುತ್ತಿದ್ದರು. ಹೇಗಿದ್ದರೂ ಅವರು ಹೇಳುತ್ತಾರೆ: ಒಂದು ದಿನ ನಾನೊಂದು ಕನಸನ್ನು ಕಂಡೆನು. ಒಂದು ಸಭೆ ನಡೆಯುತ್ತಿತ್ತು. ಜನರು ಒಂದು ಕೊಠಡಿಯಲ್ಲಿ ಇದ್ದರು. ಕೆಲವರು ಕೊಠಡಿಯ ಹೊರಗೂ ಇದ್ದರು. ಆ ಕೊಠಡಿಯ ಒಳಗೆ ಎಲ್ಲ ಅಹ್ಮದಿಯರು ಇದ್ದರು. ನಾನು ಕೂಡ ಅವರೊಂದಿಗೆ ಆಗುವಂತಾಗಲು ನನಗೂ ಪ್ರವೇಶ ನೀಡು ಎಂದು ನಾನು ಹೇಳಿದೆ. ಆದರೆ ಈ ಕೊಠಡಿಯ ಒಳಗೆ ಬೈಅತ್ ಮಾಡಿದವರಿಗೆ ಮಾತ್ರ ಬರಬಹುದು ಮತ್ತು ನೀವು ಬೈಅತ್ ಮಾಡಿಲ್ಲ. ಆದ್ದರಿಂದ ನಿಮಗೆ ಇದರೊಳಗೆ ಬರಲು ಸಾಧ್ಯವಿಲ್ಲ ಎಂಬ ಒಂದು ಶಬ್ದ ಕೇಳಿ ಬರುತ್ತದೆ. ಹೇಗಿದ್ದರೂ ಅವರೊಬ್ಬ ಸಾತ್ವಿಕ ವ್ಯಕ್ತಿಯಾಗಿದ್ದರು. ಅಲ್ಲಾಹನು

ಅವರನ್ನು ವ್ಯರ್ಥಗೊಳಿಸಲು ಬಯಸುತ್ತಿರಲಿಲ್ಲ. ಆದ್ದರಿಂದ ಅವರಿಗೆ ಹೀಗೆ ಸನ್ಮಾರ್ಗ ತೋರಿಸಿದನು. ನಮಗೆ ಇಂತಹ ಕನಸು ಕಾಣುತ್ತಿಲ್ಲವೆಂದು ಆಕ್ಷೇಪವೆತ್ತುವವರಿಗೆ ಇದೊಂದು ಉತ್ತರವಾಗಿದೆ.

ಮೊದಲು ಸ್ವಭಾವವನ್ನು ಉತ್ತಮಗೊಳಿಸಿರಿ. ಮೆದುಳಿನ ಕೊಳಕನ್ನು ಖಾಲಿ ಮಾಡಿರಿ. ದುಆ ಮಾಡಿರಿ. ಹಾಗಾದರೆ ಅಲ್ಲಾಹನು ಸನ್ಮಾರ್ಗದ ಕಡೆಗೆ ಕೊಂಡೊಯ್ಯುತ್ತಾನೆ.

ಮಾಲಿಯ ಒಬ್ಬ ಸಹೋದರನಾದ ಮುಹಮ್ಮದ್ ಕೋನೆ ಸಾಹಿಬ್‌ರು ಅಹ್ಮದಿಯಾ ಜಮಾಅತಿನ ರೇಡಿಯೋವನ್ನು ಆಲಿಸಿದರು. ಅಹ್ಮದಿಯಾ ಜಮಾಅತಿನ ವಿರುದ್ಧ ಹೇಳುವವರ ಮಾತನ್ನು ಕೂಡ ಆಲಿಸಿದರು. ಅನಂತರ ದುಆ ಮಾಡಲು ಶುರುಮಾಡಿದರು. ಅಲ್ಲಾಹನು ಅವರಿಗೆ ಸನ್ಮಾರ್ಗವನ್ನು ತೋರಿಸಿದನು. ಅವರು ಹೇಳುತ್ತಾರೆ: ನಾನು ಒಬ್ಬ ಹಿರಿಯ ವ್ಯಕ್ತಿಯನ್ನು ಕನಸಿನಲ್ಲಿ ಕಂಡೆನು. ಅವರು ಹೀಗೆ ಹೇಳುತ್ತಿದ್ದರು: ಪ್ರತಿಯೊಬ್ಬರು ಅಹ್ಮದಿಯ್ಯತಿಗೆ ಪ್ರವೇಶಿಸುವರು. ಈಗ ಅಥವಾ ನಂತರ. ಇದಂತು ದೇವವಿಧಿಯಾಗಿದೆ. ಅಲ್ಲಾಹನು ಹಝ್ರತ್ ಮಸೀಹ್ ಮೌಊದ್(ಅ)ರೊಂದಿಗೆ ಮಾಡಿರುವ ವಾಗ್ದಾನವಾಗಿದೆ. ಅಹ್ಮದಿಯಾ ಖಿಲಾಫತ್ ಎಂಬ ಅನುಗ್ರಹದಿಂದ ಹಝ್ರತ್ ಮಸೀಹ್ ಮೌಊದ್(ಅ)ರ ಕಾರ್ಯಗಳು ಪೂರ್ತಿಯಾಗುವುದು. ಹೇಗಿದ್ದರೂ ಈ ಕನಸಿನ ನಂತರ ಅವರು ಬೈಅತ್ ಮಾಡಿದರು.

ಗಿನಿಬಸಾವಿನ ಮುಬಲ್ಲಿಗ್ ಬರೆಯುತ್ತಾರೆ: ಉಸ್ಮಾನ್ ಸಾಹಿಬ್ ಎಂಬ ನಮ್ಮ ಒಬ್ಬ ನವ ಅಹ್ಮದಿ ಇರುವರು. ಅವರ ಸಂಬಂಧಿರಲ್ಲಿ ಬಹುತೇಕರು ಅಹ್ಮದಿಯ್ಯತ್ ಸ್ವೀಕಾರ ಮಾಡುತ್ತಿರುವರು ಎಂದು ಅವರಿಗೆ ಮಾಹಿತಿ ಲಭಿಸಿತು. ಅವರು ಅಹ್ಮದಿಯ್ಯತಿನ ವಿರೋಧ ಮಾಡಲು ಕೆಲವು ಮೌಲವಿಗಳನ್ನು ಒಟ್ಟು ಸೇರಿಸಿ ಆ ಪ್ರದೇಶಕ್ಕೆ ಕೊಂಡು ಬಂದರು. ಆಗ ನಮ್ಮ ಮುಅಲ್ಲಿಂ ಸಾಹಿಬ್‌ರು ಹೇಳಿದರು: ನೀವು ಖಂಡಿತ ವಿರೋಧ ಮಾಡಿರಿ. ನಿಮ್ಮನ್ನು ನಾವು ತಡೆಯುವುದಿಲ್ಲ. ಆದರೆ ನಮ್ಮ ಮಾತನ್ನು ನಮ್ಮ ಸಂದೇಶವನ್ನು ಒಂದು ಬಾರಿ ಆಲಿಸಿರಿ. ಅನಂತರ ಪುರಾವೆಗಳೊಂದಿಗೆ ನಮ್ಮನ್ನು ಬೇಕಾದರೆ ವಿರೋಧಿಸಿರಿ. ಮೌಲವಿಗಳು ಮಾತು ಆಲಿಸುವುದನ್ನು ನಿರಾಕರಿಸಿದರು. ಆದರೆ ಉಸ್ಮಾನ್ ಸಾಹಿಬ್‌ರು ಜಮಾಅತಿನ ಸಂದೇಶವನ್ನು ಆಲಿಸಲು ಬಂದರು. ಅವರಿಗೆ ಹಝ್ರತ್ ಮಸೀಹ್ ಮೌಊದ್(ಅ)ರ ಆಗಮನದ ಬಗ್ಗೆ ಹೇಳಲಾಯಿತು. ಅವರು ಬಂದದ್ದು ಜುಮಾ ದಿವಸವಾಗಿತ್ತು. ಅಂದು ಎಂ.ಟಿ.ಎ.ದಲ್ಲಿ ನನ್ನ ಖುತ್ಬ ಬರುತ್ತಿತ್ತು. ನಿಮ್ಮ ಬಳಿ ಸ್ವಲ್ಪ ಸಮಯವಿದ್ದರೆ, ಖುತ್ಬ ಕೇಳಿರಿ ಎಂದು ಅವರೊಡನೆ ಹೇಳಲಾಯಿತು. ಸ್ವಲ್ಪ ಸಮಯವಿದೆ. ಸ್ವಲ್ಪ ಸಮಯಕ್ಕೆ ಖುತ್ಬ ಆಲಿಸುತ್ತೇನೆ ಎಂದು ಹೇಳಿದರು. ಆದರೆ ಖುತ್ಬ ಆಲಿಸಲು ಶುರುಮಾಡಿದಾಗ ಎಷ್ಟು ಸಮಯವಾಯಿತು ಎಂಬುದನ್ನು ಅವರು ಮರೆತು ಬಿಟ್ಟರು. ಪೂರ್ಣವಾಗಿ ಖುತ್ಬವನ್ನು ಆಲಿಸಿದರು. ಅಹ್ಮದಿಯಾ ಜಮಾಅತ್ ಕಾಫಿರ್ ಆಗಲು ಸಾಧ್ಯವಲ್ಲವೆಂದು ಅವರು ಅನಂತರ ಹೇಳಿದರು. ಏಕೆಂದರೆ, ನಿಮ್ಮ ಖಲೀಫ ಹಝ್ರತ್ ಪೈಗಂಬರ್(ಸ)ರ ಜೀವನಚರಿತ್ರೆಯ ಬಗ್ಗೆ ಹೇಳುತ್ತಿರುವುದಾಗಿ ನಾನು ಆಲಿಸಿದೆ. ಯಾವುದೇ ಕಾಫಿರ್ ಜಮಾಅತ್ ಈ ಕೆಲಸವನ್ನು ಮಾಡಲು ಸಾಧ್ಯವಲ್ಲ. ಅನಂತರ ಅವರು ಜಮಾಅತಿನ ವಿರೋಧ ಮಾಡುವುದನ್ನು ನಿಲ್ಲಿಸಿದರು. ಸ್ವಲ್ಪ ಕಾಲದ ನಂತರ ತನ್ನ ಕುಟುಂಬದೊಂದಿಗೆ ಅಹ್ಮದಿಯಾ ಜಮಾಅತಿನಲ್ಲಿ ಸೇರಿಕೊಂಡರು. ಸೇರಿಕೊಂಡರು ಎಂದು ಮಾತ್ರವಲ್ಲ, ತಬ್ಲೀಗ್ ಕೂಡ ಮಾಡುತ್ತಿರುವರು. ತನ್ನ ಚಂದಾವನ್ನು ಕೂಡ ಕರಾರುವಕ್ಕಾಗಿ ಪಾವತಿ ಮಾಡುತ್ತಾರೆ. ಖುತ್ಬದಲ್ಲಿ ಅಲ್ಲಾಹನು ಹಾಕುವ ಪ್ರಭಾವ ಅವರ ಮೇಲೆ ಆಗುತ್ತಿದೆ.

ಕೋಂಗೋಕಿನ್ಶಾಸದ ಲೋಕಲ್ ಮಿಶನರಿ ಹೇಳುತ್ತಾರೆ: ಒಂದು ಪ್ರದೇಶದಲ್ಲಿ ತಬ್ಲೀಗ್ ಕೆಲಸವನ್ನು ಶುರುಮಾಡಲಾಯಿತು. ಅಹ್ಮದಿಯೇತರರು ವ್ಯವಸ್ಥಾಪಿತವಾಗಿ ವಿರೋಧವನ್ನು ಆರಂಭಿಸಿದರು. ಮೂರು ತಿಂಗಳ ನಂತರ ಒಂದು ದಿನ ಅದೇ ವಿರೋಧಿಗಳಲ್ಲಿ ಇರುವ ಒಬ್ಬ ವ್ಯಕ್ತಿ ಮಿಶನ್ ಹೌಸನ್ನು ಸಂಪರ್ಕಿಸಿದರು. ತನ್ನ ಸಂಪೂರ್ಣ ಕುಟುಂಬದೊಂದಿಗೆ ಅಹ್ಮದಿಯಾ ಜಮಾಅತಿನಲ್ಲಿ ಭಾಗಿಯಾಗಲು ಬಯಸುತ್ತೇನೆ ಎಂದು ಅವರು ಹೇಳಿದರು. ಅದಕ್ಕಿರುವ ಕಾರಣವೇನೆಂದು ಅವರೊಡನೆ ಕೇಳಲಾದಾಗ ಅವರು ಹೇಳಿದರು: ಒಂದು ದಿನ ನನ್ನ ಪತ್ನಿ ಸೆಟ್‌ಲೈಟ್ ಚ್ಯಾನೆಲ್ ನೋಡುತ್ತಿದ್ದಾಗ ನಿಮ್ಮ ಎಂ.ಟಿ.ಎ. ಚಾನಲ್ ಸಿಕ್ಕಿತು. ನಾನು ಅಹ್ಮದಿಯಾ ಜಮಾಅತಿನ ವಿರೋಧದಲ್ಲಿ ಮುಂದಿದ್ದೇನೆ ಎಂದು ತಿಳಿದಿದ್ದ ಅವಳು ನನ್ನನ್ನು ಕೂಡ ಕರೆದಳು. ನಾನು ಅಹ್ಮದಿಯಾ ಜಮಾಅತಿನ ಬಗ್ಗೆ ತಪ್ಪಾಗಿ ಹೇಳಲು ಶುರುಮಾಡಿದಾಗ ನನ್ನ ಪತ್ನಿ ಹೀಗೆ ಹೇಳಿದಳು: ಮೊದಲು ಪೂರ್ತಿ ಕಾರ್ಯಕ್ರಮವನ್ನು ಕೇಳಿರಿ. ಅನಂತರ ಹೇಳಿರಿ. ಅಲ್ಲೂ ಎಂ.ಟಿ.ಎ.ದಲ್ಲಿ ನನ್ನ ಖುತ್ಬ ಬರುತ್ತಿತ್ತು. ಖುತ್ಬ ಆಲಿಸಿದ ನಂತರ, ನನ್ನ ಕಿವಿಗೆ ಇಂದು ಬೀಳುತ್ತಿರುವ ಈ ಶಬ್ದವೇ ಇಸ್ಲಾಮಿನ ನೈಜ ಚಿತ್ರವಾಗಿದೆ ಎಂದು ನನಗೆ ದೃಢವಿಶ್ವಾಸವಾಯಿತು. ಖಲೀಫರ ಮಾತುಗಳನ್ನು ಆಲಿಸಿದ ನಂತರ ಜಮಾಅತಿನ ಸತ್ಯತೆಯ ಬಗ್ಗೆ ನನಗೆ ಯಾವುದೇ ಸಂಶಯ ಉಳಿಯಲಿಲ್ಲ.

ಇದು ನನ್ನ ಯಾವುದೇ ಶ್ರೇಷ್ಠತೆಯಲ್ಲ. ಇದು ಅಲ್ಲಾಹನು ಖಿಲಾಫತಿನ ಮೂಲಕ ಹಝ್ರತ್ ಮಸೀಹ್ ಮೌಊದ್‌ರ ಮಿಶನನ್ನು ಪೂರ್ತಿ ಮಾಡುವನು ಎಂದು ಮಾಡಿರುವ ವಾಗ್ದಾನದ ಈಡೇರುವಿಕೆಯಾಗಿದೆ. ಇದು ಅಲ್ಲಾಹನ ಕೃಪೆಯಾಗಿದೆ. ಅದರ ಪ್ರಕಟನೆಯಾಗಿದೆ.

ಗಿನಿಬಸಾವಿನ ಮುಬಲ್ಲಿಗ್ ಇಂಚಾರ್ಜ್ ಹೇಳುತ್ತಾರೆ: ಒಂದು ಗ್ರಾಮದಲ್ಲಿ ತಬ್ಲೀಗ್ ಮಾಡಲಾಯಿತು. ಹೆಚ್ಚಿನವರು ಅಹ್ಮದಿಯಾ ಜಮಾಅತ್ ಸ್ವೀಕಾರ ಮಾಡಿದರು. ನಾಲ್ಕು ಕುಟುಂಬದವರು ಅಹ್ಮದಿಯ್ಯತ್ ಸ್ವೀಕಾರ ಮಾಡುವುದನ್ನು ನಿರಾಕರಿಸಿದರು. ನಮ್ಮ ಒಂದು ಟೀಮ್ ಅಲ್ಲಿ ಎಂ.ಟಿ.ಎ. ಅಳವಡಿಸಲು ಹೋದಾಗ, ಅಹ್ಮದಿಯ್ಯತ್ತನ್ನು ನಿರಾಕರಿಸಿದ ಎಲ್ಲ ಕುಟುಂಬಗಳನ್ನು ಮಸೀದಿಗೆ ಬರಲು ಹೇಳಿದರು ಮತ್ತು ಹೀಗೆ ಹೇಳಿದರು: ಇದು ನಮ್ಮ ಮುಸ್ಲಿಂ ಚಾನೆಲ್ ಆಗಿದೆ. ಅದರಲ್ಲಿ ನೀವು ಹಝ್ರತ್ ಮಸೀಹ್ ಮೌಊದ್(ಅ)ರ ಮತ್ತು ಖಲೀಫತುಲ್ ಮಸೀಹ್‌ರ ಫೋಟೋಗಳನ್ನು ಸಹ ನೋಡುವಿರಿ. ಹೇಗಿದ್ದರೂ ನಮಾಝಿನ ನಂತರ ಟಿ.ವಿ. ಪುನಃ ಆನ್ ಮಾಡಲಾಯಿತು. ಆಗ ಎಂ.ಟಿ.ಎ.ದಲ್ಲಿ ನನ್ನ ಖುತ್ಬ ನಡೆಯುತ್ತಿತ್ತು. ಅಹ್ಮದಿಯೇತರ ಕುಟುಂಬದವರು ಬಹಳ ಗಮನವಿಟ್ಟು ಖುತ್ಬ ಕೊಡುತ್ತಿದ್ದ ನನ್ನನ್ನು ನೋಡುತ್ತಿದ್ದರು. ಇಂಗ್ಲಿಷ್ ಭಾಷೆಯಲ್ಲಿ ಬರುತ್ತಿದ್ದ ಕಾರಣದಿಂದ ಮುಅಲ್ಲಿಂ ಸಾಹಿಬ್‌ರು ಹೇಳಿದರು: ನಾನು ನಿಮಗಾಗಿ ಅದರ ತರ್ಜುಮೆ ಮಾಡುತ್ತೇನೆ. ಅವರು ಹೇಳಿದರು: ನಮಗೆ ಇದು ಅರ್ಥವಾಗುತ್ತಿಲ್ಲವಾದರೂ ಅಲ್ಲಾಹನ ಆಣೆಯಿಟ್ಟು ಹೇಳುತ್ತೇವೆ: ಈ ವ್ಯಕ್ತಿ ಸುಳ್ಳು ಹೇಳಲು ಸಾಧ್ಯವಲ್ಲ. ಇವರು ಜಮಾಅತಿನ ಖಲೀಫ ಆಗಿರುವರು ಎಂದಾದರೆ, ಅಹ್ಮದಿಯಾ ಜಮಾಅತ್ ಅಸತ್ಯವಾಗಲು ಸಾಧ್ಯವಲ್ಲ. ಆಗಲೇ ಅಹ್ಮದಿಯ್ಯತ್ ಸ್ವೀಕಾರ ಮಾಡುವುದಾಗಿ ಆ ಕುಟುಂಬದವರು ಘೋಷಿಸಿದರು.

ಮಾಲಿಯ ಮುಅಲ್ಲಿಂ ಸಾಹಿಬ್‌ರು ಹೇಳುತ್ತಾರೆ: ಒಬ್ಬ ವ್ಯಕ್ತಿ ನಮ್ಮ ಮಿಶನಿಗೆ ಬಂದರು. ನಿಯತವಾಗಿ ನಿಮ್ಮ ರೇಡಿಯೋ ಚಾನಲ್ ಆಲಿಸುತ್ತೇನೆ ಮತ್ತು ಬೈಅತ್ ಮಾಡಲು ಬಯಸುತ್ತೇನೆ ಎಂದು ಅವರು ಹೇಳಿದರು. ಬೈಅತ್ ಫಾರಂ ಭರ್ತಿ ಮಾಡಿದರು. ಈ ವ್ಯಕ್ತಿ ವಿದ್ಯಾವಂತರಾಗಿದ್ದರು. ಆದ್ದರಿಂದ ಫ್ರೆಂಚ್ ಭಾಷೆಯಲ್ಲಿ ಜಮಾಅತಿನ ಯಾವುದಾದರೂ ಪುಸ್ತಕಗಳಿದ್ದರೆ ಅದನ್ನು ಓದುತ್ತೇನೆ ಮತ್ತು ಸ್ನೇಹಿತರಿಗೂ ಕೊಡುತ್ತೇನೆ ಎಂದು ಹೇಳಿದರು. ಮುಅಲ್ಲಿಂ ಸಾಹಿಬ್‌ರು ವರ್ಲ್ಡ್ ಕ್ರೈಸಿಸ್ ಎಂಡ್ ಪಾತ್‌ವೇ ಟು ಪೀಸಿನ ಫ್ರೆಂಚ್ ತರ್ಜುಮೆ ಕೊಟ್ಟರು. ಅವರು ಆ ಪುಸ್ತಕವನ್ನು ಅಲ್ಲೇ ತೆರೆದು ನೋಡಿದರು. ಅದರಲ್ಲಿ ಫೋಟೋವನ್ನು ಕಂಡಾಗ ಅಳಲು ಶುರುಮಾಡಿದರು. ಅನಂತರ ಅವರು ಹೇಳಿದರು: ಮೊದಲು ನಾನು ದಾಊನನಲ್ಲಿದ್ದೆ ಮತ್ತು ಸದಾ ಸನ್ಮಾರ್ಗಕ್ಕಾಗಿ ದುಆ ಮಾಡುತ್ತಿದ್ದೆ. ಆಗ ನಾನು ಅನೇಕ ಬಾರಿ ಖಲೀಫತುಲ್ ಮಸೀಹ್‌ರನ್ನು ಕನಸಿನಲ್ಲಿ ಕಂಡಿದ್ದೆ. ಆದರೆ ಅವರು ಯಾರೆಂದು ನನಗೆ ಗೊತ್ತಿರಲಿಲ್ಲ. ನನ್ನ ದುಆ ಸ್ವೀಕಾರವಾಗಿದೆ ಎಂದು ನನಗೆ ಈಗ ಗೊತ್ತಾಗಿ ಬಿಟ್ಟಿದೆ. ಅಲ್ಲಾಹನು ನನಗೆ ಸನ್ಮಾರ್ಗ ತೋರಿಸಿ ಕೊಟ್ಟಿದ್ದಾನೆ.

ನಸ್ಮಾ ಸಾಹಿಬ ಎಂಬ ಹೆಸರಿನ ಅರಬ್ ಮಹಿಳೆ ಹೇಳುತ್ತಾರೆ: ಎರಡು ವರ್ಷಗಳಿಗೆ ಮುಂಚಿತವಾಗಿ ಮೊದಲ ಬಾರಿ ಹಝ್ರತ್ ಮಸೀಹ್ ಮೌಊದ್(ಅ)ರ ಫೋಟೋವನ್ನು ನೋಡಿದ್ದೆ. ನಾನು ಫೋಟೋವನ್ನು ಸಂಬೋಧಿಸುತ್ತಾ ಹೀಗೆ ಹೇಳಿದೆ: ನೀವು ಸಾತ್ವಿಕ ವ್ಯಕ್ತಿ ಆಗಿರುವಿರಿ ಮತ್ತು ನೀವು ಸುಳ್ಳು ಹೇಳಲು ಸಾಧ್ಯವಲ್ಲ. ಆದರೆ ನೀವು ದೈವಿಕ ವ್ಯಕ್ತಿಯಾಗಿರುವಿರಿ ಎಂಬುದನ್ನು ನನಗೆ ಸಾಕ್ಷ್ಯಪಡಿಸಲು ಆಗುತ್ತಿಲ್ಲ. ಜಮಾಅತಿನ ಪುಸ್ತಕಗಳನ್ನು ಓದಿದ ನಂತರ 2016ರಲ್ಲಿ ನಾನು ಬೈಅತ್ ಮಾಡಿದೆ. ಆದರೂ ಖಿಲಾಫತಿನ ಬಗ್ಗೆ ನನಗೆ ಸಂಶಯವಿತ್ತು. ಖಲೀಫ ಎಂದು ವಾದಿಸುವ ವ್ಯಕ್ತಿಗೆ ಹೇಗೆ ನನ್ನ ಜೀವಿತದ ನಿಯಂತ್ರಣವನ್ನು ಕೊಡುವುದು ಎಂದು ನನ್ನ ಆತ್ಮದ ಶೈತಾನ್ ಹೇಳುತ್ತಿತ್ತು. ಆದರೆ ಈ ಸಂಶಯವೂ ಹಝ್ರತ್ ಮುಸ್ಲಿಹ್ ಮೌಊದ್(ರ)ರ ಪುಸ್ತಕವಾದ ಖಿಲಾಫತೇ ರಾಶಿದ ಮತ್ತು ನಿಝಾಮೇ ಖಿಲಾಫತ್ ಹಾಗೂ ಅದರ ಅನುಸರಣೆ ಎಂಬ ಪುಸ್ತಕಗಳಿಂದ ದೂರವಾಯಿತು. ಎಲ್ಲ ಸಂಗತಿಗಳು ಸ್ಪಷ್ಟವಾಗಿ ಗೊತ್ತಾಯಿತು. ಅನಂತರ ನಾನು ಖಲೀಫತುಲ್ ಮಸೀಹ್‌ಗೆ ಪತ್ರವನ್ನು ಬರೆದೆ ಮತ್ತು ಪತ್ರಕ್ಕೆ ಲಭಿಸಿದ ಉತ್ತರದಿಂದ ಎಲ್ಲ ಸಂಶಯಗಳು ಪೂರ್ಣವಾಗಿ ಕೊನೆಗೊಂಡಿತು. ಖಿಲಾಫತ್ ಕೂಡ ಹಝ್ರತ್ ಮಸೀಹ್ ಮೌಊದ್(ಅ)ರ ಹೆಜ್ಜೆಗುರುತುಗಳ ಮೇಲೆ ನಡೆಯುವಂತದ್ದಾಗಿದೆ ಎಂಬ ದೃಢವಿಶ್ವಾಸ ಉಂಟಾಯಿತು. ಅಲ್ಲಾಹನು ಹೃದಯಗಳಲ್ಲಿ ಹಾಕುವಂತಹ ಸ್ನೇಹವು ಬಹಳ ದೃಢವಾದದ್ದಾಗಿರುತ್ತದೆ. ನಮಗೆ ಅದರ ಕಾರಣ ಗೊತ್ತಾಗುವುದಿಲ್ಲ.

ಆದ್ದರಿಂದ ಅಹ್ಮದಿಯರಲ್ಲಿ ಹೆಚ್ಚಿನವರಿಗೆ ಹಝ್ರತ್ ಮಸೀಹ್ ಮೌಊದ್(ಅ)ರೊಂದಿಗೆ ಮತ್ತು ಖಲೀಫರೊಂದಿಗೆ ಇರುವ ಪ್ರೀತಿ ಸಾಮಾನ್ಯವಾಗಿ ಮತ್ತು ಕಾಲಘಟ್ಟದ ಖಲೀಫರೊಂದಿಗೆ ವಿಶೇಷವಾಗಿ ಇರುವ ಪ್ರೀತಿ ಮಕ್ಕಳಿಗೆ ಇರುವಂತಹದ್ದಾಗಿರುತ್ತದೆ. ಬೈಅತ್ ಮಾಡುವುದಕ್ಕೆ ಮುಂಚಿತವಾಗಿ ನಮಗೆ ಈ ರೀತಿಯ ಪ್ರೀತಿಯ ಅಂದಾಜು ಕೂಡ ಇರಲಿಲ್ಲ.

ನಾರ್ವೆಯ ಬರೀಘಾನ್ ಸಾಹಿಬ ಎಂಬ ಹೆಸರಿನ ಮಹಿಳೆ ಇರುವರು. ಅವರು ಹೇಳುತ್ತಾರೆ: ನಮ್ಮ ಪ್ರಿಯ ಹುಝೂರ್ ನಮ್ಮ ಹೃದಯಗಳಲ್ಲಿ ಮತ್ತು ಕಣ್ಣುಗಳಲ್ಲಿ ಇರುವರು ಎಂದು ಪ್ರತಿಯೊಬ್ಬ ಸತ್ಯವಂತ ಅಹ್ಮದಿ ಹೇಳುತ್ತಾನೆ. ಖಲೀಫತುಲ್ ಮಸೀಹ್‌ರನ್ನು ಸಂತೋಷಪಡಿಸಲು ಮತ್ತು ಅವರ ಭಾರವನ್ನು ಎತ್ತುವ ಮಾರ್ಗಗಳನ್ನು ಯೋಚಿಸುವುದರ ಹೊರತು ಈ ಲೋಕದಲ್ಲಿ ನಮಗೆ ಯಾವುದೇ ದುಃಖವಿಲ್ಲ. ಶ್ರೇಷ್ಠ ಸಹಾಬಿಯರು ಹೇಗೆ ತಮ್ಮ ದೇಹಗಳಿಂದ ಬಾಣಗಳನ್ನು ತಡೆದುಕೊಂಡು ಹಝ್ರತ್ ಪೈಗಂಬರ್(ಸ)ರ ಸಂರಕ್ಷಣೆ ಮಾಡುತ್ತಿದ್ದರು ಎಂಬುದರ ಬಗ್ಗೆ ನೀವು ಖುತ್ಬಗಳಲ್ಲಿ ವಿವರಿಸಿದ್ದೀರಿ. ಈ ದೃಶ್ಯಗಳನ್ನು ಯೋಚಿಸಿ ನನಗೆ ಕಣ್ಣೀರು ಬರುತ್ತದೆ. ಇಂತಹ ಸಂದರ್ಭ ಬಂದರೆ ನಾನೇನು ಮಾಡುತ್ತಿದ್ದೆ ಎಂದು ಯೋಚಿಸುತ್ತೇನೆ. ಈ ಸಹಾಬಿಯರ ಹಾಗೆ ಖಲೀಫತುಲ್ ಮಸೀಹ್‌ರನ್ನು ಮತ್ತು ಖಿಲಾಫತನ್ನು ತನ್ನ ಹೃದಯ, ಜೀವ, ಸಂಪತ್ತು ಮತ್ತು ಮಕ್ಕಳನ್ನು ತ್ಯಾಗಮಾಡಿಯಾದರೂ ಸಂರಕ್ಷಣೆ ಮಾಡುವಂತಾಗಲು ಅಲ್ಲಾಹನು ನಮಗೆ ಸೌಭಾಗ್ಯ ನೀಡಲಿ ಎಂದು ದುಆ ಮಾಡುತ್ತೇನೆ. ಖಲೀಫತುಲ್ ಮಸೀಹ್‌ರಿಗೆ ಎಷ್ಟು ದುಃಖ, ಎಷ್ಟು ಜವಾಬ್ದಾರಿಗಳು ಇವೆಯೋ ಅವುಗಳಿಗೆ ಸಮಾನವಾದಷ್ಟು ಸಂಖ್ಯೆಯಲ್ಲಿ ಅಲ್ಲಾಹನು ದೇವದೂತರನ್ನು ಇಳಿಸಿ ಖಲೀಫತುಲ್ ಮಸೀಹ್‌ರನ್ನು ಸಹಾಯಿಸಲಿ ಮತ್ತು ಸಂರಕ್ಷಿಸಲಿ ಎಂದು ಅನೇಕ ವರ್ಷಗಳಿಂದ ನಮಾಝ್‌ನಲ್ಲಿ ದುಆ ಮಾಡುತ್ತಿರುತ್ತೇನೆ.

ಅಲ್ಲಾಹನು ಜನರು ಹೃದಯಗಳಲ್ಲಿ ಉಂಟುಮಾಡುತ್ತಿರುವ ನಿಷ್ಠೆ ಮತ್ತು ಪ್ರಾಮಾಣಿಕತೆಯ ಸಂಬಂಧ ಇದಾಗಿದೆ. ಇಂತಹ ನಿಷ್ಠೆ ಮತ್ತು ಪ್ರಾಮಾಣಿಕತೆಯಲ್ಲಿ ಮುಂದಾಗುವ ಜನರನ್ನು ಖಿಯಾಮತ್ ತನಕ ಅಲ್ಲಾಹನು ಹಝ್ರತ್ ಮಸೀಹ್ ಮೌಊದ್(ಅ)ರ ಜಮಾಅತಿಗೆ ಮತ್ತು ಅಹ್ಮದಿಯಾ ಖಿಲಾಫತಿಗೆ ದಯಪಾಲಿಸುತ್ತಾ ಹೋಗುವನು. ಇನ್‌ಶಾ ಅಲ್ಲಾಹ್. ಲೌಕಿಕ ಜನರಿಗೆ ಇದನ್ನು ಮನವರಿಕೆ ಮಾಡಲು ಸಾಧ್ಯವಲ್ಲ.

ಜರ್ಮನಿಯಲ್ಲಿ ಅರೇಬಿಯದ ಒಬ್ಬರು ಬೈಅತ್ ಮಾಡಿದರು. ಆಗ ನೀನೇಕೆ ಖಾದಿಯಾನ ಆಗಿರುವಿಯಾ ಎಂದು ಅವರ ಪರಿಚಿತರು ಅವರೊಡನೆ ಕೇಳಿದರು: ಆಗ ಆ ನವ ಅಹ್ಮದಿ ಹೀಗೆ ಉತ್ತರಿಸಿದರು: ಇಲ್ಲಿರುವ ನೂರು ಅರೇಬಿಯರು ಯಾವುದೇ ಒಂದು ಸಂಗತಿಯ ಬಗ್ಗೆ ಒಮ್ಮತಾಭಿಪ್ರಾಯ ಹೊಂದಲಾರರು. ಅಹ್ಮದಿಯಾ ಜಮಾಅತಿಗೆ ಒಂದು ಇಮಾಂ ಇದ್ದಾರೆ. ಅವರ ಆದೇಶ ಪ್ರಕಾರ ಜಮಾಅತ್ ಏಳುತ್ತದೆ ಮತ್ತು ಕುಳಿತುಕೊಳ್ಳುತ್ತದೆ. ಆದ್ದರಿಂದಲೇ ಅದರ ಕೆಲಸದಲ್ಲಿ ಅನುಗ್ರಹವಿದೆ. ಈಗ ನಿಮ್ಮ ಜೊತೆಗೆ ಸೇರುವಂತಾಗಲು ಮತ್ತು ಅವರನ್ನು ಬಿಟ್ಟು ಬರುವಂತಾಗಲು ನಿಮ್ಮಲ್ಲಿ ಏನು ವಿಶೇಷತೆಯಿದೆ ಎಂದು ನೀವೇ ಹೇಳಿರಿ.

ಎಲ್ಲಿಯ ವರೆಗೆ ಖಿಲಾಫತಿನೊಂದಿಗೆ ಪ್ರತಿಯೊಬ್ಬ ಅಹ್ಮದಿ ಅಂಟಿಕೊಂಡಿರುತ್ತಾನೋ ಅಲ್ಲಿಯ ವರೆಗೂ ಅಲ್ಲಾಹನ ಅನುಗ್ರಹಗಳ ವಾರಸುದಾರನಾಗಿ ಇರುವನು. ಅದಕ್ಕಾಗಿ ನಾವು ನಮ್ಮ ಕೃತ್ಯಗಳನ್ನು ಅಲ್ಲಾಹನ ಅಧ್ಯಾಪನೆಗಳ ಪ್ರಕಾರ ಮಾಡಬೇಕಾಗಿದೆ. ಆಗಲೇ ಈ ವರದಾನ ಪ್ರಯೋಜನಕಾರಿಯಾಗುವುದು. ಯಾರು ಸತ್ಯವಿಶ್ವಾಸವನ್ನು ಕೈಗೊಳ್ಳುವುದರೊಂದಿಗೆ ತನ್ನ ಕರ್ಮಗಳನ್ನು ಅಲ್ಲಾಹನು ಹೇಳಿದ ಪ್ರಕಾರ ಮಾಡುತ್ತಾನೋ ಅವರು ಖಿಲಾಫತಿನ ಅನುಗ್ರಹಗಳಿಂದ ಪ್ರಯೋಜನ ಪಡೆಯುತ್ತಾ ಹೋಗುವರು ಎಂಬುದೇ ಅಲ್ಲಾಹನ ವಾಗ್ದಾನವಾಗಿದೆ. ಎಂದರೆ, ನಾವು ಅಲ್ಲಾಹನ ಮೇಲೆ ಪರಿಪೂರ್ಣವಾದ ವಿಶ್ವಾಸವನ್ನು ಇರಿಸುತ್ತಾ ಅವನಿಗೆ ಸಲ್ಲಬೇಕಾದ ಆರಾಧನೆಗಳನ್ನು ಮಾಡುವವರು ಆಗಿರಬೇಕು ಮತ್ತು ನಮ್ಮ ಪ್ರತಿಯೊಂದು ಕೃತ್ಯವು ಅಲ್ಲಾಹನ ಸಂಪ್ರೀತಿಯನ್ನು ಹುಡುಕುವಂತದ್ದಾಗಿರಬೇಕು. ಆಗಲೇ ನಾವು ಈ ಅನುಗ್ರಹವನ್ನು ಗಳಿಸುವೆವು.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಪವಿತ್ರ ಖುರ್‌ಆನಿನಲ್ಲಿ ಅಲ್ಲಾಹನು ಸತ್ಯವಿಶ್ವಾಸದೊಂದಿಗೆ ಸತ್ಕರ್ಮಗಳನ್ನು ಕೂಡ ಇರಿಸಿದ್ದಾನೆ. ಕಿಂಚಿತ್ತಾದರೂ ಕೆಡುಕು ಇಲ್ಲದ ಕೃತ್ಯವನ್ನು **ಅಮಲೇ ಸ್ವಾಲಿಹ್** ಎಂದು ಹೇಳಲಾಗುತ್ತದೆ. ಮನೆಯಲ್ಲಿ ಒಬ್ಬನಾದರೂ ಸತ್ಕರ್ಮಿಯಾಗಿದ್ದರೆ ಆ ಮನೆ ಸುರಕ್ಷಿತವಾಗಿರುವುದು. ನಿಮ್ಮಲ್ಲಿ ಸತ್ಕರ್ಮ ಅಥವಾ **ಅಮಲೇ ಸ್ವಾಲಿಹ್** ಇಲ್ಲದೇ ಕೇವಲ ನಂಬುವುದರಿಂದ ಪ್ರಯೋಜನವಿಲ್ಲ. (ಮಲ್‌ಫೂಝಾತ್, ಸಂಪುಟ-4, ಪುಟ-274-275)

ಆದ್ದರಿಂದ ಯಾವುದೇ ಸಮಯ ಶೈತಾನ ನಮ್ಮ ಮೇಲೆ ದಾಳಿ ನಡೆಸಿದಿರದಂತೆ ನಾವು ಮುಂಜಾಗ್ರತೆ ವಹಿಸುತ್ತಾ ಇರಬೇಕು. ಅಲ್ಲಾಹನು ನಮ್ಮ ತಂದೆ ತಾತಂದರಿಗೆ ಹಝ್ರತ್ ಮಸೀಹ್ ಮೌಊದ್(ಅ)ರನ್ನು ನಂಬಲು ಸೌಭಾಗ್ಯ ನೀಡಿದ್ದನು. ಅದು ಅವನ ಔದಾರ್ಯವಾಗಿದೆ. ಆ ಔದಾರ್ಯದ ಅನುಗ್ರಹಗಳು ಮುಂದುವರೆಯುವಂತಾಗಲು ಮತ್ತು ಹಝ್ರತ್ ಪೈಗಂಬರ್(ಸ) ಭವಿಷ್ಯ ನುಡಿದಿದ್ದ ಮತ್ತು ಹಝ್ರತ್ ಮಸೀಹ್ ಮೌಊದ್(ಅ)ರೊಂದಿಗೆ ಅಲ್ಲಾಹನು ವಾಗ್ದಾನ ಮಾಡಿದ ಅನುಗ್ರಹಗಳಿಂದ ಪಾಲು ಪಡೆಯುವಂತಾಗಲು ನಾವು ಸ್ಥಿರವಾಗಿ ನಮ್ಮ ವಿಶ್ವಾಸವನ್ನು ವರ್ಧಿಸಲು ಮತ್ತು ಸತ್ಯವಿಶ್ವಾಸದ ಕಡೆಗೆ ಗಮನವಿರಿಸುವ ಆವಶ್ಯಕತೆಯಿದೆ. ಎಂದರೆ ಖಿಲಾಫತಿನ ವ್ಯವಸ್ಥೆಯ ಅನುಗ್ರಹಗಳಿಂದ ಪಾಲು ಪಡೆಯುವಂತಾಗಲು.

ಅಲ್ಲಾಹನ ಏಕತ್ವವನ್ನು ಒಂದಾಗಿ ಲೋಕದಲ್ಲಿ ಸ್ಥಾಪಿಸುವಂತಾಗಲು ನಾವು ಯಾವ ಮಟ್ಟಿಗೆ ಖಿಲಾಫತಿನೊಂದಿಗೆ ತಮ್ಮನ್ನು ತಾವೇ ಜೋಡಿಸುವವರಾಗಿದ್ದೇವೆ ಎಂದು ಪರಿಶೋಧಿಸಬೇಕಾಗಿದೆ. ಹಝ್ರತ್ ಮಸೀಹ್ ಮೌಊದ್(ಅ) ಒಂದೆಡೆ ಹೇಳುತ್ತಾರೆ: "ನಾನು ನಿಮಗೆ ಶುಭವಾರ್ತೆ ನೀಡುತ್ತಿದ್ದೇನೆ: ಅಲ್ಲಾಹನ ಸಾಮೀಪ್ಯವನ್ನು ಗಳಿಸಲಿರುವ ಮೈದಾನವು ಖಾಲಿಯಿದೆ. ಪ್ರತಿಯೊಂದು ಜನಾಂಗ ಲೋಕವನ್ನು ಪ್ರೀತಿಸುತ್ತಿದೆ. ಅಲ್ಲಾಹನು ಸಂಪ್ರೀತನಾಗುವ ಸಂಗತಿಗಳ ಕುರಿತು ಲೋಕದ ಜನರ ಗಮನವಿಲ್ಲ. ಯಾರು ಉತ್ಸಾಹಭರಿತರಾಗಿ ಈ ಬಾಗಿಲನ್ನು ಪ್ರವೇಶಿಸಲು ಬಯಸುತ್ತಾರೋ ಅವರಿಗೆ ಸುಸಂದರ್ಭ ಒದಗಿ ಬಂದಿದೆ. ಅವರು ತಮ್ಮ ಶಕ್ತಿ ಸಾಮರ್ಥ್ಯಗಳನ್ನು ಪ್ರಕಟಿಸಲಿ ಮತ್ತು ದೇವನಿಂದ ವಿಶಿಷ್ಟ ಪಾರಿತೋಷಕ ಗಳಿಸಲಿ. ನಿಮ್ಮನ್ನು ಅಲ್ಲಾಹನು ವ್ಯರ್ಥಗೊಳಿಸುವನು ಎಂದು ನೀವು ಭಾವಿಸಬೇಡಿರಿ. ನೀವು ಅಲ್ಲಾಹನ ಕೈಗಳಿಂದ ಭೂಮಿಯಲ್ಲಿ ಬಿತ್ತಲಾದ ಒಂದು ಬೀಜವಾಗಿರುವಿರಿ. ಈ ಬೀಜ ಮೊಳಕೆಯೊಡೆದು ಬೆಳೆಯುವುದು, ಹೂ ಬಿಡುವುದು, ಅದರ ಕೊಂಬೆಗಳು ಹರಡುವುವು ಮತ್ತು ಅದು ದೊಡ್ಡ ಮರವಾಗುವುದು ಎಂದು ಅಲ್ಲಾಹನು ಹೇಳುತ್ತಾನೆ.
(ರಿಸಾಲ ಅಲ್‌ವಸಿಯ್ಯತ್, ರೂಹಾನಿ ಖಝಾಈನ್, ಸಂಪುಟ-20, ಪುಟ-308-309)

ನನ್ನ ಜಮಾಅತಿನ ಜನರಿಗೆ ತಿಳಿಸಲು ಅಲ್ಲಾಹನು ನನ್ನೊಂದಿಗೆ ಹೀಗೆ ಹೇಳಿದ್ದಾನೆ: ಲೌಕಿಕವಾದ ಯಾವುದೇ ಕಲಬೆರಕೆಯಿಲ್ಲದಂತಹ ವಿಶ್ವಾಸವನ್ನು ಯಾರು ಹೊಂದುತ್ತಾರೋ, ಯಾರ ವಿಶ್ವಾಸವು ಕಾಪಟ್ಯದಿಂದ ಮತ್ತು ಹೇಡಿತನದಿಂದ ಕಳಂಕಿತವಾಗಿಲ್ಲವೋ ಮತ್ತು ಯಾರ ವಿಶ್ವಾಸವು ಅನುಸರಣೆಯ ಯಾವುದೇ ಹಂತದಿಂದ ವಂಚಿತವಾಗಿಲ್ಲವೋ ಅಂತಹ ಜನರು ಅಲ್ಲಾಹನ ಮೆಚ್ಚಿಗೆಗೆ ಪಾತ್ರರಾದ ಜನರಾಗಿದ್ದಾರೆ. ಅಂತಹ ಜನರ ಹೆಜ್ಜೆ ಸತ್ಯದ ಹೆಜ್ಜೆಯೆಂದು ಅಲ್ಲಾಹನು ಹೇಳುತ್ತಾನೆ. (ರಿಸಾಲ ಅಲ್‌ವಸಿಯ್ಯತ್, ರೂಹಾನಿ ಖಝಾಈನ್, ಸಂಪುಟ-20, ಪುಟ-309)

ಈ ಎಲ್ಲ ಮಾತುಗಳನ್ನು ಹಝ್ರತ್ ಮಸೀಹ್ ಮೌಊದ್(ಅ) ಅಲ್‌ವಸಿಯ್ಯತ್ ಗ್ರಂಥದಲ್ಲಿ ಹೇಳಿರುವರು. ಆ ಗ್ರಂಥದಲ್ಲಿ ಖಿಲಾಫತ್ ಜಾರಿಯಾಗುವುದರ ಬಗ್ಗೆಯೂ ಸುವಾರ್ತೆಯನ್ನು ಅವರು ನೀಡಿದರು.

ಪ್ರತಿಯೊಬ್ಬ ಅಹ್ಮದಿಗೆ ಖಿಲಾಫತಿನೊಂದಿಗೆ ನಿಷ್ಠೆ ಮತ್ತು ಪ್ರಾಮಾಣಿಕತೆಯ ಸಂಬಂಧವಿರಬೇಕು. ಈ ಮಟ್ಟವನು ಗಳಿಸುವವರೇ ಬೈಅತ್ತಿಗೆ ಸಂಬಂಧಿಸಿದ ಕರ್ತವ್ಯಗಳನ್ನು ಈಡೇರಿಸುವವರಾಗುವರು. ಈ ಮಟ್ಟವನ್ನು ತಲುಪುವಾಗಲೇ ನಾವಿಂದು ಖಿಲಾಫತ್ ದಿನವನ್ನು ಆಚರಿಸಲು ಅರ್ಹರಾಗುವೆವು. ಖಿಲಾಫತಿನೊಂದಿಗೆ ಮಾಡಿದ ಬೈಅತ್ತಿನ ಬಾಧ್ಯತೆಯನ್ನು ಈಡೇರಿಸುವವರಾಗಲು ಮತ್ತು ಅಲ್ಲಾಹನ ಅನುಗ್ರಹಗಳನ್ನು ಗಳಿಸುವಂತವರಾಗಲು ಅಲ್ಲಾಹನು ಎಲ್ಲರಿಗೂ ಸೌಭಾಗ್ಯ ನೀಡಲಿ.

ಇಂದು ಬೇರೊಂದು ಘೋಷಣೆ ಕೂಡ ಇದೆ. ಘಾನ ಜಮಾಅತ್ ಬುಸ್ತಾನೇ ಅಹ್ಮದ್‌ನಲ್ಲಿ ಎರಡು ದಿನಗಳಿಗೆ ತನ್ನ ಜಲ್ಸ ನಡೆಸುತ್ತಿದೆ. ಇದಲ್ಲದೇ ಅವರು ದೇಶದೆಲ್ಲಡೆ 119 ಸೆಂಟರ್‌ಗಳನ್ನು ಮಾಡಿರುವರು. ಅವುಗಳಲ್ಲೂ ಐದು, ದೊಡ್ಡ ಸಮ್ಮೇಳನ ನಡೆಸಬಹುದಾದಂತಹ ಸೆಂಟರ್‌ಗಳಾಗಿವೆ. ಅವರ ಪರಸ್ಪರ ಸಂಪರ್ಕ ಆಡಿಯೋ ವೀಡಿಯೋ ಮೂಲಕವಾಗಿದೆ. ಘಾನ ಜಮಾಅತಿನ ಆರಂಭ 1921ರಲ್ಲಿ ಆಗಿತ್ತು. ಮೌಲಾನ ಅಬ್ದುರ್ರಹೀಂ ನಯ್ಯರ್ ಸಾಹಿಬ್(ರ) ಲಂಡನಿನಿಂದ ಘಾನಗೆ ಹೋಗಿದ್ದರು. ಕಳೆದ ವರ್ಷ ಘಾನ ಜಮಾಅತ್ ತನ್ನ ಶತವಾರ್ಷಿಕ ಸಮಾರಂಭವನ್ನು ನಡೆಸಲು ಬಯಸುತ್ತಿತ್ತು. ಆದರೆ ಕೋವಿಡ್‌ನ ಕಾರಣದಿಂದ ನಡೆಸಲು ಸಾಧ್ಯವಾಗಿರಲಿಲ್ಲ. ಆದ್ದರಿಂದ ಅವರು 2022 – 23ರ ಪ್ರೋಗ್ರಾಮ್‌ಗಳನ್ನು ನಡೆಸಲು ತೀರ್ಮಾನಿಸಿರುವರು. ಅಲ್ಲಾಹನು ಅವರ ಜಲ್ಸವನ್ನು ಎಲ್ಲ ರೀತಿಯಲ್ಲೂ ಅನುಗ್ರಹೀತಗೊಳಿಸಲಿ. ನಿಷ್ಠೆ ಮತ್ತು ಪ್ರಾಮಾಣಿಕತೆಯಲ್ಲಿ ಎಲ್ಲ ಅಹ್ಮದಿಯರು ವರ್ಧಿಸುತ್ತಾ ಹೋಗಲಿ.

***********

*(ಪುಟ ಸಂಖ್ಯೆ 02ರ ಉಳಿದ ಭಾಗ)*

ಮೊದಲಾದವರು ದುಆ ಮಾಡೋಣ. ಓ ಅಲ್ಲಾಹ್ ನಮ್ಮಿಬ್ಬರಲ್ಲಿ ಯಾವ ವ್ಯಕ್ತಿ ನಿನ್ನ ದೃಷ್ಟಿಯಲ್ಲಿ ಸತ್ಯಪರವಾಗಿದೆಯೋ ಅವನಿಗೆ ನೀನು ಈ ಸಮ್ಮೇಳನದಲ್ಲಿ ಈ ಅಧ್ಯಾಯದ ವಾಕ್ಚಾತುರ್ಯ ಮತ್ತು ಸಾಕ್ಷ್ಯಗಳು ಅದೇ ಸಮ್ಮೇಳನದಲ್ಲಿ ಬರೆಯಲು ತನ್ನ ಕಡೆಯಿಂದ ಒಂದು ಆಧ್ಯಾತ್ಮಿಕ ಶಕ್ತಿ ದಯಪಾಲಿಸು. ಪವಿತ್ರಾತ್ಮದಿಂದ ಅವನಿಗೆ ಸಹಕರಿಸು ಮತ್ತು ಉಭಯತ್ರರಲ್ಲಿ ಯಾರೂ ನಿನ್ನ ಮರ್ಜಿಗೆ ವಿರುದ್ಧವಾಗಿದ್ದಾರೆ ಮತ್ತು ನಿನ್ನ ದೃಷ್ಟಿಯಲ್ಲಿ ಸತ್ಯವಂತನಲ್ಲ ಅವನಿಂದ ಈ ಭಾಗ್ಯ ಕಿತ್ತುಕೊಳ್ಳು ಮತ್ತು ಅವನ ನಾಲಿಗೆಯಿಂದ ಅವರಬಿಯ ವಾಕ್ಚಾತುರ್ಯವನ್ನು ವಿವರಿಸುವುದರಿಂದ ತಡೆದುಬಿಡು. ಏಕೆಂದರೆ ಅದರಿಂದ ಜನರಿಗೆ ಸತ್ಯ ತಿಳಿಯುವಂತಾಗಲಿ, ನೀನು ಯಾರ ಜೊತೆಯಲ್ಲಿದ್ದೆ ಎಂಬುದು ಮತ್ತು ನಿನ್ನ ಅನುಗ್ರಹ ಹಾಗೂ ಪವಿತ್ರಾತ್ಮ ಸಹಾಯದಿಂದ ಯಾರಾರು ವಂಚಿತರಾಗಿದ್ದಾರೆ ತಿಳಿಯಲಿ. ಮತ್ತೆ ಈ ದುಆ ನಂತರ ಉಭಯತ್ರರು ಅರಬ್ಬಿ ಭಾಷೆಯಲ್ಲಿ ಅದರ ತಫ್ಸೀರ್ ಬರೆಯಲು ಪ್ರಾರಂಭಿಸೋಣ. ಯಾರ ಬಳಿಯೂ ಯಾವುದೇ ಪ್ರಸ್ತುತವಿರಬಾರದು ಎಂಬ ಶರತ್ತು ಇರಲಿ. ಮತ್ತು ಸಹಾಯಕನು ಬೇಡ, ಮತ್ತು ಅವಶ್ಯವಾಗಿರುವುದೇನೆಂದರೆ ಪ್ರತಿಯೊಬ್ಬರೂ ಮೌನವಾಗಿ ಸದ್ದಿಲ್ಲದೇ ತನ್ನ ಕೈಯಿಂದ ಬರೆಯಬೇಕು. ಅದರಿಂದ ಅವರ ವಾಕ್ಚಾತುರ್ಯ ಭರಿತ ಲೇಖನ ಮತ್ತು ಸಾಕ್ಷ್ಯಗಳು ಆಲಿಸಲಿ. ಇವರ ಪಕ್ಷದವರು ಯಾವುದೇ ರೀತಿಯಲ್ಲಿ ಯಾವುದೇ ಅಧ್ಯಾಪನೆ ಕಡ್ಡಿಯತೆ ಆಗದಿರಲಿ. ಈ ತಫ್ಸೀರ್ ಬರೆಯಲು ಉಭಯ ಪಕ್ಷಗಳಿಗೆ ಪೂರ್ಣ ಏಳು ಗಂಟೆಗಳ ಸಮಯ ನೀಡಲಾಗುವುದು. ಎದುರು ಬದುರು ಕುಳಿತುಕೊಂಡು ಬರೆಯುವಂತಿರಲಿ. ಯಾವುದೇ ಪರದೆ ಬೇಡ. ಉಭಯತ್ರರಿಗೆ ತಮ್ಮ ಎದುರು ಪಕ್ಷದವರನ್ನು ತನ್ನ ಸಮಾಧಾನಕ್ಕಾಗಿ ತಪಾಸಣೆ ಮಾಡಬಹುದು. ಯಾವುದೇ ನಕಲು ಹೊಡೆಯದಂತೆ ಜಾಗ್ರತೆ ವಹಿಸುವಂತಾಗಲಿ. ಬರೆಯಲು ಉಭಯತ್ರರಿಗೆ ಏಳು ಗಂಟೆಗಳ ಕಾಲ ಸಮಯ ದೊರೆಯುವುದು. ಆದರೆ ಅದೇ ಸಮ್ಮೇಳನದಲ್ಲಿ ಅದೇ ದಿನದಲ್ಲಿ ಈ ತಫ್ಸೀರ್‌ನ್ನು ಸಾಕ್ಷಿಗಳ ಮಧ್ಯೆ ಬರೆದು ಮುಗಿಸಬೇಕು. ಉಭಯತ್ರರು ಬರೆದ ಮೇಲೆ ಆ ಎರಡು ತಫ್ಸೀರ್‌ಗಳು ಹಸ್ತಾಕ್ಷರ ಆದ ನಂತರ ಮೂರು ತಜ್ಞ ಪರಿಣತರ (ಅದರ ಆಯ್ಕೆಯು ಪೀರ್ ಮಹರ್ ಅಲಿ ಸಾಹಿಬರ ಹೊಣೆಯಾಗಿರುವುದು) ಎದುರು ಆಲಿಸಿಕೊಡಲಾಗುವುದು. ಆ ಮೂರು ತಜ್ಞರ ಕಾರ್ಯವೇನೆಂದರೆ ಪ್ರಮಾಣವಹಿಸಿ ತನ್ನ ಅಭಿಪ್ರಾಯ ಪ್ರಕಟಪಡಿಸಬೇಕು. ಈ ಎರಡೂ ತಫ್ಸೀರುಗಳಲ್ಲಿ ಮತ್ತು ಇಬ್ಬರ ಅರಬ್ಬಿ ಬರಹದಲ್ಲಿ ಯಾವ ತಫ್ಸೀರ್ ಮತ್ತು ಬರಹ ಪವಿತ್ರಾತ್ಮನ ಸಹಾಯದಿಂದ ಬರೆಯಲ್ಪಟ್ಟಿದೆ. ಇಲ್ಲಿ ಅವಶ್ಯವಾಗಿರುವುದೇನೆಂದರೆ ಆ ಮೂವರು ನನ್ನ ಸಂಘಟನೆಯಲ್ಲಿ ಸೇರಿದವರಾಗಿರಬಾರದು ಮತ್ತು ಮಹರ್ ಅಲಿ ಶಹ್ ಸಾಹಿಬರ ಶಿಷ್ಯರಾಗಿರಬಾರದು. ಬೇಕಾದರೆ ಪೀರ್ ಮಹರ್ ಅಲಿ ಶಾಹ್ ಸಾಹಿಬ್ ಸಾಕ್ಷಿಯ ರೂಪದಲ್ಲಿ ಮೌಲ್ವಿ ಮುಹಮ್ಮದ್ ಹುಸೇನ್ ಬಟಾಲ್ವಿ ಮತ್ತು ಮೌಲ್ವಿ ಅಬ್ದುಲ್ ಜಬ್ಬಾರ್ ಗಝ್ನವಿ ಮತ್ತು ಮೌಲ್ವಿ ಅಬ್ದುಲ್ಲ ಪ್ರೊಫೆಸರ್ ಲಾಹೋರಿ ಅವರನ್ನು ಅಥವಾ ಇನ್ನಿತರ ಮೂರು ಮೌಲ್ವಿಗಳನ್ನು ಆಯ್ಕೆ ಮಾಡಿಕೊಳ್ಳಲಿ. ಅವರು ಅವರ ಶಿಷ್ಯ ಅಥವಾ ಅನುಯಾಯಿ ಆಗಿರಬಾರದು. ಆದರೆ ಅವಶ್ಯವಾಗಿರುವುದೇನೆಂದರೆ ಈ ಮೂವರು ಮೌಲ್ವಿಗಳು ಪ್ರಮಾಣ ಮಾಡಿ ತನ್ನ ಅಭಿಪ್ರಾಯ ಪ್ರಕಟಪಡಿಸಬೇಕು. ಯಾರ ತಫ್ಸೀರ್ ಮತ್ತು ಅರಬ್ಬಿ ಉನ್ನತ ದರ್ಜೆಯದ್ದಾಗಿದೆ ಮತ್ತು ದೈವಿಕ ಪುಷ್ಟಿ ಪಡೆದಿದೆ. ಆದರೆ ಈ ಪ್ರಮಾಣ ಖುರ್‌ಆನ್‌ನಲ್ಲಿರುವ ಖಿಝಾಫ್ ಮುಹಸಿನಾತ್ ಅಧ್ಯಾಯದಂತಿರಬೇಕು. ಅದರಂತೆ ಮೂರು ಸಲ ಆಣೆ ಮಾಡುವುದು ಅವಶ್ಯವಾಗಿದೆ. ಉಭಯತ್ರರಿಗೂ ಕಡ್ಡಾಯವಾಗಿರುವುದೇನೆಂದರೆ ಸದರಿ ತಫ್ಸೀರ್ ಮೂರು ಪುಟಗಳಿಂದ ಯಾವುದೇ ಕಾರಣಕ್ಕೂ ಕಡಿಮೆ ಇರಬಾರದು. ಅಂದಹಾಗೆ ಈ ರೀತಿಯ ಚರ್ಚೆಯಿಂದ ಮತ್ತು ಈ ರೀತಿಯ ಮೂರು ಮೌಲ್ವಿಗಳ ಸಾಕ್ಷಿಯಲ್ಲಿ ಸಾಬೀತಾದರೆ ನಿಜವಾಗಲೂ ಪೀರ್ ಮಹರ್ ಅಲಿ ಶಾಹ್ ಸಾಹಿಬರ ತಫ್ಸೀರ್ ಮತ್ತು ಅರಬ್ಬಿ ಭಾಷೆ ದೈವಿಕ ಪುಷ್ಟಿ ಪಡೆದವರ ರೀತಿಯಲ್ಲಿದ್ದರೆ ಮತ್ತು ನನ್ನಿಂದ ಈ ಕಾರ್ಯಸಾಧಿತವಾಗಿಲ್ಲ ಎಂದರೆ ಅಥವಾ ಸಾಧ್ಯವಾದರೆ, ಆದರೆ ಅವರು ಸಹ ನನ್ನ ಎದುರಿನಲ್ಲಿ ಹಾಗೆಯೇ ಮಾಡಿ ತೋರಿಸಿದರೆ ಇಡೀ ಲೋಕವೇ ಸಾಕ್ಷಿಯಾಗಿರಲಿ, ನಾನು ಸ್ವೀಕರಿಸುವೆನು. ಸತ್ಯ ಪೀರ್ ಮಹರ್ ಅಲಿ ಶಾಹ್‌ದೊಂದಿಗಿದೆ. ಆ ಪಕ್ಷದಲ್ಲಿ ನಾನು ಇದು ಸಹ ಸಮ್ಮತಿಸುತ್ತೇನೆ. ತನ್ನ ಎಲ್ಲ ಪುಸ್ತಕಗಳು. ಈ ದಾವೆಯೊಂದಿಗಿದೆ. ಅದನ್ನು ಸುಟ್ಟು ಹಾಕುವೆನು ಮತ್ತು ನನ್ನನ್ನು ನಿಕೃಷ್ಟ ಹಾಗೂ ತಪಿತಸ್ಥನೆಂದು ಭಾವಿಸುವೆನು. ನನ್ನ ಕಡೆಯಿಂದ ಅದೇ ಬರಹ ಸಾಕು. ಅದನ್ನು ನಾನು ಇಂದು ಹಸ್ತಾಕ್ಷರದೊಂದಿಗೆ 20 ಸಾಕ್ಷಿಗಳ ನಡುವೆ ಸಮಯ ಬರೆಯುತ್ತೇನೆ. ಆದರೆ ನನ್ನ ಪ್ರಭು ಈ ಚರ್ಚೆಯಲ್ಲಿ ನನ್ನನ್ನು ವಿಜಯಿಯಾಗಿ ಮಾಡಿದರೆ ಮತ್ತು ಪೀರ್ ಮಹರ್ ಅಲಿ ಶಹ್ ಸಾಹಿಬರ ನಾಲಿಗೆ ಬಿದ್ದು ಹೋದರೆ, ಅರಬ್ಬಿ ವಾಕ್ಚಾತುರ್ಯ ವ್ಯಕ್ತಪಡಿಸಲಿಲ್ಲ ಎಂದಾದರೆ ಯಾವುದೇ ಸಾಕ್ಷ್ಯ ಜ್ಞಾನ ಖುರ್‌ಆನ್‌ನ ಅಧ್ಯಾಯದಿಂದ ಬರೆಯಲಿಲ್ಲ ಎಂದಾದರೆ ಅಥವಾ ಈ ಚರ್ಚೆಯಿಂದ ದೂರ ಉಳಿದರೆ ಇವೆಲ್ಲ ರೂಪದಲ್ಲೂ ಕಡ್ಡಾಯವಾಗಿರುವುದೇನೆಂದರೆ ಅವರು ಪಶ್ಚಾತ್ತಾಪಪಟ್ಟು ನನ್ನ ಬೈಅತ್‌ನಲ್ಲಿ ಸೇರಲಿ ಮತ್ತು ಕಡ್ಡಾಯವಾಗಿರುವುದೇನೆಂದರೆ ಸ್ಪಷ್ಟ ಶಬ್ಧಗಳಲ್ಲಿ ಪತ್ರಿಕಾ ಮಾಧ್ಯಮದಲ್ಲಿ ಹತ್ತು ದಿನದೊಳಗೆ ಪ್ರಕಟಪಡಿಸಲಿ.

ನಾನು ಮತ್ತೊಮ್ಮೆ ಬರೆಯುತ್ತೇನೆ. ನನ್ನ ವಿಜಯ ಪೀರ್ ಮಹರ್ ಅಲಿ ಶಹ್ ಸಾಹಿಬ್ ಒಂದು ನಿಕೃಷ್ಟ ಮತ್ತು ನಾಚಿಕೆಗೇಡಿತನದಿಂದ ಏನೂ ಬರೆಯಲಾಗಲಿಲ್ಲ. ಎಂದು ಮಾತ್ರ ಸಾಧ್ಯ ಎಂದು ತಿಳಿಯುವೆನು. ಅವರ ಬರಹಗಳ ಮೇಲೆ ತಜ್ಞರು ತೆಗಳಬೇಕು ಮತ್ತು ದ್ವೇಷಿಸಬೇಕು. ಏಕೆಂದರೆ ನಾನು ಅಲ್ಲಾಹನಿಂದ ಅದೇ ದುಆ ಮಾಡಿದ್ದೇನೆ. ಅವನು ಹಾಗೆಯೇ ಮಾಡಲಿ. ಮತ್ತು ನಾನು ಬಲ್ಲೆನು. ಅವನು ಹಾಗೆಯೇ ಮಾಡುವನು. ಪೀರ್ ಮಹರ್ ಅಲಿ ಶಾಹ್ ಸಾಹಿಬ್ ಸಹ ತನ್ನನ್ನು ತಾನು ಅರಿಯುವವರಾಗಿದ್ದಾರೆ. ಅವರು ಸತ್ಯವಿಶ್ವಾಸಿ ಮತ್ತು ಪ್ರಾರ್ಥನೆ ಸ್ವೀಕಾರದ ಅನುಗ್ರಹ ಹೊಂದಿದವರಾದರೆ ಅವರೂ ಸಹ ಅಂತಹ ದುಆ ಮಾಡಲಿ. ನೆನಪಿರಲಿ ಅಲ್ಲಾಹನು ಎಂದೂ ಅವರ ದುಆ ಸ್ವೀಕರಿಸಲಾರನು. ಏಕೆಂದರೆ ಅವರು ಅಲ್ಲಾಹನ ಸಂದೇಶವಾಹಕರ ಶತ್ರುವಾಗಿದ್ದಾರೆ. ಆದುದರಿಂದ ಆಕಾಶದ ಮೇಲೆ ಅವರಿಗೆ ಗೌರವ ಇಲ್ಲ. (ಮಜಮೂಅ ಇಶ್ತಿಹಾರಾತ್, ಸಂಪುಟ–3, ಪುಟ–100, ಇಶ್ತಿಹಾರ್ ಸಂಖ್ಯೆ–230, ಜುಲೈ 2019 ಖಾದಿಯಾನ್)

**ಅನುಬಂಧ ಜಾಹೀರಾತು ಆಹ್ವಾನ: ಪೀರ್ ಮಹರ್ ಅಲಿ ಶಾ ಸಾಹಿಬ್ ಗೊಲಡ್ವಿ**

ಸಯ್ಯದನಾ ಹಝ್ರತ್ ಮಸೀಹ್ ಮೌಊದ್(ಅ) ಅವರು ಪೀರ್ ಮಹರ್ ಅಲಿ ಶಾ ಅವರನ್ನು ಹೊರತುಪಡಿಸಿ ಪಂಜಾಬ್ ಮತ್ತು ಭಾರತದ ಎಲ್ಲಾ ವಿದ್ವಾಂಸರಿಗೆ ಸವಾಲು ಹಾಕಿದರು.

ಅವರು ಬರೆದರು: ಪೀರ್ ಮಹರ್ ಅಲಿ ಶಾ ಸಾಹಿಬ್‌ರವರ ಸಾವಿರಾರು ಚೇಲಾಗಳು ಈ ವಿಶ್ವಾಸವಿಡುತ್ತಾರೆ. ಅವರು ಜ್ಞಾನದಲ್ಲಿ ಮತ್ತು ಸಾಕ್ಷ್ಯಗಳಲ್ಲಿ ಹಾಗೂ ಆಧ್ಯಾತ್ಮಿಕ ಜ್ಞಾನದಲ್ಲಿ ಈ ದೇಶದ ಎಲ್ಲಾ ಮೌಲ್ವಿಗಳಿಗಿಂತಲೂ ಹೆಚ್ಚು ಪಂಡಿತರಾಗಿದ್ದಾರೆ. ಅದೇ ಕಾರಣದಿಂದ ನಾನು ಈ ಪರೀಕ್ಷೆಗಾಗಿ ಪೀರ್ ಸಾಹಿಬರನ್ನು ಆಯ್ಕೆ ಮಾಡಿಕೊಂಡಿದ್ದೇನೆ. ಅವರು ಎದುರು ಅಲ್ಲಾಹನ ಆ ದೃಷ್ಟಾಂತ ಪ್ರಕಟವಾಗಲಿ. ಅದು ಅವನು ಪ್ರವಾದಿಗಳಿಗೆ ನೀಡುವ ಒಂದು ವಿಶೇಷ ಕುರುಹು ಆಗಿದೆ. ಆದರೆ ಈ ದೇಶದ ಕೆಲ ಉಲಮಾಗಳು ತನ್ನ ಹಮ್ಮಿನಿಂದ ನಾವು ಖುರ್‌ಆನ್ ಬಲ್ಲವರಾಗಿದ್ದೇವೆ. ಮತ್ತು ಅರಬ್ಬಿ ಭಾಷೆ ಸಾಹಿತ್ಯದಲ್ಲಿ ಪೀರ್ ಸಾಹೇಬರಿಗಿಂತ ಹೆಚ್ಚು ಜ್ಞಾನ ಹೊಂದಿದ್ದೇವೆ ಎಂದು. ಅಥವಾ ದೈವಿಕ ದೃಷ್ಟಾಂತ ಪ್ರಕಟವಾಗುವ ಸಮಯ ಈ ನೆಪ ಒಡ್ಡಬಹುದು. ಪೀರ್ ಸಾಹಿಬ್ ಸೋತು ಹೋದರೆ ನಮಗೇನು ಅಂತಿಮ ತೀರ್ಪಲ್ಲ. ನಮ್ಮನ್ನು ಈ ಸ್ಪರ್ಧೆಗೆ ಕರೆದಿದ್ದರೆ ಅವಶ್ಯವಾಗಿ ವಿಜಯಿಯಾಗುತ್ತಿದ್ದೆವು. ಆದುದರಿಂದ ಜಾಣ್ಮೆಯ ನಡೆ ಎಂದರೆ ಯಾವುದೇ ಹಿರಿಯರನ್ನು ಸಹ ಹೊರಗಿಡಬಾರದು ಮತ್ತು ಸ್ಪಷ್ಟವಿದೆ ಸ್ಪರ್ಧೆಯ ಸಮಯ ಎಷ್ಟೆಲ್ಲ ಹೆಚ್ಚು ಜನರು ಮೈದಾನದಲ್ಲಿ ಸೇರುವರು ಅಷ್ಟೇ ದೈವಿಕ ದೃಷ್ಟಾಂತದ ಗೌರವ ಪೂರ್ಣ ಶಕ್ತಿಯಿಂದ ಮತ್ತು ಘನತೆಯಿಂದ ಪ್ರಕಟವಾಗುವುದು. ಅದು ಎಂತಹದೊಂದು ಬಲವಾದ ದೃಷ್ಟಾಂತವಾಗಿರುವುದೆಂದರೆ ಅದು ಸೂರ್ಯನ ರೀತಿ ಮಿನುಗುವುದನ್ನು ಕಾಣಬಹುದು. ಅದರಿಂದ ಕೆಲ ಸಜ್ಜನ ಮೌಲ್ವಿಗಳಿಗಾದರೂ ಮಾರ್ಗದರ್ಶನ ಲಭಿಸುವ ಸಾಧ್ಯತೆ ಇದೆ. ಮತ್ತು ನನ್ನಲ್ಲಿರುವ ದೈವಿಕ ಶಕ್ತಿಯನ್ನು ಗುರುತಿಸಬಹುದಾಗಿದೆ. ಆದುದರಿಂದ ಈ ಅನುಬಂಧದ ಮೂಲಕ ಪಂಜಾಬ್ ಮತ್ತು ಭಾರತದ ಆ ಎಲ್ಲಾ ಮೌಲ್ವಿಗಳಿಗೆ ಆಹ್ವಾನಿಸಲಾಗುತ್ತದೆ. ಯಾರೆಲ್ಲ ಖುರ್‌ಆನ್‌ನ ತಫ್ಸೀರ್ ಜ್ಞಾನ, ಅರಬ್ಬಿ ಸಾಹಿತ್ಯದಲ್ಲಿ ಪಂಡಿತರಾಗಿರುವರು. (ಅದೇ ಪುಟ 108)

ಮೇಲ್ಕಾಣಿಸಿದ ಜಾಹೀರಾತಿನಲ್ಲಿ ಸಾಮೂಹಿಕ ರೂಪದಲ್ಲಿ ಪಂಜಾಬ್ ಮತ್ತು ಭಾರತದ ಎಲ್ಲಾ ಮೌಲ್ವಿಗಳಿಗೆ ಎದುರಾಳಿಯಾಗಿ ಬರಲು ಆಹ್ವಾನಿಸಿದ ನಂತರ ಅವರು ಅವರ ವಿರೋಧದಲ್ಲಿ ಮುಂದಾಳತ್ವ ವಹಿಸಿದ್ದ ವಿಶೇಷವಾಗಿ 86 ಜನರ ಹೆಸರುಗಳನ್ನು ನಮೂದಿಸಿ ಅವರನ್ನು ಪ್ರತಿವಾದಿಸಲು ಆಹ್ವಾನಿಸಿದರು. ಪೀರ್ ಸಾಹಿಬ್ ಅತ್ಯಂತ ಚಾಲಾಕಿಯಿಂದ ಮತ್ತು ಮೋಸಗಾರಿಕೆಯಿಂದ ಈ ಪ್ರತಿವಾದವನ್ನು ತನ್ನ ಶಿಷ್ಯಂದಿರೆಡೆ ಅವಮಾನವಾಗಬಾರದು ಎಂಬ ನೆಲೆಯಲ್ಲಿ ನುಣುಚಿಕೊಂಡು, ಒಟ್ಟಾರೆ ಸೂಚನೆ ಕೊಡದೇ ಲಾಹೋರ್ ತಲುಪಿದರು ಮತ್ತು ಅಲ್ಲಿಂದ ಒಂದು

ಜಾಹೀರಾತು ಪ್ರಕಟಿಸಿದರು. ನನಗೆ ಮಿರ್ಝಾ ಸಾಹಿಬರಿಂದ ಪ್ರತಿವಾದಿಸಲು ಆಹ್ವಾನ ಬಂದಿದೆ ಆದರೆ ಅದಕ್ಕಿಂತ ಮೊದಲು ತನ್ನ ಮಸೀಹನ ಮಹದಿಯ ದಾವೆಯ ಬಗ್ಗೆ ನನ್ನೊಡನೆ ಚರ್ಚಿಸಲಿ. ಅದಕ್ಕೆ ಮುಹಮ್ಮದ್ ಹುಸೇನ್ ಬಟೌಲ್ವಿ ಮತ್ತು ಅವರ ಸಂಗಡಿಗರು ಬೇಕಾದರೆ ಸಾಕ್ಷಿ ನೀಡಲಿ. ಮಿರ್ಝಾ ಸಾಹೇಬ ಸೋತು ಹೋದರೆ ಅವರಿಗೆ ತನ್ನ ಬೈಅತ್ ಮಾಡಬೇಕಾದಿತು. ಅದಾದ ನಂತರ ಖುರ್‌ಆನ್ ತಫ್ಸೀರಿನ ಸ್ಪರ್ಧೆ ನಡೆಯಲಿ.

**ನನ್ನ ಅಹ್ವಾನಲಕ್ಕೆ ಪ್ರತಿಕ್ರೀಯೆಯಾಗಿ ಪೀರ್ ಮಹರ್ ಅಲಿ ಶಾಹ್ ಸಾಹಿಬ್ ಗೊಲಡ್ವಿ ಯಾವ ಕ್ರಮ ಕೈಗೊಂಡರು?**

ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮೇಲ್ಕಾಣಿಸಿದ ಶೀರ್ಷಿಕೆಯ ಅಡಿಯಲ್ಲಿ ಪೀರ್ ಸಾಹೇಬರ ಅವಮಾನ ಜನಕ ಕ್ರಮ ಅವರ ಮೋಸ ಮತ್ತು ವಂಚನೆಯ ಸ್ಥಿತಿಯನ್ನು ವಿವರಿಸುತ್ತಾ ಬರೆದರು:

"ಪೀರ್ ಸಾಹಿಬ್ ಈ ವಿಧಾನವನ್ನು ಸ್ವೀಕರಿಸುತ್ತಿದ್ದರೆ ಅವರಿಗೆ ಒಳ್ಳೆಯದಾಗಿತ್ತು ಏಕೆಂದರೆ ಅವರು ವಿದ್ವಾಂಸರು ಎನಿಸಿಕೊಳ್ಳುತ್ತಾರೆ ಆದರೆ ವಿಷಾದದ ಸಂಗತಿಯಾಗಿದೆ ಅವರು ಸ್ವೀಕರಿಸಲಿಲ್ಲ. ಅಂದಹಾಗೆ ಬೇಕಂತಲೆ ನಿರಾಕರಿಸಿದರೆ ಅವರ ಬಂಡವಾಳ ಬಯಲಾಗುತ್ತಿತ್ತು ಆದುದರಿಂದ ಮೊಸ ಮತ್ತು ವಂಚನೆಯ ದಾರಿ ಹಿಡಿದು ಈ ನೆಪ ಮುಂದಿಟ್ಟರು ನಿಮ್ಮ ಶರತ್ತುಗಳು ಮಂಜೂರಿದೆ ಆದರೆ ಮೊದಲು ಖುರ್‌ಆನ್, ಹದೀಸ್‌ಗಳನ್ವಯ ನಿಮ್ಮ ವಿಶೌಆಸಗಳ ಬಗ್ಗೆ ಚರ್ಚೆಯಾಗಬೇಕು ಮತ್ತೆ ಮೌಲವಿ ಮುಹಮ್ಮದ್ ಹುಸೈನ್ ಬಟಾಲ್ವಿ ಮತ್ತು ಅವರ ಸಂಗಡಿಗರು, ಇನ್ನಿಬ್ಬರು ಈ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ನೀವು ಈ ಚರ್ಚೆಯಲ್ಲಿ ಸತ್ಯದ ಮೇಲೆ ಇಲ್ಲವಾಗಿದ್ದಲ್ಲಿ ನಿಮಗೆ ನನ್ನ ಬೈಅತ್ ಮಾಡಲಿ. ಈಗ ಪ್ರೇಕ್ಷಕರು ಸ್ವಯಂ ಯೋಚಿಸಿಕೊಳ್ಳಿ ಅವರೇನು ಈ ರೀತಿಯಾಗಿ ನನ್ನ ಆಹ್ವಾನವನ್ನು ಸ್ವೀಕರಿಸಿದಂತಾಯಿತೆ ಅಥವಾ ನಿರಾಕರಿಸಿದಂತಾಯಿತು. ಇದು ಯಾವ ರೀತಿಯ ತಮಾಷೆಯಾಗಿದೆ, ವಿಶ್ವಾಸಗಳ ಬಗ್ಗೆ ಚರ್ಚೆ ಆ ಕುರಿತು ಸ್ವಯಂ ಅವರಿಗೆ ತಿಳಿದಿದೆ ಮೌಲವಿ ಮುಹಮ್ಮದ್ ಹುಸೈನ್ ಬಟಾಲವಿ ಮೊದಲು ವಿರೋಧಿಯಗಿದ್ದಾರೆ ಅವರ ವಿರ್ಣಯಕ್ಕೆ ಬಿಟ್ಟರೆ ಆದೀತು. ಅದಾಗ್ಯೂ ಅವರು ಚನ್ನಾಗಿ ಬಲ್ಲರು ನನಗೆ ಅವರ ಸತ್ಯವಾದಿ ಎಂದು ಘೋಷಿಸಿದರೆ ತನ್ನ ಹಳೆ ಚಾಳಿ ತ್ಯಜಿಸಿದಂತಾಗುವುದು.

ಅದಲ್ಲದೆ ಪೀರ್ ಸಾಹೇಬರಿಗೆ ಇದು ಸಹ ಗೊತ್ತಿದೆ ನಾನು ಅಂಜಾಮೆ ಆಥಮ್ ಪತ್ರಿಕೆಯಲ್ಲಿ ಪಡಿಸಿರುತ್ತೇನೆ ಮುಂದೆ ನಾನು ಈ ಮೌಲವಿಗಳೊಂದಿಗೆ ಒಣ ಚರ್ಚೆ ಮಾಡುವುದಿಲ್ಲ ಹೀಗಿರುವಾಗ ನಾನು ನನ್ನ ವಚನ ಮುರಿಯಲು ಹೇಗೆ ಸಾಧ್ಯ? ಪೀರ್ ಸಾಹೇಬರ ಜಮಾಅತ್ತಿನ ಸಂಸ್ಕೃತಿ ಎಂದರೆ ಅವರು ಅಶ್ಲೀಲ ಭಾಷೆಯನ್ನು ಉಪಯೋಗಿಸಿ ಮುಕ್ತ ಪತ್ರ ನನ್ನ ಹೆಸರಿಗೆ ಬರೆದು ಕಳುಹಿಸುತ್ತಾರೆ, ಎಂತಹ ಬೈಗುಳ ಎಂದರೆ ಅದು ಚಮ್ಮಾರಲಿಂದಲೂ ಬರಲು ಸಾಧ್ಯವಿಲ್ಲ. ಈ ಹಿಂದೆ ನಾನು ಪೀರ್ ಸಾಹಿಬ್ ಅವರ ಊಹೆಯನ್ನು ಮಾರಾಟ ಮಾಡಲು ಉದ್ದೇಶಿಸಿದೆ. ಅವರು ಖುರ್‌ಆನ್ ಹಾಗೂ ಹದೀಸ್‌ನ ಗ್ರಂಥಗಳಿಂದ ಏನನ್ನಾದರು ವಾದಿಸಬಹುದಾದರೂ ನಾನು ಅದನ್ನು ನನ್ನ ಸ್ನೇಹಿತರೊಬ್ಬರಿಗೆ ಮಾಡುತ್ತೇನೆ, ಅಹ್ಸನ್ ಸಾಹಿಬ್ ಅಮ್ರೋಹಿ ಪೀರ್ ಸಾಹಿಬ್ರೊಂದಿಗೆ ವಾದಿಸಲು ಒಪ್ಪಿಕೊಂಡಿದ್ದರೆ ಆಗ ಅವರು ಹೆಮ್ಮೆ ಪಡುತ್ತಾರೆ. ಅಂತಹ ಸಂತ ಮುಹದ್ದಿಸ್, ಫಕೀಹ್ ಅವರನ್ನು ತನ್ನ ಸ್ಪರ್ಧೆಗೆ ಒಪ್ಪಿಕೊಂಡಿದ್ದಾನೆ ಆದರೆ ದುರಾದೃಷ್ಟವಶಾತ್ ಅಯ್ಯುದ ಸಾಹೇಬರು ಈ ಪಕ್ಷದಲ್ಲಿ ಹೊಲಸು ನಿಂದನೆಗಳು ನೋಡಿದಾಗ ಖಾರ್ವಾರದ ಮಾದರಿಯೊಂದಿಗೆ ಹೋಲಿಸಿ ತಮ್ಮ ಸಭೆಗಳಿಗೆ ಗೈರುಹಾಜರಾಗುವುದೇ ಉತ್ತಮ ಮಾರ್ಗ ಎಂದು ಭಾವಿಸಿದರು. ಹೌದು ನಾನು ಪೀರ್ ಮೆಹೆರ್ ಅಲಿ ಸಾಹಿಬ್ ಅವರಿಗೆ ಉಡುಗೋರೆಯಾಗಿ ನಿಯತಕಾಲಿಕವನ್ನು ಸಂಗ್ರಹಿಸಿದೆ ಅದರ ಹೆಸರು ನಾನು "ತೊಹಫ ಗೊಲಡ್ವಿಯ" ಎಂದಿಡ್ಡಿರುವೆನು. ಪೀರ್ ಸಾಹಿಬರು ಅದಕ್ಕೆ ಉತ್ತರ ನೀಡಿದಾಗಲೆ ಜನರಿಗೆ ಸೆಳೆಯುವುದು ನಮ್ಮ ಸಾಕ್ಷ್ಯಗಳೇನು ಮತ್ತು ಅವರ ಉತ್ತರವೇನು." (ಅದೇ ಇಶ್ತಿಹಾರ್ ಸಂಖ್ಯೆ–232, ಪುಟ–120)

ಪೀರ್ ಮೆಹೆರ್ ಅಲಿ "ತೊಹಫ ಗೊಲಡ್ವಿಯಾ"ದ ಸಾಕ್ಷಿಗಳಿಗೆ ಉತ್ತರವಂತು ಬರೆಯಲಿಲ್ಲ ಆದರೆ ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅದಾದ ನಂತರವೂ ಮತ್ತೆ ಮತ್ತೆ ಇನ್ನಷ್ಟು ಪಂಥಾಹ್ವಾನಗಳನ್ನು ನೀಡಿದರು. ಜನರಿಗೆ ಪೀರ್ ಸಾಹಿಬರ ಅಸಲಿಯತ್ತು ಮತ್ತು ಅವರ ಸಾಮರ್ಥ್ಯ ಸರಿಯಾಗಿ ತಿಳಿಯುವಂತಾಗಲಿ ಎಂದು. ಈ ಪಂಥಾಹ್ವಾನಗಳ ವಿವರ ನಾವು ಇನ್‌ಶಾಅಲ್ಲಾಹ್ ಮುಂದಿನ ಸಂಚಿಕೆಯಲ್ಲಿ ಪ್ರಸ್ತಾಪ ಪಡಿಸುತ್ತೆವೆ.

**(ಮನ್ಸೂರ್ ಅಹ್ಮದ್ ಮಸ್ರೂರ್)**

************

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಎರಡೂ ಸಾಅತ್‌ಗೆ ಸಾಕ್ಷಿಯಾಗಿದೆ. ಆಕಾಶ ಮತ್ತು ಭೂಮಿಯ ಸೃಷ್ಟಿಯು ಖಿಯಾಮತ್‌ಗಾಗಿಯು ಸಾಕ್ಷಿಯಾಗಿದೆ ಮತ್ತು ಪ್ರವಾದಿಗಳ ವಿಜಯಕ್ಕೆ ಮತ್ತು ಅವರ ಶತ್ರುಗಳ ವಿನಾಶಕ್ಕೆ ಪುರಾವೆಯಾಗಿದೆ.

ಖಿಯಾಮತ್‌ಗೆ ಹೇಗೆ ಎಂದರೆ ಮಾನವನ ಜೀವನವೂ ಕೇವಲ ಈ ಲೋಕದ ವರೆಗೆ ಮುಕ್ತಾಯಗೊಳ್ಳುತ್ತದೆ ಅಂದರೆ ಇಷ್ಟು ದೊಡ್ಡ ಪ್ರಪಂಚವು ಅಲ್ಲಾಹನು ಕೇವಲ ಮಾನವ ಇದರಲ್ಲಿ ಹುಟ್ಟಿ, ಕೆಲವು ದಿವಸ ಇದರಲ್ಲಿ ತಿಂದು ಕುಡಿದು ಮತ್ತು ಸಾಯುತ್ತಾನೆ ಸೃಷ್ಠಿಸಿದ್ದಾನೆ ಎಂದು ಭಾವಿಸುವುದು ವಿವೇಕದ ವಿರುದ್ಧದ ವಿಷಯವಾಗಿದೆ. ಇಷ್ಟು ದೊಡ್ಡ ವ್ಯವಸ್ಥೆಯನ್ನು ರಚಿಸುವುದು ಬಹಳ ದೊಡ್ಡ ಉದ್ದೇಶಕ್ಕಾಗಿ ಮಾತ್ರ ಮತ್ತು ಆ ಉದ್ದೇಶವು ಈ ಜಗತ್ತಿನಲ್ಲಿ ಪೂರ್ಣಗೊಳ್ಳುತ್ತಿದೆ ಎಂದು ಕಾಣುವುದಿಲ್ಲ. ಆದುದರಿಂದ ಮನುಷ್ಯನ ಜೀವನವು ಈ ಐಹಿಕ ಜೀವನದೊಂದಿಗೆ ಕೊನೆಗೊಳ್ಳುವುದಿಲ್ಲ, ಬದಲಿಗೆ ಈ ವ್ಯವಸ್ಥೆಯ ಹಿರಿಮೆಗೆ ಅನುಗುಣವಾಗಿ ಉನ್ನತ ಸ್ಥಾನವನ್ನು ಪಡೆಯುವ ದೀರ್ಘಾವಧಿಯವರೆಗೆ ಹೋಗಬೇಕು.

ಗಮನಹರಿಸಿದಾಗ ಇಡೀ ವ್ಯವಸ್ಥೆಯು ವಿಭಿನ್ನವಾಗಿದೆ. ಸರ್ವಶಕ್ತನಾದ ಅಲ್ಲಾಹನು ಅಂತಹ ರಹಸ್ಯಗಳನ್ನು ಅಂತ್ಯಗೊಳ್ಳದ ಸಣ್ಣ ವಿಷಯಗಳಲ್ಲಿ ಇರಿಸಿದ್ದಾನೆ. ಮಾನವ ದೇಹವನ್ನೆ ತೆಗೆದುಕೊಳ್ಳಿ, ಅದರ ವ್ಯವಸ್ಥೆಯು ಎಷ್ಟು ಸಂಕೀರ್ಣವಾಗಿದೆ. ಲಕ್ಷಾಂತರ ವೈದ್ಯರು ಮತ್ತು ಅಂಗರಚನಾಶಾಸ್ತ್ರಜ್ಞರು ಸತ್ಯವನ್ನು ಕಂಡುಹಿಡಿಯಲು ಕೆಲಸ ಮಾಡುತ್ತಿದ್ದಾರೆ, ಆದರೆ ಇದುವರೆಗೆ ಅವರು ಮಾನವ ದೇಹಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಸಂಪೂರ್ಣವಾಗಿ ತಿಳಿದುಕೊಳ್ಳಲು ಸಾಧ್ಯವಾಗಿಲ್ಲ. ಪವಿತ್ರ ಖುರ್‌ಆನ್‌ನ ಅವಲೋಕನದ ನಂತರದಿಂದ ಯುರೋಪ್ ವಿಜ್ಞಾನದಲ್ಲಿ ಅಪಾರ ಪರಿಪೂರ್ಣತೆಯನ್ನು ಸಾಧಿಸಿದೆ, ಆದರೆ ಇದುವರೆಗೆ ಇಡೀ ಮಾನವ ದೇಹವನ್ನು ಆವರಿಸಲು ಸಾಧ್ಯವಾಗಲಿಲ್ಲ. ಹೀಗಿರುವಾಗ ಪುನರುತ್ಥಾನ ದಿನವನ್ನು ನಿರಾಕರಿಸುವವರು ಹೇಳುವಷ್ಟು ವಿಶಾಲವಾದ ಕಾನೂನುಗಳನ್ನು ಆಧರಿಸಿದ ಅಸ್ತಿತ್ವದ ಸೃಷ್ಟಿಯ ಉದ್ದೇಶವನ್ನು ಹೇಗೆ ಸಮಂಜಸವೆಂದು ಪರಿಗಣಿಸಬಹುದು?

ಅದೇ ರೀತಿಯಲ್ಲಿ, ಈ ವ್ಯವಸ್ಥೆಯು ಪ್ರವಾದಿಗಳ ಯಶಸ್ಸನ್ನು ಮತ್ತು ಅವರ ಶತ್ರುಗಳ ನಾಶವನ್ನು ಸೂಚಿಸುತ್ತದೆ. ಭೂಮಿಯನ್ನು ಆಕಾಶದಿಂದ ವಿಭಜಿಸಿರಿ, ಆಗ ಅದಕ್ಕೆ ಏನಾಗುತ್ತದೆ, ಅದು ಒಂದು ದಿನವೂ ಉಳಿಯುವುದಿಲ್ಲ. ಹಾಗಾದರೆ ಆಧ್ಯಾತ್ಮಿಕ ಕ್ಷೇತ್ರದಿಂದ ತಮ್ಮನ್ನು ಕಡಿತಗೊಳಿಸಿ ತಾವು ಉಳಿದಿರುತ್ತಾರೆ ಎಂದು ಭಾವಿಸುವವರು ಎಷ್ಟು ಕುರುಡರಾಗಿದಾರೆ. ಈ ಪರಿಪೂರ್ಣ ವ್ಯವಸ್ಥೆಯ ಭಾಗವಾಗುವುದರಿಂದ ಭೂಮಿಯನ್ನು ಹೇಗೆ ಉಳಿಸಬಹುದು, ಹಾಗೆಯೇ ಈ ಆಧ್ಯಾತ್ಮಿಕ ವ್ಯವಸ್ಥೆಯ ಭಾಗವಾಗುವುದರಿಂದ ಮನುಷ್ಯನು ನಾಶವಾಗದಂತೆ ರಕ್ಷಿಸಬಹುದು. ಇಲ್ಲದಿದ್ದರೆ ಅವನು ಉಳಿದಿರಲು ಯಾವ ಮಾರ್ಗವು ಇಲ್ಲ. ವಿಶೇಷವಾಗಿ ಅವನು ಈ ವ್ಯವಸ್ಥೆಯ ಮೇಲೆ ಅಕ್ರಮಿಸಿದಾಗ ಅವನಿಗೆ ಮೋಕ್ಷ ಇರುವುದಿಲ್ಲ. ಆದ್ದರಿಂದ, ಪ್ರವಾದಿ ಮುಹಮ್ಮದ್(ಸ)ನ ಅವಿಶ್ವಾಸಿಯರಿಗೆ ಆಧ್ಯಾತ್ಮಿಕ ಆಕಾಶದಿಂದ ಅವರ ಬೇರ್ಪಡುವಿಕೆಯಿಂದಾಗಿ ಅವರ ವಸ್ತುಗಳು ಯಾವುದೇ ಪ್ರಯೋಜನವಾಗುವುದಿಲ್ಲ ಎಂದು ಹೇಳಲಾಗಿದೆ, ಆದರೆ ಈಗ ಅವರ ನಾಶ ಮತ್ತು ಮುಸ್ಲಿಮರ ಅಭಿವೃದ್ಧಿಗೆ ಸಮಯ ಬಂದಿದೆ.

**(ತಫ್ಸಿರ್ ಕಬೀರ್, ಸಂಪುಟ–4, ಪುಟ–107, ಖಾದಿಯಾನ್)**

**ಆಡಂಬರ ಮತ್ತು ತೋರ್ಪಡಿಕೆಗೊಸ್ಕರ ಹಕ್ಕ್ ಮಹರನ್ನು ನಿಶ್ಚಯಿಸುವುದು ತಪ್ಪು ಸಂಪ್ರದಾಯವಾಗಿರುತ್ತದೆ.**

ಹಝ್ರತ್ ಮಸೀಹ್ ಮೌಊದ್(ಅ) ನುಡಿಯುತ್ತಾರೆ:

ವಧು ಹಾಗೂ ವರನ ಕಡೆಯವರು ಇಬ್ಬರು ಸೇರಿ ರಾಜಿಯಾಗಿ ಹಕ್ಕ್ ಮಹರ್ ನಿಶ್ಚಯಿಸಿ ಕೊಳ್ಳುತ್ತಾರೆ ಇದಕ್ಕೆ ಯಾವುದೇ ಆಕ್ಷೇಪವಿಲ್ಲ. ಆದರೆ ಶರೀಅತ್ತಿನಲ್ಲಿ ಹಕ್ಕ್ ಮಹರ್ ಇಷ್ಟೇ ನೀಡಬೇಕೆಂಬ ನಿಯಮ ಅಧಿಕೃತವಾಗಿ ಹದೀಸುಗಳಲ್ಲಿ ಯಾವುದೇ ಉಲ್ಲೇಖವಿಲ್ಲ. ಆದರೆ ಆ ಸಂಧರ್ಭಕನ್ನುಸಾರ ಹಕ್ಕ್ ಮಹರ್ ನಿಶ್ಚಯಿಸಿಕೊಳ್ಳಬಹುದು. ಅಂದರೆ ಪ್ರಸಕ್ತ ಸಮಯದಲ್ಲಿನ ಜನರ ಜೀವನ ಮಟ್ಟವೇ ಆಧಾರವಾಗಿರುತ್ತದೆ.

ನಮ್ಮ ಪ್ರಾಂತ್ಯದಲ್ಲಿರುವ ಒಂದು ಕೆಟ್ಟ ಸಂಪ್ರದಾಯವೆಂದರೆ ಕೇವಲ ಹೊರ ಜಗತ್ತಿನ ತೋರಿಕೆಗಾಗಿ ಹಾಗೂ ಆಡಂಬರಕ್ಕಾಗಿ ಲಕ್ಷಾಂತರ ಹಕ್ಕ್ ಮಹರ್ ಅನ್ನು ನಿಶ್ಚಿಸಿಕೊಳ್ಳುತ್ತಾರೆ. ಆದರೆ ಅವರ ಉದ್ದೇಶ ಬೇರೆಯೇ ಅಗಿರುತ್ತದೆ. ಅದೇ ರೀತಿ ವಧುವಿನ ಕಡೆಯವರು ವರನನ್ನು ತನ್ನ ಹಿಡಿತದಲ್ಲಿ ಇರಿಸಿಕೊಳ್ಳಲು ಈ ರೀತಿಯ ಹಕ್ಕ್ ಮಹರ್‌ಅನ್ನು ನಿಶ್ಚಯಿಸಿಕೊಳ್ಳುತ್ತಾರೆ. ಆದರೆ ಇದರಿಂದ ಬೇರೆ ಅನೇಕ ಸಮಸ್ಯೆಗಳು ಉದ್ಭವವಾಗುತ್ತದೆ.

**(ಮಲ್‌ಫೂಝಾತ್, ಸಂಪುಟ–3, ಪುಟ–284) (ರಿಶ್ತನಾತ ವಿಭಾಗ, ನಝಾರತ್ ಇಸ್ಲಾಹ್ ವ ಇರ್ಷಾದ್, ಖಾದಿಯಾನ್)**

**ವಾಖಿಫೀನೆ ಝಿಂದಗಿ ಹಾಗೂ ಧರ್ಮೋಪದೇಶ ಮತ್ತು ತರಬೇತಿಯ ಕರ್ತವ್ಯವನ್ನು ನಿರ್ವಹಿಸಬಲ್ಲ ಧಾರ್ಮಿಕ ಜ್ಞಾನವನ್ನು ಹೊಂದಿರುವವರ ಅಗತ್ಯವು ಹೆಚ್ಚುತ್ತಿದೆ. ಆದ್ದರಿಂದ, ಈ ಕೆಲಸವನ್ನು ವಿಶೇಷವಾಗಿ ಮಾಡುವ ಒಂದು ಗುಂಪು ಇರಬೇಕು.**

**ನಿಮ್ಮ ಮಕ್ಕಳನ್ನು ಜಾಮಿಯ ಅಹ್ಮದೀಯಾದಲ್ಲಿ ಶಿಕ್ಷಣವನ್ನು ಪಡೆಯಲು ಅರ್ಪಿಸಿ**

ಹಝ್ರತ್ ಅಮೀರ್-ಉಲ್-ಮುಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ)ರವರು ನುಡಿಯುತ್ತಾರೆ:

ಜಮಾಅತ್ತಿನ ಅಗತ್ಯಗಳು ಹೆಚ್ಚಾದಂತೆ ತಬ್ಲೀಗಿನ ಕ್ಷೇತ್ರ ಮತ್ತು ಇತರ ಸೇವಾ ಕ್ಷೇತ್ರಗಳಲ್ಲಿ ವಾಖಿಫೀನೆ ಝಿಂದಗಿಯರ ಮತ್ತು ಮುಬಲ್ಲಿಗೀನರ (ಪ್ರಚಾರಕರು) ಅಗತ್ಯವಿದೆ. ಈ ವಿಸ್ತರಣೆಯಾಗುತ್ತಿದ್ದಂತೆ ಕೆಲಸವು ಸಹ ಹೆಚ್ಚುತ್ತಿದೆ, ಅಹ್ಮದಿಯತ್‌ನ ಸಂದೇಶ ಹರಡುತ್ತಿದೆ. ಜಗತ್ತು ಕೂಡ ಅಹ್ಮದಿಯತ್ ಅನ್ನು ಸ್ವೀಕರಿಸುತ್ತಾ ಇದೆ. ಇದರೊಂದಿಗೆ, ವಾಖಿಫೀನೆ ಝಿಂದಗಿ ಹಾಗೂ ಧರ್ಮೋಪದೇಶ ಮತ್ತು ತರಬೇತಿಯ ಕರ್ತವ್ಯವನ್ನು ನಿರ್ವಹಿಸಬಲ್ಲ ಧಾರ್ಮಿಕ ಜ್ಞಾನವನ್ನು ಹೊಂದಿರುವವರ ಅಗತ್ಯವು ಹೆಚ್ಚುತ್ತಿದೆ......... ಜಮಾಅತ್ತಿನ ಪ್ರತಿಯೊಬ್ಬ ವ್ಯಕ್ತಿಯು ಯಾವಾಗಲೂ ತಬ್ಲೀಗ್‌ನಲ್ಲಿ ಅಥವಾ ತರಬೇತಿ ನೀಡುವುದರಲ್ಲಿ ನಿರತರಾಗಿರುಲು ಸಾಧ್ಯವಿಲ್ಲ ಆದ್ದರಿಂದ, ಈ ಕೆಲಸವನ್ನು ವಿಶೇಷವಾಗಿ ಮಾಡುವ ಒಂದು ಗುಂಪು ಇರಬೇಕು ಎಂದು ಅಲ್ಲಾಹನು ಹೇಳಿರುವನು. ಇನ್ನೊಂದು ಸ್ಥಳದಲ್ಲಿ, ಉಮ್ಮತ್ತಿನ ಪ್ರತಿಯೊಬ್ಬ ವ್ಯಕ್ತಿಗೂ ಒಳ್ಳೆಯ ಕಾರ್ಯಗಳನ್ನು ಹರಡುವ, ಕೆಟ್ಟದ್ದನ್ನು ತಡೆಯುವ ಮತ್ತು ಅಲ್ಲಾಹನ ಕಡೆಗೆ ಅಹ್ವಾನಿಸುವ ಕರ್ತವ್ಯವನ್ನು ಪೂರೈಸುವ ಜವಾಬ್ದಾರಿಯನ್ನು ವಹಿಸಲಾಗಿದೆ. ಆದರೆ ಮತ್ತೆ ಹೇಳಿರುವುದು ಏಕೆಂದರೆ ಪ್ರಪಂಚದ ವ್ಯವಸ್ಥೆಯನ್ನು ಸಹ ನಡೆಸಬೇಕಾಗಿದೆ, ಆದ್ದರಿಂದ ಅದರಲ್ಲಿ ತೊಡಗಿರುವವರು ಯಾವಾಗಲೂ ಸಮಯವನ್ನು ನೀಡಲು ಸಾಧ್ಯವಿಲ್ಲ. ಧರ್ಮೋಪದೇಶ ಮತ್ತು ತರಬೇತಿಯ ಕೆಲಸವನ್ನು ಅತ್ಯುತ್ತಮ ರೀತಿಯಲ್ಲಿ ಮಾಡುವ ಮನೋಧರ್ಮ ಎಲ್ಲರಿಗೂ ಇರುವುದಿಲ್ಲ. ಮತ್ತು ಉಮ್ಮತ್ತಿನ ಎಲ್ಲಾ ಸದಸ್ಯರು ಧರ್ಮ ಮುಬಲ್ಲಿಗ್ ಮತ್ತು ಮುರಬ್ಬಿಯವರಿಗೆ ಅಗತ್ಯವಾದ ಧರ್ಮದ ತಿಳುವಳಿಕೆಯನ್ನು ಪಡೆಯಲು ಸಾಧ್ಯವಿಲ್ಲ. ಮತ್ತು ಎಲ್ಲಾ ಜನರಿಗೆ ವಿಶೇಷ ಗಮನದಿಂದ ತರಬೇತಿಯು ಸಹ ನೀಡಲು ಸಾಧ್ಯವಾಗುವುದಿಲ್ಲ. ಆದ್ದರಿಂದ, ಸರ್ವಶಕ್ತನಾದ ಅಲ್ಲಾಹನ ಆದೇಶಗಳನ್ನು, ಅನುಸರಿಸಬೇಕಾದ ಆಜ್ಞೆಗಳನ್ನು ಮತ್ತು ತಡೆಯಬೇಕಾದ ನಿಷೇಧಗಳನ್ನು ಪರಿಚಯ ಮಾಡಿಕೊಳ್ಳಲು, ಮತ್ತು ಅದರ ಆಳವಾದ ಬುದ್ಧಿವಂತಿಕೆಯನ್ನು ಕಲಿಯಲು ಮತ್ತು ನಂತರ ಅದನ್ನು ಹರಡಲು. ಧರ್ಮವನ್ನು ಪೂರ್ಣ ಗಮನದಿಂದ ಕಲಿಯುವ ಒಂದು ವಿಷೇಶ ಗುಂಪು ಇರಬೇಕು. ಮಾಶಾಅಲ್ಲಾಹ್, ತಮ್ಮ ಅಭಿರುಚಿ ಮತ್ತು ಹವ್ಯಾಸಗಳಿಂದ ಲೌಕಿಕ ಶಿಕ್ಷಣದ ಜೊತೆಗೆ ಧಾರ್ಮಿಕ ಜ್ಞಾನದ ಬಗ್ಗೆ ಉತ್ತಮ ತಿಳುವಳಿಕೆಯನ್ನು ಹೊಂದಿರುವ ಅನೇಕ ಜನರು ಜಮಾತ್‌ನಲ್ಲಿದ್ದಾರೆ. ಆದರೆ ಕೆಲವೊಮ್ಮೆ ಅಥವ ಸಾಮಾನ್ಯವಾಗಿಯೇ ಅವರ ಇತರ ಕಾರ್ಯಗಳ ಕಾರಣದಿಂದಾಗಿ ಸಮಯವನ್ನು ನೀಡುಲು ನಿರಂತರವಾಗಿ ಸಾಧ್ಯವಾಗುವುದಿಲ್ಲ. ಅದಾಗ್ಯೂ, ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ, ಧರ್ಮದ ಕೆಲಸಕ್ಕಾಗಿ ವಾಖಿಫೀನೆ ಝಿಂದಗಿಯರ ಗುಂಪು ಇರಬೇಕು ಮತ್ತು ಇಸ್ಲಾಂ ಸಾರ್ವತ್ರಿಕ ಧರ್ಮವಾಗಿರುವುದರಿಂದ ಅದು ಪ್ರತಿಯೊಂದು ಪಂಗಡದಿಂದ, ಅಂದರೆ ಪ್ರತಿಯೊಂದು ಗುಂಪಿನಿಂದ, ಪ್ರತಿ ವರ್ಗದಿಂದ, ಪ್ರತಿಯೊಂದು ವಿಭಾಗದಿಂದ ಜನರ ಜನರ ಗುಂಪು ಇರಬೇಕು. ತದನಂತರ ಮತ್ತಷ್ಟು ವಿಸ್ತರಿಸಿದರೆ, ಪ್ರತಿಯೊಂದು ಖೌಮಿನ(ಗೋತ್ರದಿಂದ) ಜನರು ಧರ್ಮವನ್ನು ಕಲಿಯಬೇಕು ಮತ್ತು ಮುಂದೆ ಕಲಿಸಬೇಕು ಎಂದು ಹೇಳಿರುವನು. ಪ್ರತಿಯೊಂದು ಖೌಮಿನವರು ಮತ್ತು ಪ್ರತಿಯೊಂದು ವರ್ಗವು ವಿಭಿನ್ನ ಮನೋಧರ್ಮ, ಮನೋವಿಜ್ಞಾನ ಮತ್ತು ವಿಧಾನವನ್ನು ಹೊಂದಿದೆ. ಅದಕ್ಕೆ ತಕ್ಕಂತೆ ಉಪದೇಶ ಮಾಡುವ ವಿಧಾನವನ್ನು ಕೈಗೊಳ್ಳಬೇಕು. ಈ ರೀತಿಯಲ್ಲಿ, ತಬ್ಲೀಗ್ ಮತ್ತು ತರಬೇತಿಯು ಸುಲಭವಾಗುತ್ತದೆ. ಏನೇ ಇರಲಿ, ಸರ್ವಶಕ್ತನಾದ ಅಲ್ಲಾಹನು ತಬ್ಲೀಗಿಗಾಗಿ ಮತ್ತು ತರಬೇತಿಗಾಗಿ ಕಾರ್ಯವನ್ನು ನಿರ್ವಹಿಸುವ ವಿಶ್ವಾಸಿಗಳ ಗುಂಪು ಇರಬೇಕು ಮತ್ತು ನಂತರ ಪ್ರತಿಯೊಂದು ಖೌಮು ಮತ್ತು ಪ್ರತಿಯೊಂದು ವರ್ಗದ ಜನರು ಇರಬೇಕು ಇದರಿಂದ ಈ ಕಾರ್ಯವನ್ನು ಸುಗಮಗೊಳಿಸಬಹುದು ಎಂದು ನಮಗೆ ಮಾರ್ಗದರ್ಶನ ನೀಡಿರುವನು.

ಆದುದರಿಂದ ಅಹ್ಮದಿಯಾ ಜಮಾಅತ್ ಈ ತತ್ವದಡಿಯಲ್ಲಿ ಧರ್ಮಕ್ಕಾಗಿ ತನ್ನ ಜೀವನವನ್ನು ಮುಡಿಪಾಗಿಡುವ ವ್ಯವಸ್ಥೆಯನ್ನು ಹೊಂದಿದೆ. ಮತ್ತು ನಾನು ಹೇಳಿದಂತೆ, ಅಲ್ಲಾಹನ ಅನುಗ್ರಹದಿಂದ ವಿವಿಧ ಖೌಮುಗಳು ಮತ್ತು ವರ್ಗಗಳ ಜನರು ಈಗ ಈ ವ್ಯವಸ್ಥೆಯ ಭಾಗವಾಗಿದ್ದಾರೆ ಮತ್ತು ಆಗುತ್ತಿದ್ದಾರೆ. ಮತ್ತು ನಾನು ಹೇಳಿದಂತೆ, ಜಮಾಅತ್ತಿನ ಅಗತ್ಯತೆಗಳು ಹೆಚ್ಚಾದಂತೆ, ಈ ಸಂಖ್ಯೆಯ ಅಗತ್ಯವು ಹೆಚ್ಚಾಗುತ್ತದೆ ಮತ್ತು ಈ ಅಗತ್ಯವು ಬೆಳೆಯುತ್ತಲೇ ಇರುತ್ತದೆ. ಇದೀಗ ಪ್ರಸ್ತುತ ಕಾಲದಲ್ಲಿ ಅಗತ್ಯವಿರುವುದು ಮಾತ್ರವಲ್ಲದೆ ಭವಿಷ್ಯದಲ್ಲಿಯು ಇದರ ಅಗತ್ಯವು ಹೆಚ್ಚಾಗಲಿದೆ. **(ಖುತ್‌ಬ ಜುಮುಅ, ಅಕ್ಟೋಬರ್ 22, 2010)**

**(ಇಂಚಾರ್ಜ್ ನಖ್ಫೆ ನೌ ವಿಭಾಗ ಭಾರತ)**

## ಅಹ್ಮದಿ ವಿದ್ಯಾರ್ಥಿಗಳು ಗಮನಹರಿಸಬೇಕು (ಜಾಮಿಯ ಅಹ್ಮದಿಯಾ ಖಾದಿಯಾನ್‌ನಲ್ಲಿ ಪ್ರವೇಶ)

ಜಾಮಿಯಾ ಅಹ್ಮದಿಯಾ ಖಾದಿಯಾನ್ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರು ಸ್ಥಾಪಿಸಿರುವ ಪವಿತ್ರ ಸಂಸ್ಥೆಯಾಗಿದ್ದು, ಅಲ್ಲಿ ನೂರಾರು ವಿದ್ವಾಂಸರು ಮತ್ತು ಮುಬಲ್ಲಿಗೀನರು (ಬೋಧಕರು) ಪದವಿ ಪಡೆದಿದ್ದಾರೆ ಮತ್ತು ಇಸ್ಲಾಂ ಧರ್ಮದ ನಿಜವಾದ ಬೋಧನೆಗಳನ್ನು ಪ್ರಪಂಚದ ಮೂಲೆಗಳಿಗೆ ಹರಡುವ ತಮ್ಮ ಕರ್ತವ್ಯವನ್ನು ನಿರ್ವಹಿಸುತ್ತಿದ್ದಾರೆ. ಸಯ್ಯುದುನಾ ಹುಝೂರ್ ಅನ್ವರ್(ಅತಬಿಅ) ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರು ಸ್ಥಾಪಿಸಿದ ಈ ಪವಿತ್ರ ಧಾರ್ಮಿಕ ಸಂಸ್ಥೆಯಿಂದ ಶಿಕ್ಷಣವನ್ನು ಪಡೆಯುವ ಮೂಲಕ ಸರಣಿಯ ಸೇವೆಯತ್ತ ಅಹ್ಮದಿ ವಿದ್ಯಾರ್ಥಿಗಳ ಗಮನವನ್ನು ಹಲವಾರು ಸಂದರ್ಭಗಳಲ್ಲಿ ಸೆಳೆದಿದ್ದಾರೆ. ಆದ್ದರಿಂದ, ಹುಝೂರ್ ಅನ್ವರ್(ಅತಬಿಅ) ಅವರ ಸೂಚನೆಗಳ ಬೆಳಕಿನಲ್ಲಿ, ಹೆಚ್ಚು ಹೆಚ್ಚು ವಾಖಿಫೀನೆ ನೌ ಹಾಗೂ ವಾಖಿಫೀನ್ ಅಲ್ಲದ ಹೊಸ ವಿದ್ಯಾರ್ಥಿಗಳನ್ನು ಜಾಮಿಯಾ ಅಹ್ಮದಿಯಾದಲ್ಲಿ ಪ್ರವೇಶವನ್ನು ಪಡೆದು ಧಾರ್ಮಿಕ ಶಿಕ್ಷಣವನ್ನು ಪಡೆದುಕೊಂಡು ಸರಣಿಯ (ಜಮಾಅತ್ತಿನ) ಸೇವೆಗೆ ತಮ್ಮನ್ನು ತಾವು ಅರ್ಪಿಸಿಕೊಳ್ಳಬೇಕು.

ಜಾಮಿಯಾ ಅಹ್ಮದಿಯಾದಲ್ಲಿ 2022-2023ರ ಶೈಕ್ಷಣಿಕ ವರ್ಷಕ್ಕೆ ಪ್ರವೇಶ ಪ್ರಕ್ರಿಯೆಯು ಏಪ್ರಿಲ್ 2022 ರಿಂದ ಪ್ರಾರಂಭವಾಗಿದೆ. ಸದ್ಯದ ಪರಿಸ್ಥಿತಿಯಲ್ಲಿ ಜಾಮಿಯಾ ಅಹ್ಮದೀಯಕ್ಕೆ ಪ್ರವೇಶ ಬಯಸುವ ವಿದ್ಯಾರ್ಥಿಗಳ ಪ್ರವೇಶ ಪ್ರಕ್ರಿಯೆಯನ್ನು ಆನ್‌ಲೈನ್ ಮುಖಾಂತರ ನಡೆಸಲಾಗುತ್ತಿದೆ. ಆದ್ದರಿಂದ, ಜಾಮಿಯಾ ಅಹ್ಮದಿಯಕ್ಕೆ ಸೇರಲು ಬಯಸುವ ವಿದ್ಯಾರ್ಥಿಗಳು ವಖ್ಫೆನೌ ಭಾರತ್ (ನಝಾರತ್ ತಅ್‌ಲೀಮ್) ಅನ್ನು ಸಂಪರ್ಕಿಸಿ ಹಾಗೂ ಸಾಧ್ಯವಾದಷ್ಟು ಬೇಗ ಜಾಮಿಯಾ ಅಹ್ಮದಿಯಾ ಪ್ರವೇಶ ಪತ್ರವನ್ನು ಭರ್ತಿ ಮಾಡಿ ಅದನ್ನು ವಖ್ಫೆನೌ ಭಾರತ್ (ನಝಾರತ್ ತಅ್‌ಲೀಮ್)ನ ಕಚೇರಿಗೆ E-mail ಅಥವಾ ಪೋಷ್ಟ್ ಮೂಲಕ ಕಳುಹಿಸಬೇಕು. ಪ್ರವೇಶದ ಷರತ್ತುಗಳಿಗಾಗಿ ವಖ್ಫೆನೌ ಭಾರತ್ (ನಝಾರತ್ ತಅ್‌ಲೀಮ್)ನ ಇಲಾಖೆಯನ್ನು ಸಂಪರ್ಕಿಸಬಹುದು.

**(ಸದರ್ ಕೆರಿಯರ್ ಪ್ಲಾನಿಂಗ್ ಕಮೀಟಿ ವಖ್ಫೆ ನೌ ಭಾರತ)**

## *127 ನೇ ಜಲ್ಸಾ ಸಾಲಾನ ಖಾದಿಯಾನ್*

ಸಯ್ಯದನಾ ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು 127ನೇ (ವಾರ್ಷಿಕ ಸಮ್ಮೇಳನ) ಜಲ್ಸಾ ಸಾಲನ ಖಾದಿಯಾನಿಗೆ 23, 24 ಮತ್ತು 25ನೇ ಡಿಸೆಂಬರ್ 2022 (ಶುಕ್ರವಾರ, ಶನಿವಾರ ಮತ್ತು ಭಾನುವಾರ) ದ ದಿನಾಂಕಗಳ ಅನುಮತಿ ನೀಡಿದ್ದಾರೆ. ಎಲ್ಲಾ ಸದಸ್ಯರು ಇಂದಿನಿಂದಲೇ ದುಆ ಮಾಡಬೇಕಾಗಿ ಹಾಗೂ ಈ ಸಮ್ಮೇಳನದಲ್ಲಿ ಭಾಗವಹಿಸಲು ವಿನಂತಿ. ಅಲ್ಲಾಹನು ನಮಗೆಲ್ಲ ಈ ಸಮ್ಮೇಳನದಲ್ಲ ಭಾಗಿಯಾಗಲು ತೌಫೀಕ್ ನೀಡಲೀ. ಜಲ್ಸಾ ಸಾಲಾನ ಪ್ರತಿಯೊಂದು ವಿಷಯದಲ್ಲೂ ಅನುಗ್ರಹದಾಯಕವಾಗಲಿ ಅದೇ ರೀತಿ ಶುದ್ಧ ಆತ್ಮಗಳ ಮಾರ್ಗದರ್ಶನಕ್ಕೆ ಕಾರಣವಾಗಲಿ ಎಂದು ದುಆ ಮಾಡುತ್ತಾಯಿರಿ. **ಜಝಾಕುಮಲ್ಲಾಹ್.**

**(ನಾಝಿರ್ ಇಸ್ಲಾಹ್-ವ-ಇರ್‌ಶಾದ್ ಖಾದಿಯಾನ್)**

## ಖಾದಿಯಾನ್ ದಾರುಲ್ ಅಮಾನ್‌ನಲ್ಲಿ ವಾರ್ಷಿಕ ಇಜ್ತೆಮಾ ನಡೆಯುವ ದಿನಾಂಕಗಳು

ಸಯ್ಯುದನಾ ಹಝ್ರತ್ ಅಮೀರುಲ್ ಮೂಮಿನೀನ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಆಝೀಝ್‌ರವರು ಭಾರತದಲ್ಲಿ ಅಂಗ ಸಂಸ್ಥೆಗಳ (ಮಜ್ಲಿಸ್ ಅನ್ಸರುಲ್ಲಾ, ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ, ಲಜ್ನಾ ಇಮಾಇಲ್ಲಾ) ರಾಷ್ಟ್ರೀಯ ವಾರ್ಷಿಕ ಕೂಟಗಳನ್ನು (ಇಜ್ತೆಮಾ) 21, 22 ಮತ್ತು 23ನೇ ಅಕ್ಟೋಬರ್ 2022 ರಂದು (ಶುಕ್ರವಾರ, ಶನಿವಾರ, ಭಾನುವಾರ) ಆಯೋಜಿಸಲು ಅನುಮತಿ ನೀಡಿದ್ದಾರೆ.

ಎಲ್ಲಾ ಉಪ ಸಂಸ್ಥೆಗಳ ಸದಸ್ಯರು ಖಾದಿಯಾನಿನಲ್ಲಿ ಈ ಆಧ್ಯಾತ್ಮಿಕ ಪರಿಸರದಲ್ಲಿ ಆಯೋಜಿಸಲಾಗುವಂತಹ ಇಜ್ತೆಮಾಗಳಲ್ಲಿ ಪಾಲ್ಗೊಳ್ಳಲು ಇಂದಿನಿಂದಲೆ ತಯಾರಿ ಪ್ರಾರಂಭಿಸಿರಿ. ಈ ಇಜ್ತೆಮಾಗಳು ತರಬೇತಿಯ ಮುಖ್ಯ ಮೂಲವಾಗಿದೆ.

**(ಸದರ್ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಭಾರತ)**

EDITOR
TARIQ AHMED IDRIS.
Mobile : +91 9902678609
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613
Weekly **BADAR** Qadian
Distt: Gurdaspur (Pb.) INDIA Qadian - 143516
Postal Reg. No: 3000039689/2020-22 Vol No.03, Thursday, 30 June 2022, Issue No. 26

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.575/- (Per Issue: 10/- ) (WEIGHT: 20-50, grms / issue)

## ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಜರ್ಮನಿಯ ಪ್ರವಾಸ (ಮೇ, ಜೂನ್ 2015)

**(ಬದರ್ ಸಂಚಿಕೆ 25ರ ಉಳಿದ ಭಾಗ)**

ಮಂಗಳವಾರ ದಿನ Isenlohn ಮಸೀದಿಯ ಅಡಿಗಲ್ಲು ಹಾಕಲಾಗಿತ್ತು. ಅದು ಅಹ್ಮದಿಯಾ ಮುಸ್ಲಿಂ ಜಮಾಅತಿನ ಮಸೀದಿಯಾಗಿದೆ. ಈ ಮಸೀದಿಯ ಗುಂಬಝಿನ ವಿಸ್ತೀರ್ಣ 8 ಮೀಟರ್ ಆಗಿರುವುದು ಮತ್ತು ಅದರ ಗೋಪುರ 12 ಮೀಟರ್ ಆಗಿರುವುದು. ಈ ಅಡಿಗಲ್ಲು ಸಮಾರಂಭದಿಂದಾಗಿ ಜಮಾಅತಿನ ಸದಸ್ಯರು ತುಂಬಾ ಹರ್ಷಿತರಾಗಿದ್ದಾರೆ.

2010 ರಲ್ಲಿ ಅಹ್ಮದಿಯಾ ಜಮಾಅತ್ ಜರ್ಮನಿ ಮಸೀದಿ ನಿರ್ಮಿಸಲು ಅರ್ಜಿ ಕೊಟ್ಟಿತ್ತು. ಆ ಸಮಯ ವಿರೋಧ ವ್ಯಕ್ತವಾಯಿತು. ಆದರೆ ವಿರೋಧಿಗಳ ಸಂಖ್ಯೆ ಕಡಿಮೆಯಾಗಿತ್ತು. ನ್ಯಾಯಾಲಯದಲ್ಲೂ ಪರಿಹಾರಕ್ಕಾಗಿ ಕಾರ್ಯ ನಡೆಯಿತು. ಆದರೆ ಅದು ರದ್ದುಪಡಿಸಲಾಯಿತು.

ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಬಾಂಧವರು isenlohn ಅನ್ನು ತನ್ನ ಜನ್ಮಸ್ಥಳವೆಂದು ಭಾವಿಸುತ್ತಾರೆ. ಅವರು ಇವರ ಧರ್ಮಗಳನ್ನು ಸಹ ಆಹ್ವಾನಿಸುತ್ತಾರೆ ಮತ್ತು ಶಾಂತಿಯ ಶಿಕ್ಷಣ ಪ್ರಸ್ತುತಪಡಿಸುತ್ತಾರೆ. ಮಸೀದಿಯ ಸಂಪೂರ್ಣ ಖರ್ಚು ಚಂದಾದಿಂದಲೇ ನಿರ್ವಹಿಸಿಕೊಳ್ಳುತ್ತಾರೆ.

**10 ಜೂನ್ 2015 ಬುಧವಾರ, ಜರ್ಮನಿಯಿಂದ ನಿರ್ಗಮನ ಮತ್ತು ಲಂಡನ್‌ಗೆ ಆಗಮನ**

* ಮುಂಜಾನೆ 4 ಗಂಟೆಗೆ, ಹುಝೂರೆ ಅನ್ವರ್ (ಅಬಿಅ) ಮಸ್ಜಿದ್ ಬಿಶಾರತ್ ಓಸ್ನಾಬರೂಕ್‌ನಲ್ಲಿ ಫಝುರ್ ನಮಾಝ್ ನಿರ್ವಹಿಸಿದರು. ನಮಾಝ್ ನಿರ್ವಹಣೆಯ ನಂತರ ಹುಝೂರ್ ತನ್ನ ವಸತಿ ಭಾಗಕ್ಕೆ ತೆರಳಿದರು.

* ಇಂದಿನ ಕಾರ್ಯಕ್ರಮದನ್ವಯ ಜರ್ಮನಿ ಓಸ್ನಾಬರೂಕ್‌ನಿಂದ ಲಂಡನ್‌ಗೆ (ಬ್ರಿಟಾನಿಯಾ) ನಿರ್ಗಮಿಸಬೇಕಾಗಿತ್ತು. ಸ್ಥಳೀಯ ಜಮಾಅತ್‌ನಿಂದ ಪುರುಷರು ಸ್ತ್ರೀಯರು, ಬಾಲಕ-ಬಾಲಕಿಯರು, ವೃದ್ಧರು ತಮ್ಮ ಪ್ರೀತಿಯ ನೇತಾರರನ್ನು ಬೀಳ್ಕೊಡಲು ಮುಂಜಾನೆಯಿಂದಲೇ ಮಸೀದಿಯ ಹೊರಗಿನ ಆವರಣದಲ್ಲಿ ಸೇರತೊಡಗಿದ್ದರು.

* ಮುಂಜಾನೆ 10 ಗಂಟೆ 45 ನಿಮಿಷಕ್ಕೆ ಹುಝೂರ್ ಅನ್ವರ್ ತಮ್ಮ ವಸತಿ ಪ್ರದೇಶದಿಂದ ಹೊರಗೆ ಬಂದರು. ಸಣ್ಣ ಬಾಲಕ ಬಾಲಕಿಯರು ತಂಡದ ರೂಪದಲ್ಲಿ ಬೀಳ್ಕೊಡುವ ಗೀತೆಗಳನ್ನು ಹಾಡುತ್ತಿದ್ದರು.

ಹುಝೂರೆ ಅನ್ವರ್ ಬಾಲಕ ಬಾಲಕಿಯರಿಗೆ ಚಾಕ್ಲೇಟುಗಳನ್ನು ನೀಡಿದರು. ಅನಂತರ ಪ್ರಮಾಣ ಬೆಳೆಸುವ ಮುನ್ನ ದುಆ ಮಾಡಿಸಿದರು.

* ದುಆ ಆದ ನಂತರ ಹುಝೂರೆ ಅನ್ವರ್ ಎಲ್ಲರಿಗೂ ಸಲಾಂ ಹೇಳಿ ಪ್ರಯಾಣ ಬೆಳೆಸಿದರು. ಪುರುಷ ಸ್ತ್ರೀಯರು ಸೇರಿ ನಿರಂತರವಾಗಿ ತಮ್ಮ ಕೈ ಬೀಸುತ್ತಾ ತನ್ನ ಪ್ರೀತಿಯ ಇಮಾಮರಿಗೆ ವಿದಾಯ ಕೋರುತ್ತಿದ್ದರು. ಹಲವರ ಕಣ್ಣುಗಳು ತೇವಗೊಂಡಿದ್ದವು. ಮತ್ತು ಈ ವಿರಹದ ಕ್ಷಣಗಳು ಅವರಿಗೆ ಕಠಿಣ ಎನಿಸುತ್ತಿದ್ದವು.

* ಓಸ್ನಾಬರೂಕ್‌ನಿಂದ ಫ್ರಾನ್ಸ್‌ನ ಹಡಗು ನಿಲ್ದಾಣ Calais ರವರೆಗಿನ ಪ್ರಯಾಣ 580 ಕಿ.ಮೀರದ್ದಾಗಿತ್ತು. ರಸ್ತೆಯಲ್ಲಿ ಹಾಲೆಂಡ್ ಮತ್ತು ಬೆಲ್ಜಿಯಂ ಮೂಲಕ ಹಾದು ಹೋಗಬೇಕಾಗಿತ್ತು. ಸುಮಾರು 360 ಕಿ.ಮೀ ಬಸ್ಸಿನ ಪ್ರಯಾಣದ ನಂತರ ಮಧ್ಯಾಹ್ನ ಸಮಯಕ್ಕೆ ಕಾರ್ಯಕ್ರಮದನ್ವಯ ಬೆಲ್ಜಿಯಂನಲ್ಲಿ ರಸ್ತೆಯಲ್ಲಿರುವ Armst ಸ್ಥಳದ ಒಂದು ರೆಸ್ಟೋರೆಂಟಿನಲ್ಲಿ ಮಧ್ಯಾಹ್ನದ ಊಟಕ್ಕಾಗಿ, ಜರ್ಮನಿ ಜಮಾಅತಿನ ಖುದ್ದಾಮರ ಒಂದು ತಂಡ ಅವರ ಬರುವಿಕೆಯ ಮುಂಚಿತವಾಗಿಯೇ ಊಟದ ಮತ್ತು ನಮಾಝ್ ನಿರ್ವಹಣೆಗೆ ವ್ಯವಸ್ಥೆ ಸಿದ್ಧಪಡಿಸಿ ಕಾಯುತ್ತಿದ್ದರು.

* ಅದೇ ಹೋಟೆಲಿನ ಒಂದು ಭಾಗದಲ್ಲಿ ನಮಾಝ್ ನಿರ್ವಹಣೆಗಾಗಿ ವ್ಯವಸ್ಥೆ ಮಾಡಲಾಗಿತ್ತು. ಹುಝೂರೆ ಅನ್ವರ್(ಅಬಿಅ) ಝುಹರ್ ಅಸರ್ ನಮಾಝುಗಳನ್ನು ಜಮಾ ಮಾಡಿ ನಿರ್ವಹಿಸಿಕೊಟ್ಟರು. ಅನಂತರ ಊಟ ಮುಗಿಸಿಕೊಂಡು 3 ಗಂಟೆಗೆ ಇಲ್ಲಿಂದ ಹೊರಡುವ ಮುಂಚೆ ಆತ್ಮೀಯವಾಗಿ ಜರ್ಮನಿಯಿಂದ ಬಂದ ವರಿಗೆ ಹಸ್ತಲಾಘವದ ಭಾಗ್ಯ ದಯಪಾಲಿಸಿದರು.

* ಅಹ್ಮದಿಯಾ ಜಮಾಅತ್ ಜರ್ಮನಿಯ ಅಮೀರರಾದ ಅಬ್ದುಲ್ಲ ವಾಗಸ್ ಹೌಝುರ್ ಸಾಹಿಬ್, ಮುಬಲ್ಲಿಗ್ ಇನ್‌ಚಾರ್ಜ್ ಜರ್ಮನಿ ಮುಕರ್ರಮ್ ಹೈದರ್ ಅಲಿ ಝುಫರ್ ಸಾಹಿಬ್, ಕಾರ್ಯದರ್ಶಿ ಮುಕರ್ರಮ್ ಇಲ್ಯಾಸ್ ಅಹ್ಮದ್ ಮಜೂರ್ ಸಾಹಿಬ್, ಸಹಾಯಕ ಜಂಟಿ ಕಾರ್ಯದರ್ಶಿ ಮುಕರ್ರಮ್ ಯಾಹ್ಯಾ ಸಾಹಿಬ್, ಮುಕರ್ರಮ್ ಅಬ್ದುಲ್ಲಾ ಸುಪ್ರಾ ಸಾಹಿಬ್ ಅಧ್ಯಕ್ಷರು ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಜರ್ಮನಿ ಮತ್ತು ಅವರ ಜೊತೆಯಲ್ಲಿ ಆಗಮಿಸಿದ ರಕ್ಷಣಾ ತಂಡ ಹುಝೂರೆ ಅನ್ವರ್‌ರೊಂದಿಗೆ ಹಸ್ತಲಾಘವ ಪಡೆಯುವ ಭಾಗ್ಯ ಪಡೆದರು. ಈ ಸಂದರ್ಭದಲ್ಲಿ ಆ ಎಲ್ಲ ಬಾಂಧವರು ಹುಝೂರೆ ಅನ್ವರ್ ಅವರೊಂದಿಗೆ ಭಾವಚಿತ್ರ ತೆಗೆಯಿಸಿಕೊಳ್ಳುವ ಭಾಗ್ಯ ಪಡೆದರು.

* ಮೂರು ಗಂಟೆಗೆ ಇಲ್ಲಿಂದ ಫ್ರಾನ್ಸ್‌ನ ಹಡಗು ನಿಲ್ದಾಣ Calus ನತ್ತ ಪ್ರಯಾಣ ಪ್ರಾರಂಭವಾಯಿತು. ಇನ್ನು 125 ಕಿ.ಮೀ ಹೆಚ್ಚಿನ ದೂರ ಪ್ರಯಾಣಿಸಿದ ನಂತರ ಬೆಲ್ಜಿಯಂ ಸರಹದ್ದು ಪಾರು ಮಾಡಿ ಫ್ರಾನ್ಸ್‌ನಲ್ಲಿ ಪ್ರವೇಶ ಮಾಡಿದರು. ಇಲ್ಲಿಂದ Culais 95 ಕಿ.ಮೀ ದೂರದಲ್ಲಿದೆ.

* ಆರು ಗಂಟೆಗೆ ಚಾನಲ್ ಟನಲ್ ತಲುಪಿದರು. ಜರ್ಮನ್ ನಿಂದ ಜೊತೆಯಲ್ಲಿ ಬಂದ ಬಾಂಧವರು ಮತ್ತು ಖುದ್ದಾಮ್ ರಕ್ಷಣ ತಂಡ ಹುಝೂರೆ ಅನ್ವರ್ ಅವರಿಗೆ ಚಾನಲ್ ಟವರ್‌ವರೆಗೆ ಬೀಳ್ಕೊಟ್ಟು ವಿದಾಯ ಕೋರುತ್ತ, ಹುಝೂರ್ ಅನ್ವರ್ ಅವರಿಗೆ ಲಂಡನ್‌ಗೆ ವಿದಾಯ ಕೋರಿ ಮರಳಿ ಫ್ರೆಂಕ್‌ಫರ್ಟ್ (ಜರ್ಮನಿ) ಗೆ ಪ್ರಯಾಣ ಬೆಳೆಸಿದರು.

* ಪಾಸ್‌ಪೋರ್ಟ್, ಇಮಿಗ್ರೇಶನ್ ಮತ್ತು ಇತರ ದಸ್ತಾವೇಜುಗಳ ವಿಲೆವಾರಿಯ ನಂತರ ತಂಡದ ವಾಹನಗಳು ವಿಶೇಷ ಪಾರ್ಕಿಂಗ್ ಕ್ಷೇತ್ರಕ್ಕೆ ಬಂದು ನಿಲ್ಲಿಸಲಾಯಿತು. ರೈಲು ತನ್ನ ಸಮಯಕ್ಕೆ ಸರಿಯಾಗಿ 6 ಗಂಟೆ 50 ನಿಮಿಷಕ್ಕೆ Calaus ನಿಂದ ಬ್ರಿಟಾನಿಯಾದ ಬಂದರು ನಗರ, Dover ನತ್ತ ಹೊರಟಿತು. ಸುಮಾರು ಅರ್ಧಗಂಟೆಯ ಪ್ರಯಾಣದ ನಂತರ ರೈಲು ಚಾನಲ್ ಟವರ್ ಪಾರು ಮಾಡಿ Dover ಸಮೀಪವಿರುವ ಬ್ರಿಟಾನಿಯಾ ಭೂಮಿಯಲ್ಲಿ ಪ್ರವೇಶಿಸಿತು. ಮತ್ತು ತನ್ನ ವಿಶಿಷ್ಠ ನಿಲ್ದಾಣದಲ್ಲಿ ತಂಗಿತು. ಸುಮಾರು 10 ನಿಮಿಷದ ವಿರಾದ ನಂತರ ಫ್ರಾನ್ಸ್ ಸಮಯಾನುಸಾರ 7 ವರೆ ಗಂಟೆಗೆ ಮತ್ತು ಬ್ರಿಟಾನಿಯಾ ಸಮಯದನ್ವಯ ಆರೂವರೆ ಗಂಟೆಗೆ ತಂಡದ ವಾಹನಗಳು ರೈಲಿನಿಂದ ಹೊರಬಂದವು ಮತ್ತು ವಾಹನಗಳ ಮೂಲಕ ಪ್ರಯಾಣ ಪ್ರಾರಂಭವಾಯಿತು.

* ಯು.ಕೆ. ಯ ಅಮೀರ್ ಸಾಹೇಬ್, ಮುಕರ್ರಮ್ ಮುಬಲ್ಲಿಗ್ ಇನ್‌ಚಾರ್ಜ್ ಸಾಹಿಬ್, ಯು.ಕೆ. ತನ್ನ ರಕ್ಷಣಾ ತಂಡದೊಂದಿಗೆ ಮತ್ತು ಇತರ ಜಮಾಅತಿನ ಹುದ್ದೆದಾರರು ಹುಝೂರೆ ಅನ್ವರ್ ಅವರನ್ನು ಸ್ವಾಗತಿಸಲು ಅಲ್ಲಿ ಉಪಸ್ಥಿತರಿದ್ದರು.

ಸುಮಾರು ಒಂದೂವರೆ ತಾಸಿನ ನಂತರ ಸಂಜೆ 8 ಗಂಟೆಗೆ ಮಸ್ಜಿದ್ ಫಝುಲ್ ಲಂಡನ್‌ಗೆ ಆಗಮಿಸಿದರು. ಅಲ್ಲಿ ಜಮಾಅತ್‌ನ ಪುರುಷ ಹಾಗೂ ಸ್ತ್ರೀಯರ ಒಂದು ದೊಡ್ಡ ಸಂಖ್ಯೆ ತಮ್ಮ ಪ್ರೀತಿಯ ನೇತಾರರಿಗೆ "ಅಹಲಂ ವ ಸಹಲಂ ವ ಮರಹಬಾ" ಎಂಬ ಸ್ವಾಗತ ಕೋರಿದರು.

* ಹುಝೂರೆ ಅನ್ವರ್(ಅಬಿಅ) ಪ್ರೀತಿಯಿಂದ ತನ್ನ ಕೈ ಬೀಸಿ ಎಲ್ಲರಿಗೂ ಅಸ್ಸಲಾಮು ಅಲೈಕುಂ ಎಂದು ಹೇಳಿ ತಮ್ಮ ವಸತಿ ನಿಲಯಕ್ಕೆ ತೆರಳಿದರು.

ಹೀಗೆ ಹುಝೂರೆ ಅನ್ವರ್ ಅವರ ಈ ಅನುಗ್ರಹಪೂರ್ಣ ಪ್ರವಾಸ ಅಲ್ಲಾಹನ ಅತ್ಯಂತ ಕೃಪೆ ಹಾಗೂ ಅನುಗ್ರಹಗಳೊಂದಿಗೆ ಕೊನೆಗೊಂಡಿತು. ಅಲ್ಹಮ್ದು ಲಿಲ್ಲಾಹಿ ಅಲಾ ಝಾಲಿಕ್. **(ಮುಂದುವರಿಯುವುದು)**

**ಪ್ರೀತಿ ಎಲ್ಲರಲ್ಲೂ, ದ್ವೇಶವಿಲ್ಲ ಯಾರಲ್ಲೂ**
**ಇನ್ಸಾನಿಯತ್ ಝಿಂದಾಬಾದ್, ಮಾನವೀಯತೆ ಚಿರಕಾಲ ಬಾಳಲಿ**

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**
**NATIONAL TOLL FREE : 1800-103-2131**
**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**
**(ಶುಕ್ರವಾರ ರಜೆ)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.